ಯಂತ್ರಗಳು

[ಮಂತ್ರಗಳ ಇನ್ನೊಂದು ಮಾಧ್ಯಮ]

ಸಾ. ಕೃ. ರಾಮಚಂದ್ರ ರಾವ್

ತಂತ್ರ ಚಿಂತನ ಸರಣಿ - 2

ಯಂತ್ರಗಳು

(ಮಂತ್ರಗಳ ಇನ್ನೊಂದು ಮಾಧ್ಯಮ)

ಇಂಗ್ಲೀಷ್ ಮೂಲ

ಸಾ. ಕೃ. ರಾಮಚಂದ್ರ ರಾವ್

ಅನುವಾದ

ಬೇಳೂರು ಸುದರ್ಶನ

ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ

ಬೆಂಗಳೂರು - 560 011

ಪ್ರಕಾಶಕರು :
ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ಇನ್‌ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್
63, 13ನೆ ಮುಖ್ಯ ರಸ್ತೆ, 4ನೆ ಬ್ಲಾಕ್, ಜಯನಗರ ಪೂರ್ವ
ಬೆಂಗಳೂರು - 560 011
ದೂರವಾಣಿ : 6556 315, 31833221(ಮೊಬೈಲ್)
ಇ ಮೇಲ್ : saksivc@vsnl.net

© ಲೇಖಕರು

ಮೊದಲ ಆವೃತ್ತಿ : 2003

ಬೆಲೆ : ರೂ. 30/-

ಪುಟಗಳು : viii + 88

ಮುಖಪುಟ ವಿನ್ಯಾಸ : ಟಿ.ವಿ. ಶಂಕರ್

ಮುದ್ರಕರು : ಶ್ರೀರಂಗ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಬೆಂಗಳೂರು-560 019. ದೂರವಾಣಿ : 6524757

ISBN : 81-7994-012-8

'YANTRAGALU' [Mystic Designs] Kannada. Original in English by S.K. Ramachandra Rao, translated by : Belur Sudarshan. Published by : Sri Aurobindo Kapali Sastry Institute of Vedic Culture, # 63, 13th Main, 4th Block, Jayanagar East, Bangalore-11. First Edition : 2003, Pages : viii+88, Price: Rs.30.

Printed at : Sriranga Printing and Publishing House
Bangalore-560019. Ph : 6524757

ಸೃಜನಶೀಲ ಜೀವನ ಮಾಲೆ

ಮನುಜರೆಲ್ಲರೂ ಸಾಮರಸ್ಯಪೂರ್ಣ, ಪ್ರಗತಿಪರ ಹಾಗೂ ಸಂತೃಪ್ತ ಜೀವನ ಸಾಗಿಸಬೇಕು. ಇದಕ್ಕಾಗಿ ಅಗತ್ಯ ಇರುವ ವೈವಿಧ್ಯಮಯ ಜ್ಞಾನವನ್ನು ಪ್ರಸಾರ ಮಾಡುವಂಥ ಪುಸ್ತಕಗಳನ್ನು ಪ್ರಕಟಿಸುವುದು ಈ ಮಾಲೆಯ ಉದ್ದೇಶವಾಗಿದೆ. ಇಲ್ಲಿ ಆಯ್ಕೆ ಮಾಡಿದ ವಿಷಯಗಳಲ್ಲಿ ಕೆಲವು : ಮನೋವೈಜ್ಞಾನಿಕ ಹಾಗೂ ಭಾವನಾತ್ಮಕ ಸಂಗತಿಗಳು, ಸ್ಫೂರ್ತಿ ಹಾಗೂ ಅಂತಃಸ್ಫೂರ್ತಿ, ಸಂತೋಷ ಹಾಗೂ ಅದನ್ನು ಪಡೆದುಕೊಳ್ಳುವ ಬಗೆ, ಸೌಂದರ್ಯದ ಆರಾಧನೆ, ಪ್ರಾಣಾಯಾಮವೂ ಸೇರಿದಂತೆ ವಿವಿಧ ಆರೋಗ್ಯ ಶಾಸ್ತ್ರಗಳು, ಕಾರ್ಯದಲ್ಲಿ ಪರಿಪೂರ್ಣತೆ, ರಸಾಭಿಜ್ಞಾನ, ವಿವಿಧ ಯೋಗಗಳು, ಹುಟ್ಟು ಮತ್ತು ಸಾವು, ಗಣಿತ ಶಾಸ್ತ್ರದ ಉಗಮ, ನಿದ್ರೆ ಹಾಗೂ ಕನಸು ಇತ್ಯಾದಿ. ಇಲ್ಲಿನ ಜ್ಞಾನವನ್ನು ವೇದಸಂಹಿತೆ, ಉಪನಿಷತ್‌ಗಳು, ತಂತ್ರಶಾಸ್ತ್ರ, ಭಗವದ್ಗೀತೆ ಹಾಗೂ ಆಧುನಿಕ ದಾರ್ಶನಿಕರಾದ ಶ್ರೀ ಅರೋಬಿಂದೊ, ಶ್ರೀ ಮಾತಾಜಿ, ಶ್ರೀ ರಮಣ ಮಹರ್ಷಿಗಳು ಮುಂತಾದವರ ಬರಹಗಳಿಂದ ಶೇಖರಿಸಲಾಗಿದೆ.

ಈ ಹಿಂದು 'ಧಾರ್ಮಿಕ' ಗ್ರಂಥಗಳಲ್ಲಿ ಇಂಥ ಮಹತ್ವಪೂರ್ಣವಾದ ಜ್ಞಾನ ದೊರಕಬಲ್ಲದೆ ಎಂಬುದಾಗಿ ಯಾರಾದರೂ ವಿಚಾರಿಸಬಹುದು. 'ಹೌದು' ಎಂಬುದು ಇದಕ್ಕೆ ಪ್ರತಿಧ್ವನಿಯಂತೆ ದೊರಕುವ ಉತ್ತರವಾಗಿದೆ. ಜೀವನದ ಎಲ್ಲ ಸಂಗತಿಗಳನ್ನೂ ಸಮರಸಗೊಳಿಸಬಹುದು ಹಾಗೂ ದೈವೀಮಯಗೊಳಿಸಬಹುದು ಎಂಬುದನ್ನು ವೇದ ಹಾಗೂ ಉಪನಿಷತ್‌ಗಳ ಋಷಿಗಳು ನಂಬಿದ್ದರು. ಅವರು ಜೀವನವನ್ನು ಆಧ್ಯಾತ್ಮಿಕ ಜೀವನ, ಭೌತಿಕ ಜೀವನ ಹೀಗೆ ಕಟ್ಟುನಿಟ್ಟಾಗಿ ಪ್ರತ್ಯೇಕಿಸಿರಲಿಲ್ಲ. ಈ ಪ್ರತ್ಯೇಕತೆ ಬೌದ್ಧ ಹಾಗೂ ಅದರ ನಂತರ ಉದಯಿಸಿದ ಪಂಥಗಳಲ್ಲಿ ಕಂಡುಬರುತ್ತದೆ. ಮನಷ್ಯ ನಿರ್ಮಿತ ಪ್ರತಿಯೊಂದು ಸಿದ್ಧಾಂತ ಅಥವಾ ಜ್ಞಾನದ ಶಾಖೆ ಮೂರು ಮುಖಗಳಿಂದ ಕೂಡಿರಬೇಕು : ಸತ್ಯಂ, ವೈಶಿಷ್ಟ್ಯತೆ ಅಥವಾ ಸೃಜನಾತ್ಮಕ ಮುಖ; ಶಿವಂ, ಶುಭಕಾರಕ ಅಥವಾ ಆನಂದಮಯ; ಸುಂದರಂ, ಸೌಂದರ್ಯ, ಪರಿಪೂರ್ಣತೆಯೆಡೆಗೆ ಕೊಂಡೊಯ್ಯಲು ಸಮರ್ಥವಾಗಿರುವ ವೈಶ್ವಿಕ ಶಕ್ತಿಗಳೊಡನೆ ಒಂದು ಸಂಪರ್ಕ ಏರ್ಪಡಿಸಲಾಗದ ಯಾವ ಕ್ರಿಯೆಗಳೂ ಸಮಗ್ರ ಎನಿಸಲಾರವು ಎಂಬುದು ಋಷಿಗಳ ಅಭಿಮತವಾಗಿತ್ತು.

ನಮ್ಮ ಪ್ರಕಟಣೆಗಳ ಓದುಗರಲ್ಲಿ ಹಿಂದೂಶಾಸ್ತ್ರ ಗ್ರಂಥಗಳು ಕೇವಲ ಮೋಕ್ಷ ಮತ್ತು ಪರಲೋಕಗಳ ಬಗ್ಗೆ ಹೇಳುತ್ತವೆ, ಅದರಲ್ಲಿ ಈ ಪ್ರಪಂಚದ ಬಗ್ಗೆ ಆಸಕ್ತಿ ಹುಟ್ಟಿಸುವ ವಿಚಾರಗಳನ್ನು ಹೇಳೇ ಇಲ್ಲ ಎಂದು ಭಾವಿಸುವವರಿದ್ದಾರೆ. ಪಶ್ಚಿಮದ ಲೇಖಕರು ಆರೋಗ್ಯ ಮತ್ತು ಮಾನಸಿಕ ನೆಮ್ಮದಿಗೆ ಸಂಬಂಧಿಸಿದಂತೆ ಓದಿಕೊಂಡು ಅದಕ್ಕಿಂತಲೂ ಗಹನವಾಗಿ, ಅತಿಶಯೋಕ್ತಿ ಇಲ್ಲದಂತೆ ಈ ಕುರಿತು ಭಾರತೀಯ ಪರಂಪರೆಯ ಉತ್ತರವೇನು ಎಂಬುದನ್ನು

ತಿಳಿಯಲು ಉತ್ಸುಕರಾದವರಿದ್ದಾರೆ. ಇದಕ್ಕೂ ಮುಂದುವರೆದು ಯೋಗ ಮತ್ತು ಆಧ್ಯಾತ್ಮದ ವಿಚಾರಗಳಲ್ಲಿ ಗಂಭೀರವಾದ ಅಭೀಪ್ಸೆಯನ್ನು ಇಟ್ಟುಕೊಂಡಂತಹ ಸಂಸ್ಕೃತ ಭಾಷೆಯ ಪರಿಚಯ ಇಲ್ಲದವರ ಮೂರನೆಯ ವರ್ಗವೂ ಇದೆ.

ಭಾರತೀಯ ಸಂಸ್ಕೃತಿಯಲ್ಲಿ ಕೇವಲ ಪರಲೋಕದ ಬಗ್ಗೆ ಮಾತ್ರವೇ ಹೇಳಿಲ್ಲ. ಪರಂಪರೆಯ ಹಿಂದಿನ ವಕ್ತಾರರಲ್ಲಿ ಹಲವರು ಈ ರೀತಿ ವ್ಯಾಖ್ಯಾನ ಮಾಡಿದ್ದರಿಂದ ಈ ಅಪಕಲ್ಪನೆ ಬೇರೂರಿದೆ. ಭಾರತೀಯ ಸಂಸ್ಕೃತಿಯು ಜೀವನವನ್ನು ಪರಮಾತ್ಮನ ಪ್ರಸಾದ ಎಂದು ಸ್ವೀಕರಿಸಿ ಅದರಲ್ಲಿ ಆನಂದ, ಸೌಂದರ್ಯ ಮತ್ತು ಮಂಗಳವನ್ನು ಕಾಣುತ್ತಲೇ ಬಂದಿದೆ. ನಮ್ಮ ಸಂಸ್ಕೃತಿಯ ಜೀವಂತಿಕೆ ಮತ್ತು ಅದರ ಇಂದಿನ ಪ್ರಸ್ತುತತೆ, ಪ್ರಾಯೋಗಿಕ ಅನ್ವಯಗಳನ್ನು ಆಧುನಿಕ ಓದುಗರ ಮುಂದಿಡುವುದೇ ಸೃಜನಶೀಲ ಜೀವನ ಮಾಲೆಯ ಉದ್ದೇಶವಾಗಿದೆ.

-ಪ್ರಕಾಶಕರು

ತಂತ್ರದ ಹೊಸ್ತಿಲಿನಲ್ಲಿ

ಆಧುನಿಕ ಸಮಾಜದಲ್ಲಿ ಆಧ್ಯಾತ್ಮದ ಬಗ್ಗೆ ಆಸಕ್ತಿ ಇದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು ಸಾಕಷ್ಟಿದ್ದಾರೆ. ಯೋಗ, ಪ್ರಾಣಾಯಾಮ, ಧ್ಯಾನ, ವಿವಿಧ ಧ್ಯಾನ ಚಿಕಿತ್ಸೆಗಳೂ ಪ್ರಚಲಿತವುಂಟು. ಇದಲ್ಲದೆ ತಂತ್ರದ ಬಗ್ಗೆ ವಿಶೇಷ ಆಸಕ್ತರಿದ್ದಾರೆ. ಅದರ ಹೆಸರು ಮಾತ್ರ ಕೇಳಿದವರಿದ್ದಾರೆ. ತಂತ್ರದ ಹೆಸರಿನಲ್ಲಿ ತಮಗೆ ತಿಳಿದದ್ದನ್ನೆಲ್ಲ ಹೇಳಿ ಇದೆಲ್ಲ ತಂತ್ರ ಎಂದು ಹೇಳುವ ಅಭಿನವ 'ತಾಂತ್ರಿಕ'ರೂ ಹೇರಳವಾಗಿದ್ದಾರೆ. ಈ ಸೃಷ್ಟಿಗೊಂದು ಅರ್ಥವಿದೆ, ಉದ್ದೇಶವಿದೆ. ಅದೆಂದರೆ ಎಲ್ಲೆಡೆ ದೈವೀಕತೆಯ ಸಾಕ್ಷಾತ್ಕಾರವನ್ನು ಸಾಧ್ಯಗೊಳಿಸುವುದು. ತಂತ್ರ ಬದುಕನ್ನು ಲೌಕಿಕ, ಆಧ್ಯಾತ್ಮಿಕ ಎಂದು ಗೆರೆಮಾಡಿ ತೋರಿಸಿಲ್ಲ. ಏಕೆಂದರೆ ಇಡೀ ಬದುಕೆ ಪವಿತ್ರ, ಸುಂದರ, ದೈವಿಕ, ಬಳಸಲು ಯೋಗ್ಯ ಎಂಬುದು ತಂತ್ರದ ಮುಖ್ಯ ನಿಲುವು.

ಇಂದಿನ ಆಧುನಿಕ ಬದುಕಿನಲ್ಲಿ ತಂತ್ರದ ಬಗ್ಗೆ ಮೂಲಗ್ರಂಥಗಳನ್ನು ಓದುವುದು ಕಷ್ಟ. ಆ ಗ್ರಂಥಗಳು ದೊರಕುವುದೂ ಕಷ್ಟ. ಆದರೆ ತಂತ್ರವನ್ನು ಅರಗಿಸಿಕೊಂಡವರು, ಅಳವಡಿಸಿಕೊಂಡವರು ನಮ್ಮ ನಡುವೆ ಇದ್ದಾರೆ, ಆಗಿಹೋಗಿದ್ದಾರೆ. ಅಭಿನವಗುಪ್ತಪಾದ, ಶಂಕರಾಚಾರ್ಯ, ಶ್ರೀ ಅರೋಬಿಂದೊ, ರಮಣಮಹರ್ಷಿ, ವಾಸಿಷ್ಠಗಣಪತಿ ಮುನಿ, ಕಪಾಲಿ ಶಾಸ್ತ್ರಿ, ಶ್ರೀಮಾತೆ, ಎಂ.ಪಿ. ಪಂಡಿತ್, ಜಾನ್‌ವುಡ್ರೋಫ್.... ಅವರ ಬಾಳಿನ ಬೆಳಕು, ಸಾರ, ಕೆನೆ ಕೆಲವು ಗ್ರಂಥಗಳ ರೂಪದಲ್ಲಿ ನಮ್ಮೆದುರು ಇದೆ. ಅದರಲ್ಲಿ ಇಂದಿನ ಬದುಕಿಗೆ ಬೇಕಾದ ಅನುಭವ, ವಿವೇಕಗಳ ಭಂಡಾರವಿದೆ. ಈ 'ಭುವನದ ಭಾಗ್ಯ'ವನ್ನು ಇಂದಿನವರು ತಮ್ಮದಾಗಿಸಿಕೊಳ್ಳಲಿ ಎಂಬುದು ನಮ್ಮ ಆಶಯ. ಅದಕ್ಕಾಗಿ ಈ 'ತಂತ್ರ ಚಿಂತನ ಸರಣಿ'.

ತಂತ್ರಗಳ ಸಾಮಾನ್ಯ ಪರಿಚಯ, ತಂತ್ರ-ಮಂತ್ರ-ಯಂತ್ರಗಳ ಸಂಬಂಧ, ಯಂತ್ರಗಳು ಮತ್ತು ಚಕ್ರಗಳ ಪ್ರಯೋಜನಗಳು, ತಂತ್ರ ಸಾಧನೆಯ ಮಾರ್ಗಗಳು, ಕೆಲವು ಮಹಾನುಭಾವರ ಅನುಭವಗಳು, ದೈಹಿಕ-ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯದ ವಿಕಾಸದಲ್ಲಿ ತಂತ್ರದ ಪಾತ್ರ ಈ ಕೆಲವು ವಿಷಯಗಳ ಮೇಲೆ ಬೆಳಕು ಬೀರುವುದೆ 'ತಂತ್ರ ಚಿಂತನ ಸರಣಿ'ಯ ಉದ್ದೇಶ. ಸರಳ ಭಾಷೆಯಲ್ಲಿ ತಂತ್ರಗಳ ಪ್ರಾಥಮಿಕ ಪರಿಚಯ ಮಾಡಿಕೊಡುವುದು ನಮ್ಮ ಗುರಿ.

ಈ ಪ್ರಯತ್ನದ ಎರಡನೆ ಕುಸುಮ 'ಯಂತ್ರಗಳು'. ಯಂತ್ರಗಳು ತಂತ್ರಶಾಸ್ತ್ರದ ಒಂದು ಭಾಗ. ಯಂತ್ರಗಳ ನೆಲೆ-ಹಿನ್ನೆಲೆ, ಅವುಗಳ ರಹಸ್ಯಾರ್ಥ, ಬಳಕೆ, ಪೂಜಾ ವಿಧಾನ ಮುಂತಾದವು ಈ ಪುಸ್ತಕದಲ್ಲಿ ಒಳಗೊಂಡಿವೆ. ಐದನೆ ಅಧ್ಯಾಯವು ವಿವಿಧ ಯಂತ್ರಗಳ ಚಿತ್ರಗಳು ಹಾಗೂ ಅವುಗಳನ್ನು ಪ್ರಭಾವೀಗೊಳಿಸಲು ಬಳಸುವ ಮಂತ್ರಗಳಿಗೆ ಮೀಸಲಾಗಿದೆ. ಯೋಗ ಶಾಸ್ತ್ರದಲ್ಲಿ ಚಕ್ರಗಳಿಗೆ ವಿಶೇಷ ಸ್ಥಾನವಿದೆ. ಚಕ್ರ ಎಂದರೇನು, ಚಕ್ರಗಳು ಹಾಗೂ ಯಂತ್ರಗಳ ನಡುವಿನ ಸಂಬಂಧ ಕುರಿತು ಲೇಖಕರೇ ಬರೆದ ಇಂಗ್ಲೀಷ್ ಲೇಖನದ ಅನುವಾದವನ್ನು ಅನುಬಂಧವಾಗಿ ಜೋಡಿಸಿದ್ದೇವೆ.

ಈ ಪುಸ್ತಕವನ್ನು ಪ್ರಕಟಿಸಲು ಅನುಮತಿ ನೀಡಿದ ಪ್ರೊ. ಸಾ. ಕೃ. ರಾಮಚಂದ್ರ ರಾವ್ ಅವರಿಗೆ ಕೃತಜ್ಞರಾಗಿದ್ದೇವೆ. ಇದನ್ನು ಅನುವಾದಿಸಿದ ಶ್ರೀ ಬೇಳೂರು ಸುದರ್ಶನ ಅವರಿಗೆ ಧನ್ಯವಾದಗಳು.

ತಂತ್ರಕ್ಕೆ ಸಂಬಂಧಿಸಿದ ನಮ್ಮ ಈ ಸರಣಿಯನ್ನು ಭಾರತೀಯ ಸಂಸ್ಕೃತಿಯ ಪೋಷಕರೂ, ಯಂತ್ರ-ತಂತ್ರದ ಅಭಿಮಾನಿಗಳೂ, ಸಾಧಕರೂ ತುಂಬು ಹೃದಯದಿಂದ ಸ್ವೀಕರಿಸಿ ಓದಿದರೆ ನಮ್ಮ ಪ್ರಯತ್ನ ಸಾರ್ಥಕ ಎಂದು ಭಾವಿಸುತ್ತೇವೆ.

03, ಸೆಪ್ಟೆಂಬರ್ 2003 **- ಪ್ರಕಾಶಕರು**
ಟಿ.ವಿ. ಕಪಾಲಿಶಾಸ್ತ್ರಿ ಅವರ ಜನ್ಮದಿನ

ಅನುಕ್ರಮಣಿಕೆ

	ಸೃಜನಶೀಲ ಜೀವನ ಮಾಲೆ	iii
	ತಂತ್ರದ ಹೊಸ್ತಿಲಲ್ಲಿ	v
1.	ಪೀಠಿಕೆ	01
2.	ಯಂತ್ರಗಳು ಎಂದರೇನು ?	13
3.	ಯಂತ್ರದ ಮೂರು ಬಗೆಗಳು	22
4.	ಯಂತ್ರಗಳಿಗೆ ಸಂಬಂಧಿಸಿದ ಆಚರಣೆಗಳು	32
5.	ವಿವಿಧ ಯಂತ್ರಗಳು	39
	ಅನುಬಂಧ	83
	ಚಕ್ರ ಎಂದರೇನು ?	

1. ಪೀಠಿಕೆ

''ಯಂತ್ರಗಳು'' ಎಂದು ಕರೆಯುವ ನಿಗೂಢ ವಿನ್ಯಾಸಗಳು ಮತ್ತು ಮಾಂತ್ರಿಕ ಚಿತ್ರಗಳು ಭಾರತದಲ್ಲಿ ಮಾತ್ರವಲ್ಲ, ಇತರೆ ಎಲ್ಲಾ ದೇಶಗಳಲ್ಲೂ ತೀರಾ ಪ್ರಾಚೀನ. ಇಂಥ ವಿನ್ಯಾಸಗಳು ಮತ್ತು ಚಿತ್ರಗಳು ಮೊದಲ ಪುರಾತತ್ವ ಶೋಧಗಳಲ್ಲಿ ಕಂಡು ಬಂದಿವೆ. ಹಾಗೆ ನೋಡಿದರೆ ಇವು ಖಡಾಖಂಡಿತವಾಗಿ ಉಪಯುಕ್ತವೂ ಅಲ್ಲ, ಅಥವಾ ಕಾರ್ಯಕ್ರಮಗಳಲ್ಲಿ ಕೇವಲ ಅಲಂಕಾರಿಕವಾಗಿಯೂ ಇರಲಿಲ್ಲ. ಮತವು ಸಂಘಟಿತವಾಗುವ ಮತ್ತು ಆದಿ ಸಮಾಜವಾಗಿ ಸಾಂಸ್ಥೀಕರಣಗೊಳ್ಳುವ ಮುನ್ನವೇ ಮಾಂತ್ರಿಕ ಉದ್ದೇಶಗಳು ಮತ್ತು ಮಾದರಿಗಳ ದೃಶ್ಯಗಳನ್ನು ಮಾಟ-ಮಂತ್ರಗಳ ಜೊತೆಗೇ ಮೂಡಿಸಲಾಗಿತ್ತು. ಅವುಗಳ ಉದ್ದೇಶ ವ್ಯಕ್ತಿಗತವಾದ ಮಹತ್ವವುಳ್ಳ ಹಾಗೂ ಸಾಮುದಾಯಿಕವಾಗಿ ಗರ್ಭಿತಾರ್ಥವುಳ್ಳಂತಹ ಘಟನೆಗಳನ್ನು ನಿಗೂಢವಾದ ರೀತಿಯಲ್ಲಿ ಬಲವಂತವಾಗಿ ಘಟಿಸುವಂತೆ ಮಾಡುವುದಾಗಿತ್ತು. ದುಷ್ಟಶಕ್ತಿಗಳ ನಿರ್ಮೂಲನ, ಅಪಾಯದಿಂದ ಪಾರಾಗುವ, ಮಳೆ ಬರುವಂತೆ ಮಾಡುವ, ಜಾಡ್ಯಗಳನ್ನು ಓಡಿಸುವ, ಆಲಿಕಲ್ಲು ಮಳೆಯನ್ನು ತಡೆಯುವ, ಮಣ್ಣಿನ ಸಾರವನ್ನು ಹೆಚ್ಚಿಸುವ, ಬೇಟೆಯಲ್ಲಿ ಅಥವಾ ಯಾತ್ರೆಯಲ್ಲಿ ಯಶಸ್ಸು ಸಿಗುವಂತೆ ಮಾಡುವ, ಆರೋಗ್ಯವನ್ನು ಮರುಸ್ಥಾಪಿಸುವ, ಆಯುಸ್ಸನ್ನು ಹೆಚ್ಚಿಸುವ, ಕಳೆದು ಹೋದ ಆಸ್ತಿಯನ್ನು ಮರಳಿ ಪಡೆಯುವ, ಶತ್ರುವನ್ನು ಸೋಲಿಸುವ, ವಿರೋಧಿಯನ್ನು ಮಣಿಸುವ ಮತ್ತು ಪ್ರೀತಿಸಿದ ವಸ್ತುಗಳನ್ನು ಪಡೆಯುವ ಉದ್ದೇಶಗಳನ್ನು ಅವು ಒಳಗೊಂಡಿದ್ದವು.

ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ಸಹಾಯ ಮಾಡಿದ ಕಾರಣಗಳೇ ಮಂತ್ರವಿದ್ಯೆ ಮತ್ತು ಮತಗಳ ಸ್ಥಾಪನೆಗೆ ಕಾರಣವಾದವು. ವೈಜ್ಞಾನಿಕ ಚಿಂತನೆಯೇ ಪ್ರಮಾಣೀಕೃತ ಮತ್ತು ಮತೀಯ ಚಿಂತನೆಯು ಅಪ್ರಮಾಣೀಕೃತ ಎಂದು ವಿವರಿಸುವುದು ಮಾನವಶಾಸ್ತ್ರೀಯವಾಗಿ ಸರಿಯಲ್ಲ. ಅತ್ಯಂತ ಕಚ್ಚಾ ಮಾಂತ್ರಿಕ ವಿಧಾನವೂ ಯೋಚನೆಯನ್ನು (reason) ಆಧರಿಸಿತ್ತು. ದೇವರು, ದೈವದ ಕಲ್ಪನೆಗಳನ್ನು ಮೂಡಿಸಿದ್ದೇ ಮಾನವ ಚಿಂತನೆಗಳು. ಹಾಗೆಯೇ ಒಂದರ ಜೊತೆಗೆ ಇನ್ನೊಂದು ಹೊಂದಿರುವ ಸಂಬಂಧವನ್ನೂ ವಸ್ತು ಮತ್ತು ಶಕ್ತಿಯ ಕಲ್ಪನೆಗಳನ್ನೂ ಆಳತೆಗಳನ್ನೂ

ಮಾನವನ ಚಿಂತನೆಯೇ ಮೂಡಿಸಿದೆ. ನಮ್ಮೊಳಗಿನ ಮತ್ತು ನಮ್ಮ ಸುತ್ತಲಿನ ಭೌತಿಕ ಜಗತ್ತನ್ನು ನಿಯಂತ್ರಿಸುವ ಆಸೆಯ ಆಧಾರದ ಮೇಲೆ ತಂತ್ರಜ್ಞಾನ ಆಧಾರಿತವಾದಂತೆ, ಪವಾಡವು ನಮ್ಮೊಳಗೆ ಮತ್ತು ನಮ್ಮ ಸುತ್ತಲಿನ ಆಧ್ಯಾತ್ಮಿಕ ಜಗತ್ತನ್ನು ನಿಯಂತ್ರಿಸುವ ಉದ್ದೇಶವನ್ನು ಹೊಂದಿದೆ.

'ಮಂತ್ರವಿದ್ಯೆ' ಎಂಬ ಪದವು ಈಗ ಆಧುನಿಕರಲ್ಲಿ ಕೆಲವರು ಮಾತ್ರ ಇಷ್ಟಪಡುವ ಒಂದು ಅರ್ಥವನ್ನು ಪಡೆದುಕೊಂಡಿದೆ ಎನ್ನುವುದು ದುರದೃಷ್ಟಕರ. ವಿಜ್ಞಾನ ಮತ್ತು ತಂತ್ರಜ್ಞಾನದ ಹೆಸರಿನಲ್ಲಿ ಎಲ್ಲವೂ ಪ್ರಶ್ನಾತೀತವಾಗಿ ಮತ್ತು ತೀರಾ ಮೌಲಿಕ ಎಂಬಂತೆ ಪಾರಾಗಿ ಹೋಗುತ್ತಿರುವುದೂ ಅಷ್ಟೇ ದುರದೃಷ್ಟಕರ. 'ಮಂತ್ರವಿದ್ಯೆ' ಎಂದರೆ ಯಾವುದೇ ಪ್ರಮಾಣೀಕೃತ ವಿವರಣೆ ಇಲ್ಲದ್ದು ಎಂಬ ಪಾಶ್ಚಾತ್ಯ ವ್ಯಾಖ್ಯೆಯಿಂದಾಗಿಯೇ ಅದನ್ನು ಅಪ್ರಮಾಣೀಕೃತ ಎಂದು ಕರೆಯಲಾಗುತ್ತಿದೆ. ಪವಾಡವು ಗಟ್ಟಿಯಾದ ಮೂಢನಂಬಿಕೆಗಳ ಮೇಲೆ ಮತ್ತು ಭ್ರಮೆಗಳ ಮೇಲೆ ನಿಂತಿದೆ ಎಂದು ಕಾಣುವಂತೆ ಮಾಡಲಾಗಿದೆ. ಹಾಗೆಯೇ ವಿಜ್ಞಾನವು ಪ್ರದರ್ಶಿಸಿ ತೋರಿಸಬಹುದಾದ ಮತ್ತು ವಿವಾದೇತರವಾದ ಗಟ್ಟಿಯಾದ ವಾಸ್ತವಗಳ ಮೇಲೆ ನಿಂತಿದೆ ಎಂದು ಹೇಳಲಾಗುತ್ತಿದೆ. ಹೀಗಿದ್ದೂ, ವಿಜ್ಞಾನದ ಇತಿಹಾಸ ವಿದ್ಯಾರ್ಥಿಗೆ ವಿಜ್ಞಾನವು ಕೇವಲ ಊಹೆಗಳ ಮೇಲೆ ನಿಂತಿದೆ ಮತ್ತು ಈ ಊಹೆಗಳು ತಮ್ಮ ಪರಿಣಾಮಗಳು ಮತ್ತು ಅನ್ವಯದಿಂದ ಖಚಿತವಾಗಿ ನಿರ್ಧರಿಸಲಾಗದವು ಅಥವಾ ಸಂಪೂರ್ಣವಾಗಿ ವಿವಾದೇತರವೇನಲ್ಲ ಎಂಬುದು ಚೆನ್ನಾಗಿ ಗೊತ್ತಿದೆ.

'ಮಂತ್ರವಿದ್ಯೆ' ಪದವು ಮೂಲತಃ ಪೌರ್ವಾತ್ಯ ಜ್ಞಾನ ಎಂಬುದಾಗಿದೆ. ('ಮ್ಯಾಗಸ್' ಎಂದರೆ ಅನುಭಾವಿಗಳ, ಅಥವಾ 'ಮ್ಯಾಗಿ' ಎಂದರೆ ಪರ್ಶಿಯಾದ ಪುರೋಹಿತ ವರ್ಗದ ಸದಸ್ಯರು ಎಂದರ್ಥ). ಈ ಪದವು ಬಹುಶಃ ಸಂಸ್ಕೃತದ 'ಮಘ' ಪದದಿಂದ ಬಂದಿದೆ. 'ಮಘ' ಎಂದರೆ ಕೇವಲ ಒಂದು ವರ್ಗದ ಜನರಲ್ಲ (ದಿ ಲೆಕ್ಸಿಕಾನ್ ಆಫ್ ಮೇದಿನಿ). 'ಮಹಾನ್ ಐಶ್ವರ್ಯ' (ನೋಡಿ: ಋಗ್ವೇದ (7,2,7), ದೇವರುಗಳ ಮುಖ್ಯಸ್ಥ ಇಂದ್ರನಿಂದ ಕೊಡುಗೆಯಾಗಿ ಬಂದಿದ್ದು. ಇದನ್ನು ಇಂದ್ರನು ಬಹುವಾಗಿ ಹೊಂದಿದ್ದಾನೆ, ಆದ್ದರಿಂದಲೇ ಮಘವಾನ್ ಎಂದು ಕರೆಯಲ್ಪಟ್ಟಿದ್ದಾನೆ) ಮತ್ತು 'ಅತ್ಯುತ್ತಮ ಔಷಧ' ಎಂದೂ ಅರ್ಥ (ಧಾರಣಿ ನಿಘಂಟುವಿನಲ್ಲಿ ಈ ಪದವನ್ನು ಸ್ತ್ರೀವಾಚಕವಾಗಿ ಸೂಚಿಸಲಾಗಿದೆ.) 'ಮಘ' ಪದವು 'ಮಹತ್' ಪದದ ಮೂಲದಿಂದಲೇ (ಮಘಶ್‌ನಿಂದ) ಬಂದಿದೆ. ಇದರ ಅರ್ಥ, ಅಭಿನ್ನ ಪ್ರಜ್ಞೆ ಎಂದು (ವ್ಯಕ್ತಿಗತ ಪ್ರಜ್ಞೆ ಅಥವಾ ಅಹಂಕಾರದಿಂದ ಭಿನ್ನವಾದ ಬುದ್ಧಿ ಮತ್ತು ನಿರಪೇಕ್ಷ ಪ್ರಜ್ಞೆ ಅಥವಾ ಮನಸ್ಸು). ಹೀಗೆ ಮಂತ್ರವಿದ್ಯೆಯು ಜ್ಞಾನದ ಒಂದು ಅಂಶ. ಅದು ಪ್ರಜ್ಞೆಯ ಬಗ್ಗೆ ಕಾಳಜಿಯನ್ನು ಹೊಂದಿದೆ. ಪ್ರಜ್ಞೆಯನ್ನು ತರಬೇತುಗೊಳಿಸುವುದು ಮತ್ತು ಅದನ್ನು ವೈಯಕ್ತಿಕ ಮತ್ತು ಸಾಮೂಹಿಕ ಕಲ್ಯಾಣಕ್ಕಾಗಿ ಬಳಸುವ ಅಂಶವೂ ಆಗಿದೆ.

ಬಾಹ್ಯ ವಸ್ತುಗಳನ್ನು ನಿಯಂತ್ರಿಸುವ ಮತ್ತು ಘಟನೆಗಳನ್ನು ನಿರ್ದೇಶಿಸುವ ಕಲೆಯನ್ನು, ಘನವಾದ ವಾಸ್ತವತೆಯ ಕೊರತೆ ಇರುವ ವಸ್ತು ಮತ್ತು ಘಟನೆಗಳನ್ನು ಪ್ರಕ್ಷೇಪಿಸುವ ಅರ್ಥವನ್ನು ಮಂತ್ರವಿದ್ಯೆ ಪದವು ಬಿಂಬಿಸುತ್ತದೆ ಎಂಬುದು ನಿಜ. ಹಾಗೆಯೇ ಮಂತ್ರವಿದ್ಯೆಯು ಸಾಮಾನ್ಯವಾಗಿ ಮಾಟ, ಮಂತ್ರವಿದ್ಯೆ, ಅಬ್ರಕದಬ್ರ, ಭ್ರಮೆಗಳು, ನಂಬುವಂತೆ ಮಾಡುವ ಘಟನೆಗಳು – ಇವುಗಳನ್ನೆಲ್ಲ ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ. ಹೀಗೆ ಮಂತ್ರವಿದ್ಯೆಯು ವಿಜ್ಞಾನದ ಒಂದು ಶತ್ರುವಾಗಿ ಮತ್ತು ಶಿಸ್ತಿನ ಉಲ್ಲಂಘನೆಯಾಗಿ ಕಾಣುತ್ತದೆ. ಈ ದೂಷಣೆಗೆ ನೆಲೆಯೇ ಇಲ್ಲ ಎಂದೂ ಹೇಳಲಾಗದು. ಶತಮಾನಗಳ ಕಾಲದಿಂದ ಮಂತ್ರವಿದ್ಯೆಯನ್ನು ಆಚರಿಸಿರುವುದು ಮತ್ತು ತಲೆತಲಾಂತರದಿಂದ ಬಂದ ಮಂತ್ರವಾದಿಗಳು ಈ ದೂಷಣೆಗಳಿಗೆ ಕಾರಣೀಭೂತರಾಗಿದ್ದಾರೆ. ಮಂತ್ರವಿದ್ಯೆಯ ಮಾರ್ಗಗಳು ಮೂಲತಃ ಜನರ ಅಮಾಯಕತೆ ಮತ್ತು ಮುಗ್ಧತೆಯನ್ನೇ ಬಹುತೇಕ ಆಧರಿಸಿ ಬೆಳೆದಿವೆ. ಇಲ್ಲಿ ವಂಚಕರು ಮತ್ತು ದುಷ್ಕರ್ಮಿಗಳು ಶೋಷಣೆ ಮಾಡುವುದಕ್ಕೆ ಅವಕಾಶವಾಗಿದೆ ಎಂಬುದನ್ನು ಅಲ್ಲಗೆಳೆಯಲಾಗುವುದಿಲ್ಲ.

ಆದರೆ ಕೇವಲ ಈ ಹಿನ್ನೆಲೆಯಲ್ಲಿ ಮಂತ್ರವಿದ್ಯೆಯನ್ನು ಹೀಗಳೆಯುವುದು ಎಂದರೆ ಸ್ಫೋಟಕಗಳನ್ನು, ಮಾಲಿನ್ಯಕಾರಕಗಳನ್ನು, ವಿಷಗಳನ್ನು ಮತ್ತು ಇತರೆ ಹಾನಿಕಾರಕ ವಸ್ತುಗಳನ್ನು ವಿಜ್ಞಾನವು ತಂದಿತೆಂದು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಹೀಗಳೆದ ಹಾಗೆಯೇ ಆಗುತ್ತದೆ. ಅಕ್ರಮ ಮತ್ತು ದುರ್ಬಳಕೆಗಾಗಿ ಮಂತ್ರವಿದ್ಯೆಯನ್ನು ಬಳಸುವುದು ಮಂತ್ರವಿದ್ಯೆಯ ಮೂಲ ಅಥವಾ ಅಗತ್ಯದ ಅಂಶವಲ್ಲ. ಒಂದು ಪ್ರಾಯೋಗಿಕ ವಿಷಯವಾದ ಮಂತ್ರವಿದ್ಯೆಯು ಒಂದು ಕಲೆ ಮತ್ತು ಯುಟಿಲಿಟೇರಿಯನ್ ಗುಣಗಳನ್ನು ಹೊಂದಿದೆ ಎಂಬುದನ್ನು ಅಲ್ಲಗಳೆಯಲಾಗದು. ಮತವು ತಾತ್ವಿಕವಾದದ್ದು ಮತ್ತು ವಿಜ್ಞಾನದ ಇನ್ನೊಂದು ಮುಖವಾಗಿದೆ. ಮಂತ್ರವಿದ್ಯೆಯು ಇದರ ಒಂದು ಆನ್ವಯಿಕ ವಿಷಯವಾಗಿದೆ. ತಂತ್ರಜ್ಞಾನವು ವಿಜ್ಞಾನದ ಆನ್ವಯಿಕ ವಿಷಯವಾಗಿರುವ ಹಾಗೆ. ಮತವು ಕಾರಣದಲ್ಲಿ ನಂಬಿಕೆಯನ್ನು ಹೊಂದಿದೆ. ಅದು ಅನುಭವ ಮತ್ತು ಪ್ರಜ್ಞೆಯನ್ನು ಅವಲಂಬಿಸಿದೆ. ಅದು ಎತ್ತಿ ಹಿಡಿಯುವ ವಿಷಯವು ವಿಜ್ಞಾನವು ಹೇಳುವ ವಿಷಯವಲ್ಲದೆ ಬೇರೇನೋ ಆಗಿರಬಹುದು, ಆದರೆ ಅದು ಈಗ ಆಗಿಹೋದ ಅಸಂಖ್ಯ ಪೀಳಿಗೆಗಳ ಕಾಲದಲ್ಲಿ ಮನುಕುಲದ ಜೊತೆಗೇ ಇದ್ದ ಸಿಂಧುವಾದ ಮಾನವ ಕಾರಣವಾಗಿಯಂತೂ ಉಳಿದಿದೆ; ಹಾಗೆಯೇ ಇದು ಬರಲಿರುವ ಅಸಂಖ್ಯ ಶತಮಾನಗಳ ಕಾಲ ಮನುಕುಲವನ್ನು ಆವರಿಸಲಿದೆ. ಆನ್ವಯಿಕ ಕಲೆಯಾದ ಮಂತ್ರವಿದ್ಯೆಯು ಮತವು ಹಾಕಿಕೊಟ್ಟ ಚೌಕಟ್ಟಿನೊಳಗೇ ಕೆಲಸ ಮಾಡುತ್ತದೆ, ಮತವು ಮಾಡುವ ಕೆಲಸಕ್ಕೆ ಪೂರಕವಾಗಿ ತನ್ನದೇ ಆದ ವಿಶೇಷ ಯೋಚನಾಸರಣಿ ಹೊಂದಿರುತ್ತದೆ.

ಮತವು ವೈಯಕ್ತಿಕ ಪ್ರಜ್ಞೆಯನ್ನು ಅವಿಚ್ಛಿನ್ನ ಪ್ರಜ್ಞೆಗೆ 'ಜೋಡಿಸಲು' (ಪದದ ವ್ಯುತ್ಪತ್ತಿಯು ಕೇಳುವಂತೆ) ಹೊರಡುತ್ತದೆ. ಹೀಗೆ ಅದು ಜನರ ಸಂಸ್ಕೃತಿ, ಸ್ಥಳದ

ಭೌಗೋಳಿಕ ಅಂಶಗಳು, ಸಮುದಾಯದ ಇತಿಹಾಸ – ಇವುಗಳ ಆಧಾರದ ಮೇಲೆ ಹಲವು ಮಾರ್ಗಗಳನ್ನು ಅನುಸರಿಸುತ್ತದೆ. ಹೀಗೆ ಇಲ್ಲಿ ಮತದ ವಿವಿಧ ಗುಣಗಳು ಕಾಣಿಸುತ್ತವೆ. ಪ್ರತಿಯೊಂದೂ ಒಂದು ನಿರ್ದಿಷ್ಟ ಉಪಸಂಸ್ಕೃತಿಯನ್ನು ಬಿಂಬಿಸುತ್ತವೆ. ಮತದ ವಾಸ್ತವಿಕ ಫಲಿತವಾದ ಮಂತ್ರವಿದ್ಯೆಯು ವೈಯಕ್ತಿಕ ಪ್ರಜ್ಞೆಯ ವ್ಯಾಪ್ತಿಯಲ್ಲಿ ಅವಿಚ್ಛಿನ್ನ ಪ್ರಜ್ಞೆಯನ್ನು ಒಳಗೊಂಡಿದೆ. ಮತವು ವೈಯಕ್ತಿಕತೆಯನ್ನು ಇನ್ನೊಂದು ಉನ್ನತ ಸ್ತರಕ್ಕೆ ಏರಿಸಲು ಆಸಕ್ತಿ ಹೊಂದಿದ್ದರೆ (ಸಾಮಾನ್ಯವಾಗಿ ಆಧ್ಯಾತ್ಮಿಕತೆ ಎಂದು ಕರೆಯುತ್ತಾರೆ), ಮಂತ್ರವಿದ್ಯೆಯು ಈ ಉನ್ನತ ಸ್ತರದಲ್ಲಿರುವ ಪ್ರಜೆಗಳನ್ನು ದಿನನಿತ್ಯದ ಜಗತ್ತಿಗೆ ಇಳಿಸಲು ಆಸಕ್ತಿಯನ್ನು ಹೊಂದಿದೆ. ಮತವು ಮನುಕುಲದ ಅಂಕುಡೊಂಕುಗಳನ್ನು ನವಿರು ಮಾಡುವ ನಿರೀಕ್ಷೆಯನ್ನು, ಹಾಗೆಯೇ ಸಾಮಾನ್ಯರ ದೃಷ್ಟಿಕೋನದ ಚೌಕಟ್ಟಿನ ಹರಿತ ಅಂಚುಗಳನ್ನು ಕತ್ತರಿಸುವ, ತನ್ಮೂಲಕ ವ್ಯಕ್ತಿಯನ್ನು 'ಅವಿಚ್ಛಿನ್ನಗೊಳಿಸುವ' ನಿರೀಕ್ಷೆಯನ್ನು ಹೊಂದಿದ್ದರೆ, ಇನ್ನೊಂದು ಬದಿಯಲ್ಲಿ ಮಂತ್ರವಿದ್ಯೆಯು ನಿರಾಕಾರದ, ಅಸ್ಪಷ್ಟ ಆಧ್ಯಾತ್ಮಿಕ ಜಗತ್ತನ್ನು ಛಿನ್ನಗೊಳಿಸಿ, ಅವಿಚ್ಛಿನ್ನವಾಗಿರುವವರನ್ನು ವೈಯಕ್ತಿಕಗೊಳಿಸುವ ನಿರೀಕ್ಷೆಯನ್ನು ಹೊಂದಿದೆ. ಮತವು ಸಾರ್ವತ್ರೀಕರಣದ ಮತ್ತು ಜಾಗತೀಕರಣದತ್ತ ಹಾಕಿದ ಒಂದು ಹೆಜ್ಜೆ; ಆದರೆ ಮಂತ್ರವಿದ್ಯೆಯು ನಿರ್ದಿಷ್ಟತೆ ಮತ್ತು ಖಾಸಗಿತನದತ್ತ ನಡೆಯುತ್ತದೆ. ಮತವು ಮಂತ್ರವಿದ್ಯೆಗಿಂತ ಹೆಚ್ಚು ಪ್ರಮಾಣೀಕೃತ ಎಂದು ಕಾಣಿಸುತ್ತದೆ. ಯಾಕೆಂದರೆ ಅದು ವ್ಯಕ್ತಿಯ ಪ್ರಜ್ಞೆಯಲ್ಲಿರುವ ಜಗತ್ತಿನಿಂದ, ತೀರಾ ಖಡಾಖಂಡಿತವಾದ ಪ್ರಪಂಚದಿಂದ (ಇಂದ್ರಿಯಗಳ ಗ್ರಹಣಶಕ್ತಿಯ ವ್ಯಾಪ್ತಿಯೊಳಗಿರುತ್ತವೆ ಎಂಬ ಅರ್ಥದಲ್ಲಿ), ಪರಿಶೀಲನಾರ್ಹ, ಪರಿಚಿತ, ಸಾರ್ವಜನಿಕ ವಾಸ್ತವ ಎಂದು ಕರೆಯಬಹುದಾದ ಜಗತ್ತಿನಿಂದ ಆರಂಭವಾಗುತ್ತದೆ. ಆದರೆ ಮಂತ್ರವಿದ್ಯೆಯು ಒಂದು ಅಮೂರ್ತ ಜಗತ್ತಿನಿಂದ, ಗ್ರಹಿಕೆಗಿಂತ ಹೆಚ್ಚಾಗಿ ಕಲ್ಪಿತವೇ ಆಗಿರುವ ವಾಸ್ತವಿಕತೆಯಿಂದ, ಖಾಸಗಿ ಎಂದು ಸರಿಯಾಗಿ ಕರೆಯಬಹುದಾದ ಕಡೆಯಿಂದ ಆರಂಭವಾಗುತ್ತದೆ. ಮತವು ಸಾಮಾನ್ಯ ವಿಚಾರಸರಣಿಯಿಂದ ಆರಂಭವಾಗುತ್ತದೆ ಮತ್ತು ಅದು ಸಾಮಾನ್ಯ ವಿಚಾರಸರಣಿಯ ವ್ಯಾಪ್ತಿಗೆ ಅತೀತವಾದುದರೆಡೆಗೆ ಮುಂದುವರಿಯುತ್ತದೆ. ಆದರೆ ಮಂತ್ರವಿದ್ಯೆಯು ಸಾಮಾನ್ಯ ವಿಚಾರ ಸರಣಿಗೆ ಮೀರಿದ್ದು ಎಂದು ಕರೆಯುವುದರಿಂದ ಆರಂಭವಾಗುತ್ತದೆ. ಕೊನೆಗೆ ಅದು ಸಾಮಾನ್ಯ ವಿಚಾರಕ್ಕೆ ಬಂದು ತಲುಪುತ್ತದೆ. ಹೀಗೆ ಮಂತ್ರವಿದ್ಯೆಯು ಸಾಮಾನ್ಯ ವೈಚಾರಿಕತೆಯ ಕೋನದಿಂದ ನೋಡಿದಾಗ ಅಪ್ರಮಾಣೀಕೃತದ ಪರಿಧಿಯನ್ನು ಹೊಂದಿದೆ. ಈ ಕಾರಣದಿಂದಲೇ ಮೋಸ ಮಾಡುವುದು, ವಂಚಿಸುವುದು, ಶೋಷಿಸುವುದು – ಇವೆಲ್ಲವೂ ಮಂತ್ರವಿದ್ಯೆಯ ಅಂಗಳದಲ್ಲಿ ಬೇಕಾದಷ್ಟಿವೆ. ಇದು ವಾಸ್ತವವಾಗಿ 'ನಂಬಬೇಕಾದ' ಜಗತ್ತು; ಸಾಮಾನ್ಯ ವಿಚಾರವು ಇದರಿಂದ ಏನನ್ನಾದರೂ ಹುಡುಕುವವರೆಗೆ.

ಆದರೆ ಮಂತ್ರವಿದ್ಯೆಯು ಅದರ ಮೂಲ ಮತ್ತು ಅತ್ಯಗತ್ಯ ಅರ್ಥದಲ್ಲಿ ತನ್ನದೇ ಆದ ವಿಚಾರವನ್ನು, ಪ್ರಮಾಣೀಕರಣವನ್ನು, ತನ್ನದೇ ಆದ ಒಂದು ತರ್ಕವನ್ನು ಮತ್ತು ತನ್ನದೇ

ಆದ ಲಕ್ಷಣವನ್ನು ಹೊಂದಿದೆ. ಅದು ಇಂದ್ರಿಯ ಗ್ರಹಿಕೆಯ ವಸ್ತುಗಳ ಅಂತಿಮಸ್ಥಿತಿಯನ್ನು ನಿರಾಕರಿಸುತ್ತದೆ. ಹಾಗೆಯೇ ಅದು ನಮ್ಮ ಸಾಮಾನ್ಯ ಅನುಭವದ ಜಗತ್ತಿನ ವಸ್ತು ಮತ್ತು ವಿಧಾನಗಳ ವಾಸ್ತವಿಕತೆಯನ್ನೂ ನಿರಾಕರಿಸುತ್ತದೆ. ಅದು ಅದೃಶ್ಯವಾದ, ಆದರೆ ನೈಜವಾದ, ಅಮೂರ್ತವಾದ ಆದರೆ ಪ್ರಭಾವಿಯಾದ, ನಿಗೂಢವಾದ ಆದರೆ ನಿರ್ವಹಣಾಸಾಧ್ಯ ಜಗತ್ತನ್ನು ಬಿಂಬಿಸುತ್ತದೆ. ಕಣ್ಣಿಗೆ ಕಾಣುವ, ಖಡಾಖಂಡಿತವಾದ ಮತ್ತು ಸಂಪೂರ್ಣವಾದ ಜಗತ್ತು ಈ 'ಜಗತ್ತಿನ' ಒಂದು ಅಂಶ ಮಾತ್ರ ಎಂದು ಪ್ರತಿಪಾದಿಸುತ್ತದೆ. ನಮ್ಮ ಕಣ್ಣಿಗೆ ಕಾಣಿಸದ ಆದರೆ ನಮಗೆ ಇನ್ನೂ ಪರಿಚಯವೇ ಇರದ ಅಂಗಾಂಗಗಳು ನಮ್ಮ ದೇಹದಲ್ಲಿ ಇಲ್ಲವೇ? ಇದಲ್ಲದೆ ವಿಜ್ಞಾನವು ನಾವು ಬದುಕುವ, ಚಲಿಸುವ ಮತ್ತು ಕಾರ್ಯಾಚರಿಸುವ ಜಗತ್ತಿಗೆ ಸಂಬಂಧಿಸದ ಅತ್ಯಂತ ನಿಗೂಢ ವಸ್ತುಗಳನ್ನು ಆವಿಷ್ಕರಿಸುತ್ತದೆ. ಮತವು ವ್ಯಕ್ತಿಯೊಬ್ಬನ ಒಳಗಿರುವ, ನಮಗೆ ಸಾಮಾನ್ಯವಾಗಿ ಗೊತ್ತಿರದ, ಪ್ರಜ್ಞೆಯ ಒಳಜಗತ್ತಿನತ್ತ ಬೊಟ್ಟು ಮಾಡುತ್ತದೆ. ಮಂತ್ರವಿದ್ಯೆಯು ಈ ಜಗತ್ತಿನ ಒಳಗಿರುವ ಜಗತ್ತಿನತ್ತ ಬೊಟ್ಟು ಮಾಡುತ್ತದೆ. ಇದು ನಮ್ಮ ಪ್ರಜ್ಞೆಯ ಹೊರಗಣ ಜಗತ್ತಿನ ಹಾಗೆ ನಮಗೆ ಸಾಮಾನ್ಯವಾಗಿ ಗೊತ್ತಿರುವುದಿಲ್ಲ. ನಾವು ವಿಶ್ವದಲ್ಲಿ ವ್ಯಕ್ತಿಯೊಬ್ಬನ ಬಗ್ಗೆ ಮಾತನಾಡುವಾಗ ನಾವು ವ್ಯಕ್ತಿಯ ಪ್ರಜ್ಞೆಯ ಒಳಜಗತ್ತನ್ನು ಮತ್ತು ವ್ಯಕ್ತಿಯ ಹೊರಗಣ ಪ್ರಜ್ಞಾಪ್ರಪಂಚವನ್ನು ಅಲಕ್ಷಿಸುತ್ತೇವೆ. ನಾವು ವ್ಯಕ್ತಿಯನ್ನು ಜಗತ್ತಿನ ಒಂದು ವಿವರಣೆಯಂತೆ, ಅದರ ಗುಣಗಳನ್ನೇ ಕಟ್ಟಾವಾಸ್ತವ (concrete reality) ಎಂದು ಪರಿಗಣಿಸುತ್ತೇವೆ. ಕಟ್ಟಾ ವ್ಯಕ್ತಿಯ ಒಳಗಣ ಅಮೂರ್ತ ಜಗತ್ತು ಮತ್ತು ಕಟ್ಟಾ ಜಗತ್ತಿನೊಳಗಿನ ಅಮೂರ್ತ (abstract) ವ್ಯಕ್ತಿಗಳು ಗೋಚರಾತೀತ ಆಗಿವೆ.

ಮಂತ್ರವಿದ್ಯೆಯು ವಾಸ್ತವವಾಗಿ ಈ ಅಮೂರ್ತ ಜಗತ್ತನ್ನು ದಾಖಲಿಸಲು ಮತ್ತು ಅಮೂರ್ತ ವ್ಯಕ್ತಿಗಳನ್ನು ಬೇರ್ಪಡಿಸಲು ಯತ್ನಿಸುತ್ತದೆ. ಇದು ಹಲವು 'ಚಕ್ರ'ಗಳನ್ನು ಒಳಗೊಂಡಿದೆ (ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ ಇತ್ಯಾದಿ). ಮಾನವನ ತಾಂತ್ರಿಕ ಸಿದ್ಧಾಂತವು ಈ ನಿಟ್ಟಿನಲ್ಲಿ ಒಂದು ನಿದರ್ಶನವಾಗಿದೆ. ಈ ಚಕ್ರಗಳ ಅಸ್ತಿತ್ವವನ್ನು ಮನುಷ್ಯನ ದೇಹರಚನೆಯಲ್ಲಿ ಮತ್ತು ಭೌತಿಕ ರಚನೆಯಲ್ಲಿ ಕಾಣುವುದು ಲಾಭವಿಲ್ಲದ ಕೆಲಸ. ಅಥವಾ ದೃಗ್ಗೋಚರವಾದ ಅಂಗಗಳು ಮತ್ತು ಕ್ರಿಯೆಗಳು ಹಾಗೂ ಪಠ್ಯರೂಪದ ಚಕ್ರಗಳ ನಡುವೆ ಇರುವ ಸಂವಹನವನ್ನು ಹುಡುಕುವುದೂ ಲಾಭವಿಲ್ಲದ್ದು. ವಾಸ್ತವವಾಗಿ ಚಕ್ರಗಳು ವ್ಯಕ್ತಿಯೊಬ್ಬನ ಒಳಗಿರುವ ಅಮೂರ್ತ ಜಗತ್ತಿನ ಕೇಂದ್ರಗಳು. ಅವು ನಮ್ಮ ಸಾಮಾನ್ಯ ವಿವೇಚನೆಗೆ ಮತ್ತು ನಮ್ಮ ಸಾಮಾನ್ಯ ಗ್ರಹಿಕೆಗೆ ಸರ್ವಥಾ ದಕ್ಕುವುದಿಲ್ಲ. ಹಾಗೆಯೇ ಸುಪ್ರಸಿದ್ಧ 'ಶ್ರೀ ಚಕ್ರ'ವೂ ಅಮೂರ್ತ ಬ್ರಹ್ಮಾಂಡದ ಒಂದು ನಕ್ಷೆಯಾಗಿದೆ. ಅದು ವ್ಯಕ್ತಿಯ ಒಳಗಣ ಅಮೂರ್ತ ಜಗತ್ತು ಹಾಗೂ ವಾಸ್ತವ ಜಗತ್ತಿನ ಅಮೂರ್ತ ವ್ಯಕ್ತಿಗಳ ನಡುವೆ ಸಂವಹನವನ್ನು ಸಾಧಿಸುತ್ತದೆ.

ಮಂತ್ರವಿದ್ಯೆಯ ಈ ಜಗತ್ತು ವಾಸ್ತವವಾಗಿ ಶಕ್ತಿಗಳ, ಬಲಗಳ ಮತ್ತು ದಿಕ್‌ಪ್ರಮಾಣ ರೇಖೆಗಳ ಒಂದು ಜಾಲವಾಗಿದೆ. ಅದು ನಮಗೆ ಸಾಮಾನ್ಯವಾಗಿ ಪರಿಚಿತವಿರುವ

ಜಗತ್ತಿಗಿಂತ ಹೆಚ್ಚು ಚಲನಶೀಲವಾಗಿದೆ. ಕಾಲ ಮತ್ತು ಅವಕಾಶಗಳ ರಚನೆಗಳು ಎರಡು ಜಗತ್ತಿನಲ್ಲಿ ಯಾವಾಗಲೂ ಒಂದೇ ಬಗೆಯದಾಗಿರುವುದಿಲ್ಲ. ಘಟನೆಗಳ ತರ್ಕವೂ ವಿಭಿನ್ನವಾಗಿರುತ್ತದೆ. ಮನುಷ್ಯನು ತನ್ನ ಕಾಲಾವಧಿಯಲ್ಲಿ ಈ ಗ್ರಹದಲ್ಲಿ ರೂಪಿಸಿದ ಭಾಷೆಯು ಮಂತ್ರವಿದ್ಯೆಯ ಅಮೂರ್ತ ಜಗತ್ತನ್ನು ವಿವರಿಸಲು ಅತ್ಯಂತ ಅಸಮರ್ಥವಾಗಿದೆ. ಈ ಕಟ್ಟಾ ಜಗತ್ತಿನಲ್ಲಿ ಮನುಷ್ಯನು ಪರಿಣಾಮಕಾರಿಯಾಗಿ ವ್ಯವಹರಿಸಲು ರೂಢಿಸಿಕೊಂಡ ಭಾಷಾ ಅಭ್ಯಾಸಗಳು, ಆತ ಒಮ್ಮೆ ತನ್ನ ಅತ್ಯಂತ ಒಳ ಅನುಭವಗಳನ್ನು ಮತ್ತು ಚೈತನ್ಯಮಯ ಒಳ ಜಗತ್ತಿನ ತಳಮಳವನ್ನು ಅಭಿವ್ಯಕ್ತಿಸಬೇಕಾದರೆ ಅತ್ಯಂತ ಅಪ್ರಸ್ತುತವಾಗಿ ಕಾಣಿಸುತ್ತವೆ. ಆದರೆ ಮನುಷ್ಯನಿಗೆ ತನ್ನ ಸಹಚರರ ಜೊತೆಗೆ ಸಂವಹನ ಮಾಡಲು ಪರಿಚಯ ಇರುವ ಸಾಧನ ಇದೊಂದೇ ಆಗಿದೆ.

ಈ ವಾಸ್ತವಿಕ ಜಗತ್ತಿನಲ್ಲಿ ಬದುಕುತ್ತಿರುವ ಮೂರ್ತ ವ್ಯಕ್ತಿಯ ಅಗತ್ಯಗಳಿಗೆ ಅನುಗುಣವಾಗಿ ಭಾಷೆಯೂ ಮೂರ್ತ ಮತ್ತು ವಾಸ್ತವಿಕವಾಗುತ್ತದೆ. ಮಂತ್ರವಿದ್ಯೆಯ ಪರಿಚಯ ಇರುವವರು ಮತ್ತು ಅದನ್ನು ಇತರರಿಗೆ ತಿಳಿಸಿಕೊಡಬೇಕು ಎಂದು ಬಯಸುವವರು ಇದೇ ಭಾಷೆಯನ್ನು ಬಳಸುತ್ತಾರಾದರೂ, ಅವರು ಕೆಲವು ರೂಪಾಂತರಗಳನ್ನು ಮಾಡಿಕೊಂಡು ಕೆಲವು ನಿಯಮಗಳನ್ನು ರೂಪಿಸುತ್ತಾರೆ. ಉದಾಹರಣೆಗೆ ಮಂತ್ರವು ಸಹಜವಾಗೇ ನಾವೆಲ್ಲರೂ ಬಳಸುವ ಭಾಷೆಯನ್ನೇ ಬಳಸುತ್ತದೆ. ಆದರೆ ಅದರೊಳಗೆ ಅಡಕವಾಗಿರುವ ಉದ್ದೇಶಗಳು ತುಂಬಾ ವಾಚ್ಯವಾಗಿರುವ ಬದಲಿಗೆ ಸೂಚ್ಯವಾಗಿರುತ್ತವೆ; ವಾಸ್ತವದ ಬದಲಿಗೆ ನಿಗೂಢವಾಗಿರುತ್ತವೆ; ಸಾರ್ವಜನಿಕವಾಗಿರುವ ಬದಲಿಗೆ ಖಾಸಗಿಯಾಗಿರುತ್ತವೆ. ಹಾಗೆ ನೋಡಿದರೆ ಮಂತ್ರವು ಚಹರೆಯೊಂದರ ಪ್ರಕೃತಿ ಎನ್ನಬಹುದು.

ತಾಂತ್ರಿಕ ಚೌಕಟ್ಟಿನಲ್ಲಿ ಮಂತ್ರಕ್ಕೆ ತನ್ನದೇ ಆದ ಒಂದು ವ್ಯಾಕರಣ ಇದೆ, ಅದರದ್ದೇ ಆದ ಶಬ್ದಾರ್ಥವನ್ನು, ಜ್ಞಾಪಕಸೂತ್ರ ಸಿದ್ಧಾಂತವನ್ನು ಹೊಂದಿದೆ. ತಂತ್ರವು ಸಂಸ್ಕೃತದ ವರ್ಣಮಾಲೆಯನ್ನು ಅಮೂರ್ತ ಮತ್ತು ಪ್ರಾಚೀನ ಶಬ್ದ ಘಟಕಗಳ (ವರ್ಣ) ಒಂದು ಜಾಲ ಎಂದು ಪರಿಗಣಿಸುತ್ತದೆ. ಪ್ರತಿಯೊಂದು ಶಬ್ದಘಟಕವು, (ಅಥವಾ ಅಕ್ಷರವು) ಒಂದು ನಿರ್ದಿಷ್ಟ ಶಕ್ತಿಯನ್ನು ಪ್ರತಿನಿಧಿಸುತ್ತದೆ. ವ್ಯಕ್ತಿಯೊಳಗೆ ಮತ್ತು ಹೊರ ಜಗತ್ತಿನಲ್ಲಿ ಕೆಲಸ ಮಾಡುವ ಅಮೂರ್ತ ಶಕ್ತಿಗಳು ಈ ಶಬ್ದ ಘಟಕಗಳಿಗೆ ಮಣಿಯುತ್ತವೆ. ಮಂತ್ರದ ಸಮರ್ಥ ಉಚ್ಚಾರಣೆಯಿಂದ ವ್ಯಕ್ತಿಯ ಶಕ್ತಿಯನ್ನು ಸಮೃದ್ಧಗೊಳಿಸಲಾಗುತ್ತದೆ, ಸಂಘಟಿಸಲಾಗುತ್ತದೆ, ಸರಿಪಡಿಸಲಾಗುತ್ತದೆ. ಯಾವುದೋ ಮಂತ್ರವೊಂದು ಯಾವುದೋ ವ್ಯಕ್ತಿಗೆ ಹೊಂದಿಕೆಯಾಗುವುದಿಲ್ಲ. ಪ್ರತೀ ವ್ಯಕ್ತಿಗೆ ನಿರ್ದಿಷ್ಟವಾಗಿರುವ ಶಬ್ದಘಟಕಗಳನ್ನು ಹೊಂದಿಸಬೇಕಾಗುತ್ತದೆ. ವ್ಯಕ್ತಿಯೊಬ್ಬನಿಗೆ ಬಳಸುವ ಮಂತ್ರವನ್ನು ಅವನ ದೈಹಿಕ ಮತ್ತು ಮಾನಸಿಕ ರಚನೆ, ಸಾಂಸ್ಕೃತಿಕ ಹಿನ್ನೆಲೆ, ಅವನ ಒಲವುಗಳು, ಅಗತ್ಯಗಳನ್ನು ಪರಿಶೀಲಿಸಿ ಆಯ್ಕೆ ಮಾಡಲಾಗುತ್ತದೆ.

ಮಂತ್ರದ ಇನ್ನೊಂದು ಮಾಧ್ಯಮ (ಅಂದರೆ ತಂತ್ರ) ಎಂದರೆ ಯಂತ್ರ, ಅಥವಾ ವ್ಯಕ್ತಿಯೊಬ್ಬನ ಒಳಗೆ ಅಮೂರ್ತ ಸ್ತರದಲ್ಲಿ ಕೆಲಸ ಮಾಡುವ ಮತ್ತು ನಮಗೆ ಗೊತ್ತಿರುವ ಜಗತ್ತಿನ ಒಳಗೇ ಅದೃಶ್ಯವಾಗಿರುವ ಶಕ್ತಿಗಳು, ಬಲಗಳು ಮತ್ತು ದಿಕ್‌ಪ್ರಮಾಣರೇಖೆಗಳ ದೃಶ್ಯರೂಪದ ಪ್ರತಿಮೆಗಳು ಎನ್ನಬಹುದು. ಯಂತ್ರವು ಸಾಮಾನ್ಯವಾಗಿ ವ್ಯಕ್ತಿ ಮತ್ತು ಅವನ ಸುತ್ತ ಇರುವ ಭೌತಿಕ ಜಗತ್ತನ್ನು ಒಳಗೊಂಡ ಅವಿಚ್ಛಿನ್ನ ಪ್ರಜ್ಞೆಗೆ (undifferentiated conciousness) ತೀರಾ ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ. ಮಂತ್ರವು ಶಾಬ್ದಿಕ ಸಂಕೇತಗಳನ್ನು ಬಳಸಿದರೆ ಯಂತ್ರವು ಚಿತ್ರ ವಿನ್ಯಾಸಗಳನ್ನು ಬಳಸುತ್ತದೆ. ಮಂತ್ರದಲ್ಲಿ ಮನುಷ್ಯನ ಇಡೀ ಭಾಷಿಕ ವರ್ತನೆಯು ಅತ್ಯಗತ್ಯವಾದ ಮತ್ತು ಅಕ್ಷಯವಾದ ಶಬ್ದಘಟಕಗಳಾದರೆ (ಬೀಜಾಕ್ಷರಗಳು), ಯಂತ್ರದಲ್ಲಿ ಮನುಷ್ಯನಿಗೆ ದಕ್ಕುವ ಇಡೀ ದೃಗ್ಗೋಚರ ಜಗತ್ತು ತೀರಾ ಅತ್ಯಗತ್ಯವಾದ ಮತ್ತು ಜಾಗತಿಕ ರೂಪಘಟಕಗಳಾಗುತ್ತವೆ (ಬಿಂದು, ವೃತ್ತ, ತ್ರಿಕೋನ, ಚೌಕ ಹೀಗೆ).

ಟಿಬೆಟ್ಟಿನ ಮಿಶ್ರಾಕ್ಷರ ಯಂತ್ರ



ಟಿಬೆಟ್ಟಿನ ಇನ್ನೊಂದು ಅಕ್ಷರ ಯಂತ್ರ



ಟಿಬೆಟ್ಟಿನ ಮತ್ತೊಂದು ಅಕ್ಷರ ಯಂತ್ರ;
ದೇವತಾ ಪೂಜೆಯ ರೂಪದಲ್ಲಿರುವ ಮೌಖಿಕ ಸಂಕೇತಗಳು

ಒಂದಲ್ಲ ಒಂದು ರೂಪದ ಮಾಂತ್ರಿಕ ಶಬ್ದಪ್ರಯೋಗಗಳು ಮತ್ತು ನಿಗೂಢ ಚಿತ್ರಗಳು ಸದಾ ಮಾನವ ಪರಂಪರೆಯ ಅಂಶಗಳಾಗಿವೆ. ಭಾರತದಲ್ಲಿ ಸಿಂಧೂ ಕಣಿವೆ ನಾಗರಿಕತೆ ಎಂದು ಕರೆಯಲಾದ ಸ್ಥಳಗಳಲ್ಲಿ ಸಿಕ್ಕಿದ ಮುದ್ರೆಗಳು (ಕ್ರಿಸ್ತನಿಗಿಂತ ಸುಮಾರು ಮೂರು ಸಾವಿರ ವರ್ಷ ಹಿಂದಿನ ಕಾಲಕ್ಕೆ ಸೇರಿದ್ದು) ಆ ಜನರಲ್ಲಿ ರಹಸ್ಯ ಚಿತ್ರಗಳ ಪಂಥ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಅನುಮಾನವನ್ನೇ ಉಳಿಸುವುದಿಲ್ಲ. ವೇದಗಳಲ್ಲೂ, ಅದರಲ್ಲೂ ಮುಖ್ಯವಾಗಿ ಅಥರ್ವ ವೇದದಲ್ಲಿ ಮಂತ್ರಗಳು, ಮಾಯೆಗಳು ಮತ್ತು ನಿಗೂಢ ಚಿತ್ರಗಳ ಬಗ್ಗೆ ಉಲ್ಲೇಖವಿದೆ. ಈ ಪಠ್ಯಗಳಲ್ಲಿ ಇರುವ ಮಂತ್ರಗಳು ಬಲಪ್ರಯೋಗದ್ದೂ ಹೌದು, ಚಿಕಿತ್ಸಕವೂ ಹೌದು. ಅವುಗಳನ್ನು ಕಲ್ಯಾಣಸಾಧನೆಗಾಗಿ ಮತ್ತು ಕೆಟ್ಟದ್ದನ್ನು ನಾಶ ಮಾಡಲು ಬಳಸಲಾಗುತ್ತಿತ್ತು. ಈ ಮಂತ್ರಗಳೊಂದಿಗೆ ಹಲವು ಬಗೆಯ ಸಸ್ಯಗಳನ್ನು ಬಳಸಲಾಗುತ್ತಿತ್ತು. ಇಲ್ಲಿ ನಾವು ಕಾಣುವ ವೈದ್ಯಕೀಯ ಮತ್ತು ಮಂತ್ರವಿದ್ಯೆಯ ಸಂಬಂಧವು ಒಂದು ಪ್ರತ್ಯೇಕವಾದ ಘಟನೆಯಲ್ಲ. ಅದು ಎಲ್ಲಾ ಸಂಸ್ಕೃತಿಗಳಲ್ಲೂ ಇತ್ತು.

ಅಥರ್ವ ವೇದ ಸಂಹಿತೆಯಲ್ಲಿ ಮಂತ್ರವಿದ್ಯೆಯ ಎರಡು ವಿಭಾಗಗಳನ್ನು ಕಾಣಬಹುದು: ಉಪಕಾರಿ (ಅಥರ್ವ) ಮತ್ತು ಅಪಕಾರಿ (ಅಂಗೀರಸ). ಮೊದಲನೆಯ ವಿಭಾಗದಲ್ಲಿ ನಾವು ವೈಯಕ್ತಿಕವಾಗಿ ಮತ್ತು ಸಾಮುದಾಯಿಕವಾಗಿ ಹೊಂದುವ ಆರೋಗ್ಯ, ಸುಖ, ಕಲ್ಯಾಣಗಳನ್ನು (ಶಾಂತಿಕ, ಪೌಷ್ಟಿಕ ಇತ್ಯಾದಿ) ಆಚರಣೆಗಳು ಒಳಗೊಂಡಿವೆ. ಇನ್ನೊಂದು ವಿಭಾಗವು ಅಭಿಚಾರ, ಘೋರ, ಮಾರಣ, ಯಾತು, ಕೃತ್ಯ ಮುಂತಾದ ಚಿತ್ರಗಳನ್ನು ಒಳಗೊಂಡಿದೆ. ಹೀಗಿದ್ದೂ, ಮೊದಲನೆಯ ವಿಭಾಗವನ್ನೇ ಮುಖ್ಯ ಮತ್ತು ಮೌಲ್ಯವುಳ್ಳದ್ದು ಎಂದು ಪರಿಗಣಿಸಲಾಗಿತ್ತು. ಅಥರ್ವ ಸಿದ್ಧಾಂತದ ಪ್ರಕಾರ ನಿಗೂಢ ಮತ್ತು ಅದೃಶ್ಯ ಜಗತ್ತು ಕಾಯಿಲೆ, ತೊಂದರೆ, ಅಸಮಾಧಾನ ಮತ್ತು ಮುಜುಗರವನ್ನುಂಟು ಮಾಡುವ ಅಪಕಾರಿ ಆತ್ಮಗಳನ್ನು ಎರಡನೆಯ ವಿಭಾಗವು ಹೊಂದಿದೆ ಎಂದು ಗುರುತಿಸಲಾಗಿತ್ತು. ಇಂಥ ಹಲವು ಆತ್ಮಗಳನ್ನು ಹೆಸರಿಸಲಾಗಿತ್ತು: ಚಂಡಾ, ಅರಾಯಿ, ಕೋಕ, ದುರ್ನಾಮ, ಅರ್ಜುನಿ, ಗ್ರಾಹಿ, ನಿರೃತಿ, ಸದಾಹ್ವ, ಉಗ್ರಜಿಹ್ವಾ, ಮಲಿಮ್ಲುಚ್ಛ, ಪ್ರಮಾಲಿ, ಕಕೂರಭ ಹೀಗೆ. ಅವುಗಳನ್ನು ಹೇಗೆ ಒಲಿಸಿಕೊಂಡು, ಮೆದು ಮಾಡಿ ಅನುಕೂಲಕರವಾಗಿ ಪರಿವರ್ತಿಸಿಕೊಳ್ಳಬಹುದೆಂದು ವಿವರಿಸುವ ಚರಣಗಳಿವೆ.

ಅಥರ್ವ ವೇದದಲ್ಲಿ ವಿವರಿಸಲಾಗಿರುವ ಉಪಕಾರಿ ಮಂತ್ರವಿದ್ಯೆಯು ವಸ್ತುಶಃ ಚಹರೆಯಲ್ಲಿ ಜಾನಪದೀಯವಾಗಿದೆ. ಅದರಲ್ಲಿ ವಿವರಿಸಿರುವ ಸನ್ನಿವೇಶಗಳು ಆತ್ಮರಕ್ಷಣೆ, ಮನೆ ಮತ್ತು ಆಸ್ತಿಯ ರಕ್ಷಣೆ, ಸ್ವಂತ ಮತ್ತು ರಾಸುಗಳ ಆರೋಗ್ಯ, ಉದ್ಯಮದಲ್ಲಿ ಯಶಸ್ಸು, ಗೃಹಪ್ರವೇಶ, ಹೊಸದಾಗಿ ಕಟ್ಟಿದ ಕೆರೆಗಳನ್ನು ಪವಿತ್ರಗೊಳಿಸುವುದು, ಮನೆವಸ್ತುಗಳ ಭದ್ರತೆ, ಸುರಕ್ಷಿತ ಹೆರಿಗೆ, ಕಳೆದುಕೊಂಡ ಆಸ್ತಿಯನ್ನು ಮರಳಿ

ಪಡೆಯುವುದು, ಜ್ಞಾನದ ಗಳಿಕೆ, ಜ್ಞಾಪಕಶಕ್ತಿಯ ವೃದ್ಧಿ, ಭೌತಿಕವಾಗಿ ಸುದೃಢತೆಯನ್ನು ಹೊಂದುವುದು, ಐಶ್ವರ್ಯವನ್ನು ಸಂಪಾದಿಸುವುದು, ಅದೃಷ್ಟವನ್ನು ಪಡೆಯುವುದು, ಒಳ್ಳೆಯ ಚಹರೆಯನ್ನು ಹೊಂದುವುದು, ಪ್ರೀತಿಯನ್ನು ಗಳಿಸುವುದು, ನೈಸರ್ಗಿಕ ದುರಂತವನ್ನು ತಡೆಯುವುದು ಮತ್ತು ಅಪಘಾತಗಳನ್ನು ತಪ್ಪಿಸುವುದು – ಇವು ಸೇರಿವೆ. ಇವುಗಳಲ್ಲದೆ ಸಸ್ಯಗಳಿಂದ (ಅಪಾಮಾರ್ಗ, ರೋಹಿಣಿ, ದೂರ್ವ, ಔದುಂಬರ, ಪಲಾಸ ಇತ್ಯಾದಿ) ಮತ್ತು ಪ್ರಾಣಿಜನ್ಯ ಉತ್ಪನ್ನಗಳಿಂದ (ಜಿಗರೆಯ ಕೋಡು, ಹುಲಿಯ ಉಗುರು, ಕರಡಿಯ ಹಲ್ಲು ಇತ್ಯಾದಿ) ಮತ್ತು ಲೋಹಗಳಿಂದ (ತಾಮ್ರ, ಕಬ್ಬಿಣ, ಚಿನ್ನ ಇತ್ಯಾದಿ) ವಿವಿಧ ತಾಯಿತಗಳನ್ನು ತಯಾರಿಸಲಾಗುತ್ತಿತ್ತು ಮತ್ತು ಬಳಸಲಾಗುತ್ತಿತ್ತು. ನೆಲ ಅಥವಾ ಗೋಡೆಯ ಮೇಲೆ ಅಥವಾ ಚರ್ಮ ಅಥವಾ ಲೋಹದ ಮೇಲೆ ಬರೆದ ಚಿತ್ರಗಳು, ವಿನ್ಯಾಸಗಳನ್ನೂ ಮಂತ್ರದ ಲಾಭಗಳಿಗಾಗಿ ಬಳಸಲಾಗುತ್ತಿತ್ತು.

ಇಂದಿಗೂ ಈ ಸಂಪ್ರದಾಯಗಳಲ್ಲಿ ಹಲವು ಉಳಿದುಕೊಂಡು ಬಂದಿವೆ. ಇವು ಈ ಜನರಲ್ಲಿ ಅದರಲ್ಲೂ ಗ್ರಾಮೀಣ ಭಾಗಗಳಲ್ಲಿ ಉಳಿದುಕೊಂಡು ಬಂದಿವೆ. ಅವುಗಳನ್ನು ಹಿಂದೂಧರ್ಮದ ಜನಪ್ರಿಯ ಗ್ರಂಥಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಆಧುನಿಕ ಭಾರತೀಯ ಚಿಂತನೆಯು ಅವುಗಳನ್ನು ಖಂಡಿಸಿದರೂ ಅವು ವ್ಯಾಪಕವಾಗಿ ಬಳಕೆಯಲ್ಲಿವೆ. ಉಪಕಾರಿ ಮಂತ್ರವಿದ್ಯೆಗಳು (ಶಾಂತಿ, ವ್ಯಕ್ತಿಯು ಸುಖವಾಗಿರಲಿ ಎಂದು ಬಯಸಿ ಕೆಡುಕು ಶಕ್ತಿಗಳನ್ನು ಶಾಂತಗೊಳಿಸುವುದು; ಪೌಷ್ಟಿಕ, ವ್ಯಕ್ತಿಯನ್ನು ಪುಷ್ಟಿಗೊಳಿಸುವುದು ಅಂದರೆ ಸಹಜ ಅಗತ್ಯಗಳನ್ನು ಪೂರೈಸುವುದು; ಭೇಷಜ, ಕಾಯಿಲೆಗಳನ್ನು ವಾಸಿ ಮಾಡಿ ಆರೋಗ್ಯವನ್ನು ಮರಳಿ ಸ್ಥಾಪಿಸುವುದು) ಸಾಮಾನ್ಯ ಮತಾಚರಣೆಯ ಭಾಗಗಳಾಗಿವೆ. ವೇದಗಳಲ್ಲಿ ಹೇಳಿರುವಂತೆ ಯಜ್ಞ ಮತ್ತಿತರ ಆಚರಣೆಗಳನ್ನು ಮಾಡುವುದರ ಮತ್ತು ದೇವರುಗಳನ್ನು ಪೂಜಿಸುವುದರ ಜೊತೆಗೇ ಆರೋಗ್ಯ, ಸಿರಿ ಮತ್ತು ಸುಖವನ್ನು ಹೊಂದಲು ಮಂತ್ರಗಳನ್ನು ಮತ್ತು ತಾಯಿತಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

ಅಪಕಾರಿ ಮಂತ್ರವಿದ್ಯೆಯು (ಮಾಟ, ಭಾನಾಮತಿ ; ಉದಾಹರಣೆಗೆ ವಶೀಕರಣ, ಬಲಪ್ರಯೋಗ ಮಾಡಿ ಜನರ ಪ್ರೀತಿಯನ್ನು ಗಳಿಸುವುದು, ಸ್ತಂಭನ, – ವಿರೋಧಿಗಳ ಮಾತುಗಳನ್ನು ನಿಲ್ಲಿಸುವುದು, ವಿದ್ವೇಷನ, ಗೆಳೆಯರ ನಡುವೆ ವೈರತ್ವವನ್ನು ಉಂಟುಮಾಡುವುದು, ಉಚ್ಛಾಟನ, – ಮಾಟದ ಪ್ರಭಾವವನ್ನು ಬಳಸಿ ಶತ್ರುಗಳನ್ನು ಓಡಿಸುವುದು, ಮಾರಣ, ಸಾವನ್ನು ಉಂಟುಮಾಡುವುದು) ಸಹಜವಾಗಿ ಶಿಷ್ಟರಿಂದ ವಿರೋಧಕ್ಕೊಳಗಾಗಿದೆ. ಸಾಮಾನ್ಯ ಜನರು ಅವುಗಳನ್ನು ಬಳಸುವುದಿಲ್ಲ. ಅದು ಸಣ್ಣ ಮತ್ತು ರಹಸ್ಯವಾದ, ಗ್ರಾಮಾಂತರ ಜನರಿಗೇ ಸೀಮಿತವಾಗಿದೆ. ಯಾಕೆಂದರೆ ಇವುಗಳು ತೀರಾ ಕೆಡುಕಿನ ಸಂಗತಿಗಳು ಎಂದು ತಿಳಿಯಲಾಗಿದೆ. ಅವುಗಳನ್ನು ಆಚರಿಸುವವರು ಭಯ ಮತ್ತು ದ್ವೇಷಗಳನ್ನು ಉಂಟುಮಾಡುತ್ತಾರೆ. ಅವರನ್ನು ಬಹುತೇಕ ಬಹಿಷ್ಕೃತರೆಂದೇ ತಿಳಿಯಲಾಗುತ್ತದೆ.

ಅವರು, ತಾವು ಎಲ್ಲಾ ಬಗೆಯ ಆತ್ಮಗಳ (ಮುಖ್ಯವಾಗಿ ಹೆದರಿಸುವಂಥ ಹೆಸರುಗಳನ್ನು ಹೊಂದಿರುವ ಮತ್ತು ಅದೃಶ್ಯರೂಪದಲ್ಲಿರುವ ಪಿಶಾಚಿಗಳು, ಕಾಯಿಲೆ ಮತ್ತು ದುರಂತದ ದೆವ್ವಗಳು) ಮೇಲೆ ಪ್ರಭಾವವನ್ನು ಹೊಂದಿರುವೆವು ಎಂದು ಸುಳ್ಳು ಹೇಳುತ್ತಾರೆ. ಹಾಗೆಯೇ ಅವುಗಳನ್ನು ಅನುಕೂಲಕರವಾಗಿ ಇರುವಂತೆ ತಮ್ಮ ಗ್ರಾಹಕರ ಪರವಾಗಿ ಒತ್ತಡ ಹೇರುವುದಾಗಿ ಹೇಳುತ್ತಾರೆ. ಈ ಕರಾಳ ಮತ್ತು ಅಪಾಯಕಾರಿ ಕಲೆಯನ್ನು ಆಚರಿಸುವವರು ಹೊಂದಿರುವ ಮಂತ್ರಗಳು, ತಾಯಿತಗಳು, ವಿನ್ಯಾಸಗಳು ಮತ್ತು ಚಿತ್ರಗಳ ಅಪಾರ ಸಂಗ್ರಹವು ಅಚ್ಚರಿ ಹುಟ್ಟಿಸುತ್ತದೆ. ಇವುಗಳಲ್ಲಿ ಬಹುತೇಕ ಚಿತ್ರಗಳು ಅಸಂಬದ್ಧವಾಗಿದ್ದರೂ ಕೆಲವು ಮಾತ್ರ ಶಾಬ್ದಿಕ, ದೃಶ್ಯರೂಪದ ಮತ್ತು ತೀವ್ರ ಭಾವನೆಗಳನ್ನು ಬಿಂಬಿಸುವಲ್ಲಿ ತುಂಬಾ ಮಹತ್ವವನ್ನು ಹೊಂದಿವೆ ಎಂದು ಒಪ್ಪಿಕೊಳ್ಳಲೇಬೇಕು.

2. ಯಂತ್ರಗಳು ಎಂದರೇನು ?

'ಯಂತ್ರ' ಪದದ ಅಭಿವ್ಯಕ್ತಿಯು 'ಯಮ್' (ಉಣಾದಿ 4,133) ದಿಂದ ಹುಟ್ಟಿದೆ ಅಥವಾ ಪರ್ಯಾಯವಾಗಿ ಹೇಳುವುದಾದರೆ 'ಯಂತ್ರಾತಿ' (ಅಥವಾ 'ಯಂತ್ರಯತಿ') (ಧಾತುಪಾಠ, 32,3) ರೂಪದಿಂದ ಬಂದಿದೆ. ಎರಡು ಪ್ರಕರಣಗಳಲ್ಲೂ ಅರ್ಥ 'ನಿರ್ಬಂಧಿಸುವುದು', 'ಬಲವಂತ ಮಾಡುವುದು', 'ಬಗ್ಗಿಸುವುದು' ಎಂದೇ ಆಗಿದೆ. ಹಿಂದೆ ಈ ಪದವನ್ನು ಬಳಸುತ್ತಿದ್ದ ಹಿನ್ನೆಲೆಯು ಯಾಂತ್ರಿಕ ರಚನೆಗಳಿಗೆ ಸಂಬಂಧಿಸಿತ್ತು. ಈ ಹಿನ್ನೆಲೆಯಲ್ಲಿ 'ಯಂತ್ರ'ವು ಒಂದು ಯಂತ್ರ , ಒಂದು ಸಾಧನ. ಇಲ್ಲಿ 'ಗೃಹಯಂತ್ರ' (ಮನೆಯ ಮುಂದೆ ಅಥವಾ ಮನೆಯ ಮೇಲೆ ಧ್ವಜ ಮತ್ತು ತೋರಣಗಳನ್ನು ಕಟ್ಟಲು ಸ್ಥಾಪಿಸಿದ ಕಂಬ), 'ಕೂಪಯಂತ್ರ' (ಬಾವಿಯಿಂದ ನೀರನ್ನು ಎಳೆಯಲು ಬಳಸುವ ರಚನೆ), 'ತೈಲ ಯಂತ್ರ' (ಎಣ್ಣೆಯನ್ನು ತೆಗೆಯಲು ಬಳಸುವ ರಚನೆ), 'ಯಂತ್ರೋಪಲ' (ಗಿರಣಿ ಕಲ್ಲು), 'ಯಂತ್ರಗೃಹ' (ಎಣ್ಣೆ ಗಿರಣಿ), 'ದಾರು ಯಂತ್ರ' (ತಿರುಗಿಸಲು ಬಳಸುವ ಮರದ ಸಾಧನ) ಮತ್ತು 'ಯಂತ್ರಪುತ್ರಿಕ' (ದಾರಗಳಿಂದ ಎಳೆಯಲಾಗುವ ಕೀಲುಗೊಂಬೆ ಅಥವಾ ಗೊಂಬೆ) ಮುಂತಾದ ಉದಾಹರಣೆಗಳನ್ನು ಇಲ್ಲಿ ನೀಡಬಹುದು. ಭಗವದ್ಗೀತೆಯಲ್ಲಿ ಒಂದು ತಿರುಗುವ ಸಾಧನಕ್ಕೆ ಜೋಡಿಸಿದ ಬೊಂಬೆಯ ನಿದರ್ಶನವನ್ನು ಕಾಣಬಹುದು ('ಯಂತ್ರಾರೂಢಾನಿ', 18,61). ಬಹುಶಃ ಇದು ಒಂದು ಗೊಂಬೆ ಅಥವಾ ಒಂದು ತಿರುಗುಯಂತ್ರವನ್ನು ಸೂಚಿಸುತ್ತದೆ. ಖಗೋಳಶಾಸ್ತ್ರ, ವಾಸ್ತುಶಾಸ್ತ್ರ, ರಸವಿದ್ಯೆ ಮತ್ತು ಸಂಬಂಧಿತ ಶಾಸ್ತ್ರಗಳ ಮೇಲಿನ ಮಧ್ಯಕಾಲೀನ ಮತ್ತು ಪ್ರಾಚೀನ ಕೃತಿಗಳಲ್ಲಿ ಹಲವು 'ಯಂತ್ರ'ಗಳನ್ನು ಉಲ್ಲೇಖಿಸಲಾಗಿದೆ.

ಈ ಪದವನ್ನು ಶಸ್ತ್ರಚಿಕಿತ್ಸೆಯ ಸಾಧನಗಳಿಗೆ ಅದರಲ್ಲೂ ಮೊಂಡು (blunt) ಸಾಧನಗಳಿಗೆ ಅನ್ವಯಿಸಲಾಗಿದೆ (ಕತ್ತರಿಸುವ ಸಾಧನಗಳಿಗಿಂತ ಭಿನ್ನವಾದವು, ಅವುಗಳನ್ನು 'ಶಸ್ತ್ರಗಳು' ಎಂದು ಕರೆಯುತ್ತಿದ್ದರು). ಪ್ರಾಚೀನ ಭಾರತದ ಅತಿಪ್ರಸಿದ್ಧ ಶಸ್ತ್ರಚಿಕಿತ್ಸೆಯ ಗ್ರಂಥವಾದ ಸುಶ್ರುತ ಸಂಹಿತವು 'ಸಂದಂಶ ಯಂತ್ರ' (ಹಿಡಿಯುವ ಸಾಧನಗಳು), 'ತಲಯಂತ್ರ' (ಹಿಡಿಕೆ ಇರುವ ಸಾಧನಗಳು), 'ನಾಡಿ ಯಂತ್ರ' (ಕೊಳವೆಯಾಕಾರದ ಸಾಧನಗಳು) ಮತ್ತು 'ಶಾಲಾಕ್ಯ ಯಂತ್ರ' (ತೆಳುವಾದ ಸೂಜಿಗಳು) ಮುಂತಾದವುಗಳನ್ನು ಉಲ್ಲೇಖಿಸುತ್ತದೆ. ಇಲ್ಲಿ 'ಉಪಯಂತ್ರಗಳು' ಎಂದು ಹೆಸರಾದ ಸಹಾಯಕ ಸಾಧನಗಳ ಉಲ್ಲೇಖವೂ ಇದೆ.

ಆನಂತರದ ಒಂದು ಕಾಲದವರೆಗೂ 'ಯಂತ್ರ' ಪದದ ಅಭಿವ್ಯಕ್ತಿಯನ್ನು ರಹಸ್ಯ ವಿನ್ಯಾಸಗಳು ಮತ್ತು ಮಂತ್ರವಿದ್ಯೆಯ ಚಿತ್ರಗಳಿಗೆ ಸೂಚಿಸುವ ಅಭ್ಯಾಸ ಜಾರಿಗೆ ಬಂದಿರಲಿಲ್ಲ. 'ಯಂತ್ರಣಮ್' ('ಪೂರ್ವಪದವಾಗಿ ಲ್ಯುತ್ ಸೇರದೆ ಇರುವ 'ಯಂತ್ರ') ಎಂಬುದನ್ನು 'ರಕ್ಷಣೆ', 'ಕಾಯುವುದು', 'ನಿರ್ಬಂಧಿಸುವುದು' ಅಥವಾ 'ಆವರಿಸುವುದು', (ರಕ್ಷಣಂ, ಬಂಧನಂ, ನಿಯಮನಂ) ಮುಂತಾದ ಅರ್ಥಗಳನ್ನು ಸೂಚಿಸುತ್ತದೆ ಎಂದು ಸಮರ್ಥಿಸಿಕೊಳ್ಳಲಾಯಿತು. ಇದು ವ್ಯುತ್ಪತ್ತಿಯಲ್ಲಿ 'ರಕ್ಷಿಸುವುದು', ಅಥವಾ 'ಮಿತಿಗೊಳಪಡಿಸುವುದು' ('ಯಂತ್ರ ಸಂಕೋಚನೆ') ಎಂಬ ಅರ್ಥದ ವಿಸ್ತರಣೆಯಾಗಿದೆ. ಇದೇ ಅರ್ಥದಲ್ಲಿ ಸುಶ್ರುತ ಸಂಹಿತೆಯಲ್ಲಿ ಸಹ ಈ ಪದವನ್ನು ಬಳಸಿರುವುದನ್ನು ನಾವು ಕಾಣಬಹುದು.

ಇಂಥ ವಿನ್ಯಾಸಗಳನ್ನು ರಕ್ಷಣೆಗೆ ಎಂದು ಅನ್ವಯಿಸುವುದು ಒಂದು ಪ್ರಾಚೀನ ಆಚರಣೆಯಾಗಿತ್ತು. ಅವುಗಳ ಮಾದರಿಗಳನ್ನು ಎಲ್ಲಾ ದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಪೌರ್ವಾತ್ಯ ದೇಶಗಳಲ್ಲಿ ಕಂಡುಹಿಡಿಯಲಾಗಿದೆ. ಅರ್ಹ ಅರ್ಚಕರು ಮತ್ತು ಶಮಾನ್‌ಗಳು ಸಾಂಪ್ರದಾಯಿಕವಾಗಿ ರೂಪಿಸಿದ ವಿನ್ಯಾಸಗಳು ವಿಚಿತ್ರವಾದ, ವಿಶಿಷ್ಟವಾದ ಮತ್ತು ಅಲೌಕಿಕವಾದ ಶಕ್ತಿಯನ್ನು ಹೊಂದಿವೆ ಎಂದು ನಂಬಲಾಗಿತ್ತು. ಅವುಗಳನ್ನು ವೈಯಕ್ತಿಕವಾಗಿ ಬಳಸುವವರ ಉದ್ದೇಶಗಳು, ನಿರೀಕ್ಷೆಗಳು ಯಾವುದೇ ಹೆಚ್ಚಿನ ತೊಂದರೆಯಿಲ್ಲದೆ ಮತ್ತು ಖಂಡಿತವಾಗಿಯೂ ಯಾವುದೇ ಅಡ್ಡಿಯಿಲ್ಲದೆ ಪೂರೈಕೆಯಾಗುತ್ತವೆ ಎಂದೂ ನಂಬಲಾಗಿತ್ತು. ಇದು ಒಂದು ಸಂಪ್ರದಾಯದ ಆಚರಣೆಯಾದ್ದರಿಂದ ಕೇವಲ ಈ ರಕ್ಷಕ ಸಾಧನಗಳನ್ನು ರೂಪಿಸುವಲ್ಲಿ ಮಾತ್ರ ಅತ್ಯಂತ ಜಾಗರೂಕತೆಯನ್ನು ವಹಿಸಲಾಗುತ್ತಿರಲಿಲ್ಲ, ಅವುಗಳನ್ನು ಆಚರಿಸಲೂ ಸಹ ತುಂಬಾ ಎಚ್ಚರಿಕೆ ವಹಿಸಲಾಗುತ್ತಿತ್ತು. ವಿವಿಧ ರಕ್ಷಕ ಉದ್ದೇಶಗಳಿಗೆ ವಿವಿಧ ವಿನ್ಯಾಸಗಳಿದ್ದವು: ವ್ಯಕ್ತಿಯ ರಕ್ಷಣೆ, ಮನೆಮಾರುಗಳ ರಕ್ಷಣೆ, ಆಸ್ತಿಯ ರಕ್ಷಣೆ, ರಾಸುಗಳ ರಕ್ಷಣೆ, ಜನರ ರಕ್ಷಣೆ, ಕಟ್ಟಡಗಳ ರಕ್ಷಣೆ ಹೀಗೆ. ಅಲ್ಲಿ ಸಾಮುದಾಯಿಕ ವಿನ್ಯಾಸಗಳು ಇದ್ದವು. ಇವುಗಳನ್ನು ಕಲ್ಲುಬಂಡೆಗಳ ಮೇಲೆ ಸಾಮುದಾಯಿಕ ಒಡೆತನದ ಚಿತ್ರಗಳಾಗಿ ಕಾಣಬಹುದು. ಇವುಗಳನ್ನು ಇಡೀ ಸಮುದಾಯವೇ ಒಟ್ಟಾಗಿ ಆಚರಿಸುತ್ತಿತ್ತು. ಅಲ್ಲಿ ಕಾಗದದ ಮೇಲೆ (ರೇಖಾ ಯಂತ್ರ), ಲೋಹಗಳ ಮೇಲೆ ಬಿಡಿಸಿದ ವ್ಯಕ್ತಿಗತ ಮತ್ತು ಖಾಸಗಿ ವಿನ್ಯಾಸಗಳೂ ಇದ್ದವು. ಇವುಗಳನ್ನು ಮನೆಗಳಲ್ಲಿ ಇಡಲಾಗುತ್ತಿತ್ತು ಮತ್ತು ಮನೆಯವರೆಲ್ಲರೂ ಅದನ್ನು ಪೂಜಿಸುತ್ತಿದ್ದರು (ಪೂಜಾ ಯಂತ್ರ). ಅಥವಾ ಒಂದು ತಾಯಿತದಂತೆ ಅದನ್ನು ವ್ಯಕ್ತಿಯು ತನ್ನ ದೇಹದಲ್ಲಿ ಧರಿಸಿಕೊಳ್ಳುತ್ತಿದ್ದ (ಧಾರಣ ಯಂತ್ರ).

ಯಂತ್ರಗಳಲ್ಲಿ ಇರುವ ರಕ್ಷಣಾ ಶಕ್ತಿಯು ಅದರ ಆಕಾರ ಮತ್ತು ವಿನ್ಯಾಸದಲ್ಲಿರುತ್ತದೆ ಎನ್ನಲಾಗಿದೆ. ಒಂದು ಅಥವಾ ಅದಕ್ಕಿಂತ ಹೆಚ್ಚಿನ ಜ್ಯಾಮಿತಿಯ ವಿನ್ಯಾಸಗಳನ್ನು ಅನ್ಯೋನ್ಯವಾಗಿ ಬೆರೆಸಿ ಒಂದು ಸಂಪೂರ್ಣ ವಿನ್ಯಾಸವಾಗಿರುವ ಆಕಾರಗಳು

ಯಾರೊಬ್ಬರೂ ಶಕ್ತಿ ಮತ್ತು ಒತ್ತಾಸೆಗಳನ್ನು ಪಡೆಯಲು ಸಂವಹನ ಸಾಧಿಸಬೇಕೆಂದಿರುವ ಶಕ್ತಿಗಳನ್ನು ಪ್ರತಿನಿಧಿಸುತ್ತವೆ ಎಂದು ನಂಬಲಾಗಿದೆ.

ಯಂತ್ರವು ಶಕ್ತಿಗಳು ವಾಸಿಸಲು ಮತ್ತು ಕಾರ್ಯಾಚರಿಸಲು ಬೇಕಾದ ತಾಣದ ಸ್ವರೂಪದಲ್ಲಿರುತ್ತದೆ. ಪ್ರತಿಯೊಂದು ಯಂತ್ರವೂ ಸ್ವಸಾಮರ್ಥ್ಯ, ಸ್ವತಂತ್ರ, ಸಂಪೂರ್ಣ ಮತ್ತು ಬಾಹ್ಯ ವಸ್ತುಗಳ ವಿರುದ್ಧ ರಕ್ಷಿತವಾಗಿ ಇರುತ್ತದೆ. ಇವುಗಳನ್ನು ಯಂತ್ರದ ಪ್ರಧಾನ ವಿನ್ಯಾಸದ ಸುತ್ತ ಹಾಕಲಾಗುವ ನಿಖರವಾದ ಗಡಿ ರೇಖೆಗಳ ರೂಪದಲ್ಲಿ ಕಾಣಬಹುದು. ಗಡಿರೇಖೆಗಳು ಪ್ರಧಾನ ವಿನ್ಯಾಸದಲ್ಲಿ (ಸಾಮಾನ್ಯವಾಗಿ ಕೇಂದ್ರಭಾಗದಲ್ಲಿ) ಇರುವ ಮಂತ್ರಶಕ್ತಿಯನ್ನು ರಕ್ಷಿಸಲು ಮಾತ್ರವಲ್ಲ, ಈ ಶಕ್ತಿಯ ಸೋರುವಿಕೆಯನ್ನು ತಡೆಯಲೂ ಬಳಕೆಯಾಗುತ್ತದೆ. ಯಂತ್ರದಲ್ಲಿ ಇರುವ ಇತರೆ ಜ್ಯಾಮಿತಿ ಆಕಾರಗಳು ಈ ಮಂತ್ರಶಕ್ತಿಯನ್ನು ವೃದ್ಧಿಸಲು, ಗುಣಮಟ್ಟವನ್ನು ಹೆಚ್ಚಿಸಲು ಮತ್ತು ನಿರೀಕ್ಷಿತ ದಿಕ್ಕಿನಲ್ಲಿ ಶಕ್ತಿಯು ಸಂಚರಿಸುವಂತೆ ಮಾಡಲು ಬಳಕೆಯಾಗುತ್ತವೆ.

ಬಿಂದುಗಳು, ರೇಖೆಗಳು, ತ್ರಿಕೋನಗಳು ಮತ್ತು ಚೌಕಾಕಾರಗಳನ್ನು ಒಳಗೊಂಡ ಆಕಾರಗಳು ವಿವಿಧ ಬಗೆಗಳಲ್ಲಿ ಶಕ್ತಿಯನ್ನು ಪ್ರತಿನಿಧಿಸುತ್ತವೆ. ಬಿಂದುವು ಶಕ್ತಿಯ ಕೇಂದ್ರ ಅಂಶ. ಅದು ಶಕ್ತಿಯ ತೀವ್ರ ಸಾಂದ್ರೀಕರಣದ ಸಂಕೇತ. ಅದು ಶಕ್ತಿಯ ದಾಸ್ತಾನು ಕೇಂದ್ರದಂತೆ ಕಾರ್ಯಾಚರಿಸುತ್ತದೆ. ಅದರಿಂದ ಬೇರೆ ಸ್ವರೂಪಗಳಲ್ಲಿ ಶಕ್ತಿಯನ್ನು ಪಡೆದುಕೊಳ್ಳಲಾಗುತ್ತದೆ. ಅದನ್ನು ಚೈತನ್ಯದ ಮನೆ ಎಂದು ಬಣ್ಣಿಸಲಾಗಿದೆ. ಚೈತನ್ಯವನ್ನೂ ಸಹ ಬೀಜಾಕ್ಷರದಿಂದ ಸಾಂಕೇತಿಕವಾಗಿ ಗುರುತಿಸುವಾಗ, ಈ ಅವಿನಾಶಿ ಬೀಜಾಕ್ಷರವನ್ನು ಬಿಂದುವಿನ ಮೇಲೆ ಬರೆಯಲಾಗುತ್ತದೆ. ಈ ಬಿಂದುವು ಹಲವು ಆಕಾರಗಳಿಂದ ಸುತ್ತುವರೆದಿರುತ್ತದೆ; ಉದಾಹರಣೆಗೆ ತ್ರಿಕೋನ, ಪರಸ್ಪರ ಛೇದಿತ ಎರಡು ತ್ರಿಕೋನಗಳು, ಒಂದು ವೃತ್ತ ಹೀಗೆ. ಈ ಆಕಾರಗಳು ಚೈತನ್ಯದ ಬಾಹ್ಯ ಅವತರಣಿಕೆಯನ್ನು ಬಿಂಬಿಸುತ್ತವೆ. ಹೀಗೆ ಮಾಡಿದಾಗ ಅವು ಚೈತನ್ಯದ ಪ್ರಭಾವವನ್ನು ನಿರೀಕ್ಷಿತ ದಿಕ್ಕಿನತ್ತ ಒಯ್ಯುತ್ತವೆ. ಒಂದು ರೇಖೆಯು ಚೈತನ್ಯದ ಚಲನವಲನವನ್ನು ಬಿಂಬಿಸುತ್ತದೆ. ಅಂದರೆ ಚೈತನ್ಯರೇಖೆ. ಒಂದು ತ್ರಿಕೋನವು ಮೂರು ಸ್ತರದ ಚೈತನ್ಯದ ರೇಖೆಗಳ ವಿನ್ಯಾಸವನ್ನು ಬಿಂಬಿಸುತ್ತದೆ. ತ್ರಿಕೋನಗಳ ರೇಖೆಗಳು ಚೈತನ್ಯದ ಅಂಶಗಳು ಅಥವಾ ಸಹಕಾರಿಗಳು ಎಂದು ಬಣ್ಣಿಸಲಾಗಿದೆ.

ಸರಳ ಆಕಾರಗಳ ಪರಸ್ಪರ ಛೇದನಗಳು (ರೇಖೆಗಳು, ತ್ರಿಕೋನಗಳು, ಚೌಕಗಳು ಇತ್ಯಾದಿ) ಅತ್ಯಂತ ಶಕ್ತಿಯುತ ಎಂದು ತಿಳಿಯಲಾಗಿದೆ. ಯಾಕೆಂದರೆ ಅವು ಚೈತನ್ಯ ರೇಖೆಗಳ ಚಲನಶೀಲ ಛೇದನವನ್ನು ಒಳಗೊಂಡಿರುತ್ತವೆ. ಈ ಛೇದನಗಳಿಂದ ಉಂಟಾದ ಅವಕಾಶಗಳು ಚೈತನ್ಯದಿಂದ ಪ್ರಸರಣವಾಗುವ ಪ್ರಭಾವದ ವಿಶೇಷ ಕ್ಷೇತ್ರಗಳು ಎಂದು ಬಣ್ಣಿಸಲಾಗಿದೆ (ಬಿಂದುವೇ ಅದರ ಕೇಂದ್ರ ಸ್ಥಳ ಅಥವಾ ಮನೆ). ಹಾಗೆಂದೇ ಚೈತನ್ಯದ

ಜೊತೆ ಸಂಬಂಧ ಹೊಂದಿದ ಬೀಜಾಕ್ಷರಗಳನ್ನು ಅವುಗಳ ಮೇಲೆ ಬಿಡಿಸಲಾಗುತ್ತದೆ. ಕೆಲವೊಮ್ಮೆ ಇಡೀ ಸೂತ್ರವೇ ಈ ಅವಕಾಶಗಳಲ್ಲಿ ಮೂಡುತ್ತದೆ. ಯಂತ್ರವು ಹೊಂದಿರುವ ಶಕ್ತಿಯು ಅದರೊಳಗೆ ಸೂಕ್ತವಾದ ಮಂತ್ರವನ್ನು ಬರೆಯುವುದರಿಂದ ವೃದ್ಧಿಸುತ್ತದೆ ಎಂದು ಹೇಳಲಾಗಿದೆ. ಯಾಕೆಂದರೆ ಯಂತ್ರ ಮತ್ತು ಮಂತ್ರಗಳು ಚೈತನ್ಯದ ಪರಸ್ಪರ ಪೂರಕ ಅಂಶಗಳು. ಹಾಗೆಯೇ ಎರಡೂ ಒಟ್ಟಿಗೆ ಇದ್ದಾಗ ಪ್ರತ್ಯೇಕವಾಗಿ ಇದ್ದಾಗ ಹೊಂದುವ ಪ್ರಭಾವಕ್ಕಿಂತ ಹೆಚ್ಚಿನ ಪ್ರಭಾವವನ್ನು ಹೊಂದಿರುತ್ತವೆ.

ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ರಕ್ಷಿಸಲು ಯಂತ್ರವನ್ನು ತಯಾರಿಸಿದಾಗ ಅದರ ನಾಭಿಭಾಗದಲ್ಲಿ, ರಕ್ಷಕ ಶಕ್ತಿ ಎಂದು ಕರೆಯುವ ಚೈತನ್ಯದ 'ಮನೆಯ' ತೀರಾ ಹತ್ತಿರದಲ್ಲಿ, ವ್ಯಕ್ತಿಯ ಹೆಸರನ್ನು ಬರೆಯಲಾಗುತ್ತದೆ. ಪುಸ್ತಕಗಳಲ್ಲಿ ಸಿಗುವ ಯಂತ್ರದ ಮಾದರಿಗಳಲ್ಲಿ ಈ ಉದ್ದೇಶಕ್ಕಾಗಿ ಇರುವ ಸ್ಥಳವನ್ನು 'ಸಾಧ್ಯನಾಮ' ಎಂಬ ಪದಗಳ ಮೂಲಕ (ಅಥವಾ ಚೈತನ್ಯದ ರಕ್ಷಕ ಶಕ್ತಿಯನ್ನು ಸ್ವೀಕರಿಸುವ ಗ್ರಾಹಕ ವ್ಯಕ್ತಿಯ ಹೆಸರು) ಅಥವಾ ಅಭಿವ್ಯಕ್ತಿಯ ಮೂಲಕ ('ದೇವದತ್ತ' ಅಂದರೆ ಯಾವುದೇ ಹೆಸರೂ ಆಗಬಹುದು ಎಂದು ಹೇಳಬಹುದು. ಇಂಗ್ಲೀಷಿನಲ್ಲಿ ಟಾಮ್ ಡಿಕ್ ಎಂಡ್ ಹ್ಯಾರಿ ಎಂದು ಕರೆದಂತೆ) ಬಿಂಬಿಸಲಾಗಿದೆ. ಇದರ ಉದ್ದೇಶವೆಂದರೆ ವ್ಯಕ್ತಿಯ ಹೆಸರು ಒಂದು ಮಂತ್ರದ ಗುಣವನ್ನು ಹೊಂದಿದೆ ಮತ್ತು ಅದು ಅಧಿಕೃತವಾಗಿ ವ್ಯಕ್ತಿಯನ್ನು ಬಿಂಬಿಸುತ್ತದೆ ಎಂಬುದು. ಹೆಸರಿನ ಮೊದಲ ಅಕ್ಷರವು ಮುಖ್ಯ ವಿವರಣೆಯನ್ನು ಹೊಂದಿರುತ್ತದೆ. ಅದನ್ನು ವ್ಯಕ್ತಿಗೆ ಸೂಕ್ತವಾದ ಮಂತ್ರವನ್ನು ಆಯ್ಕೆ ಮಾಡಿಕೊಳ್ಳುವಾಗ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಯಂತ್ರಗಳು ಮುಖ್ಯವಾಗಿ ಜ್ಯಾಮಿತಿಯ ವಿನ್ಯಾಸಗಳನ್ನು ಒಳಗೊಂಡ ಚಿತ್ರಗಳು ಎನ್ನಬಹುದು. ಆದರೆ ಕೆಲವೊಮ್ಮೆ ಬಾಣಗಳ, ಭರ್ಚಿಗಳ, ತ್ರಿಶೂಲಗಳ, ಖಡ್ಗಗಳ, ದಂಡಗಳ ಮತ್ತು ಇತರೆ ಆಯುಧಗಳ ಚಿತ್ರಗಳನ್ನೂ ಕ್ಷೇತ್ರದಲ್ಲಿ ಕಾರ್ಯಾಚರಿಸುವ ಶಕ್ತಿಗಳ ದಿಕ್ಕುಗಳಾಗಿ ಬಿಂಬಿಸಲಾಗುತ್ತದೆ. ನಾಲ್ಕು ತ್ರಿಶೂಲಗಳನ್ನು ಒಂದು ಶಕ್ತಿಕ್ಷೇತ್ರವನ್ನು ರಚಿಸಿದಂತೆ ಚೌಕಾಕಾರವಾಗಿ ಜೋಡಿಸಿ ಇಡಬಹುದಾಗಿದೆ. ತ್ರಿಶೂಲವು ಒಂದು ರಕ್ಷಣಾ ಆಯುಧ. ಅದನ್ನು ಚೈತನ್ಯದ ದೇವತೆ ಅಂದರೆ ಶಿವ ಬಳಸುತ್ತಾನೆ. ಅದು ರಕ್ಷಣೆ ಖಚಿತ ಎಂಬುದನ್ನು ತಿಳಿಸುತ್ತದೆ. ಒಂದು ವೃತ್ತವನ್ನು ಚೈತನ್ಯಕ್ಷೇತ್ರವನ್ನು ಬಿಂಬಿಸುವ ಕಮಲದ ಹಾಗೆ ರೂಪಾಂತರಿಸುವುದೂ ಸಾಮಾನ್ಯವಾಗಿದೆ. ಕಮಲವು ಶುದ್ಧತೆ ಮತ್ತು ಬಹು ಆಯಾಮದ ಸಂಕೇತವಾಗಿದೆ. ಅದು ಸೃಜನಶೀಲ ಪ್ರಕ್ರಿಯೆಯನ್ನೂ ಸೂಚಿಸುತ್ತದೆ. ಹೀಗೆ ಯಂತ್ರದಲ್ಲಿರುವ ಪದ್ಮವು ಬಾಹ್ಯದ ಮಧ್ಯಪ್ರವೇಶದಿಂದ ಮುಕ್ತವಾಗಿದೆ (ಶುದ್ಧ) ಎಂಬುದನ್ನು ತೋರಿಸುತ್ತದೆ. ಅದು ಚೈತನ್ಯದ ಬಹುಮುಖ ಅಭಿವ್ಯಕ್ತಿಯನ್ನೂ, ಪ್ರಭಾವಲಯವು ವಿಸ್ತರಿಸಿರುವುದನ್ನೂ ಸೂಚಿಸುತ್ತದೆ.

ಯಂತ್ರಗಳ ಸಾಧ್ಯತೆ ಅಸಂಖ್ಯ. ಮೂಲ ಜ್ಯಾಮಿತಿ ಆಕಾರಗಳ ಸಂಯೋಜನೆಯು (ತ್ರಿಕೋನಗಳು, ವೃತ್ತಗಳು ಮತ್ತು ನಾಲ್ಕು ಬದಿಗಳಿರುವ ಚಿತ್ರಗಳು) ಅಸಂಖ್ಯ. ಹಾಗೆಯೇ

ಈ ಸಂಯೋಜನೆಗಳು ಮೂಡಿಸುವ ವಿನ್ಯಾಸಗಳಿಗೆ ಸೂಕ್ತವಾಗಿರುವ ಮಂತ್ರಗಳ ಸಂಖ್ಯೆಯೂ ಅಪಾರ. ಕೊಂಚ ಹೊಸದಾಗಿರುವ ಸಂಸ್ಕೃತ ಪಠ್ಯವೊಂದರಲ್ಲಿ 10,000 ಯಂತ್ರಗಳ ಉಲ್ಲೇಖವಿದೆ! ಈ ಪಠ್ಯದ ಹೆಸರು 'ಯಂತ್ರೋದ್ಧಾರ ಸರ್ವಸ್ವ'. ಇದರ ಅನಾಮಿಕ ಲೇಖಕನು ತಾನು ಈ ಎಲ್ಲಾ ಯಂತ್ರಗಳನ್ನೂ ಅಥರ್ವವೇದದಿಂದ ಪಡೆದೆನೆಂದು ಹೇಳುತ್ತಾನಾದರೂ ಹೇಗೆ ಎಂದು ತಿಳಿಸುವುದಿಲ್ಲ. ಯಂತ್ರಗಳ ಅತಿದೊಡ್ಡ ಸಂಗ್ರಹವನ್ನು ನಾವು ಸೌಂದರ್ಯಲಹರಿಯ ಅನುಬಂಧ ವಿಭಾಗದಲ್ಲಿ, ಸಂಸ್ಕಾರಗಳಿಗೆ ಸಂಬಂಧಿಸಿದಂತೆ ಕಾಣಬಹುದು. ಅದು 103 ಯಂತ್ರಗಳನ್ನು ಹೊಂದಿದ್ದು ಅವುಗಳ ಪ್ರಯೋಗದ ವಿವರಗಳನ್ನು ಹೊಂದಿದೆ. ಇನ್ನೊಂದು ಗ್ರಂಥ 'ಯಂತ್ರ ಚಿಂತಾಮಣಿ' ಸುಮಾರು ಎಂಬತ್ತು ಯಂತ್ರಗಳನ್ನು ಒಳಗೊಂಡಿದೆ. 'ಮಂತ್ರ ಮಹೋದಧಿ'ಯು ಸುಮಾರು ಎಪ್ಪತ್ತು ಯಂತ್ರಗಳನ್ನು ವಿವರಿಸುತ್ತದೆ. 'ಪ್ರಪಂಚ ಸಾರ ಸಂಗ್ರಹ'ವು ಅರವತ್ತು, 'ಪ್ರಯೋಗ ಕೌಮುದಿ'ಯು ಸುಮಾರು ಐವತ್ತು, 'ಮಂತ್ರ ಯಂತ್ರಮಹಾರ್ಣವ'ವು ಸುಮಾರು ಐವತ್ತು ಯಂತ್ರಗಳನ್ನು ವಿವರಿಸುತ್ತವೆ. ಕಾಮ ರತ್ನ, ಮಣಿ ಮಂತ್ರಕೋಶ, ದೇವತಾ ಪೂಜನ ವಿಧಿ, ಯಂತ್ರಪ್ರಕಾಶ, ಯಂತ್ರಪ್ರತಿಷ್ಠಾ ಮತ್ತು ಯಂತ್ರಪೂಜನ ಪ್ರಕಾರ ಗ್ರಂಥಗಳೂ ಕೂಡ ಯಂತ್ರಗಳ ಹಲವು ಚಿತ್ರಗಳನ್ನು ಹೊಂದಿವೆ.

ಯಂತ್ರಗಳನ್ನು ಸಾಮಾನ್ಯವಾಗಿ ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ: (1) ಪೂಜೆಯ ಸಾಧನಗಳು (ಪೂಜನ ಯಂತ್ರಗಳು) ಮತ್ತು (2) ರಕ್ಷಣೆಯ ಯಂತ್ರಗಳು. ಮೊದಲನೆಯದು ದೇವತಾ ನಿರ್ದಿಷ್ಟವಾಗಿದ್ದು ಪ್ರತಿಯೊಂದು ದೇವತೆಯೂ ತನ್ನದೇ ಆದ ಯಂತ್ರವನ್ನು ಹೊಂದಿದೆ. ಹೀಗೆ ನಾವು ದೇವಿ-ಯಂತ್ರ, ವಿಷ್ಣುಯಂತ್ರಗಳು ಮತ್ತು ಶಿವಯಂತ್ರಗಳನ್ನಷ್ಟೇ ಅಲ್ಲ, ಈ ಕೆಳಕಂಡ ವಿವಿಧ ಬಗೆಯ ದೇವತೆಗಳಿಗೆ ಸಂಬಂಧಿಸಿದ ಯಂತ್ರಗಳನ್ನೂ ಹೊಂದಿದ್ದೇವೆ: ತ್ರಿಪುರ ಯಂತ್ರ, ದುರ್ಗಾ ಯಂತ್ರ, ಶೂಲಿನಿ ಯಂತ್ರ, ನರಸಿಂಹ ಯಂತ್ರ, ಕೃಷ್ಣ ಯಂತ್ರ, ದಕ್ಷಿಣಾಮೂರ್ತಿ ಯಂತ್ರ, ಕಾಳಿ ಯಂತ್ರ, ಚಾಮುಂಡ ಯಂತ್ರ, ಛಿನ್ನಮಸ್ತಾ ಯಂತ್ರ, ಪ್ರತ್ಯಾಂಗೀರ ಯಂತ್ರ, ಮೃತ್ಯುಂಜಯ ಯಂತ್ರ. ಇವುಗಳಲ್ಲದೆ ಚಿಕ್ಕಪುಟ್ಟ ದೇವತೆಗಳಿಗೆ ಸಂಬಂಧಿಸಿದ ಯಂತ್ರಗಳು ಇವೆ (ಉದಾಹರಣೆಗೆ ಹನುಮಾನ್, ಗರುಡ, ವೀರಭದ್ರ, ಗಣೇಶ, ಶಾಸ್ತ, ಬೈರವ, ಖಡ್ಗ, ಯೋಗಿನಿ ಇತ್ಯಾದಿ). ಯಂತ್ರಗಳಲ್ಲಿ ಪ್ರಾದೇಶಿಕ ಚೈತನ್ಯಗಳಿಗೂ ಮಹತ್ವವಿದೆ (ಉದಾಹರಣೆಗೆ ಎಲ್ಲಮ್ಮ, ಕಾಟೇರಿ, ಕುಟ್ಟಿ ಚಾತ್ತನ್, ಭಗವತಿ, ಕೊಲ್ಲೂರಮ್ಮ ಇತ್ಯಾದಿ). ಈ ಎಲ್ಲಾ ಯಂತ್ರಗಳೂ ನಿರಂತರ ಪೂಜೆಯನ್ನು ಬಯಸುತ್ತವೆ. ಇವುಗಳನ್ನು ನಿರ್ದಿಷ್ಟವಾದ ಉದ್ದೇಶಕ್ಕೆ ಎಂದು ಬಳಸಲಾಗುತ್ತಿಲ್ಲ.

ಯಂತ್ರಗಳ ಎರಡನೆಯ ಗುಂಪು ಚಹರೆಯಲ್ಲಿ ಸಾಮಾನ್ಯವಾಗಿ ಒಂದೇ ಥರ ಕಾಣಿಸುತ್ತವೆ. ಇವು ಅನೇಕ ಬಗೆಯ ಅಪಾಯ ಮತ್ತು ಕೆಡುಕುಗಳಿಂದ ರಕ್ಷಣೆ ಒದಗಿಸುವ ಉದ್ದೇಶವನ್ನು ಹೊಂದಿವೆ. ರಕ್ಷಕ ಮತ್ತು ಚಿಕಿತ್ಸಕ ಯಂತ್ರಗಳೂ ಈ ಗುಂಪಿಗೆ ಸೇರುತ್ತವೆ.

ಈ ಯಂತ್ರಗಳಲ್ಲಿ ಬಹುತೇಕ ಯಂತ್ರಗಳು ಉದ್ದೇಶದಲ್ಲಿ ಮಾಂತ್ರಿಕತೆಯನ್ನೇ ಹೊಂದಿವೆ. ಇವುಗಳನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸಬೇಕಾಗಿದೆ. ಅದರಲ್ಲೂ ಇವುಗಳನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಬಳಸಬೇಕು. ವಿವಿಧ ಬಗೆಯ ಕಾಯಿಲೆಗಳು, ರಾಸುಗಳ ರೋಗಗಳು, ಕಳ್ಳರು, ದರೋಡೆಕೋರರರ ಭಯ, ಶತ್ರುಗಳ ಆಕ್ರಮಣದ ಆತಂಕ, ಸಾವಿನ ಭಯ, ಜನನಸಂಬಂಧೀ ಕಳವಳ, ಹೊಲಗಳಲ್ಲಿ ಕೀಟಗಳ ಹಾವಳಿ, ನೆಂಟರ ಕೆಡುಕುನೋಟ, ವಿಶ್ವಾಸ ದಂಡನೆ, ಕೆಟ್ಟಕನಸುಗಳು ಮತ್ತು ದುಃಸ್ವಪ್ನಗಳು, ಹೊಸ ಉದ್ಯಮದಲ್ಲಿ ಎದುರಿಸಬೇಕಾದ ಅನಿಶ್ಚಿತತೆ, ಅಧ್ಯಯನದಲ್ಲಿ ಮಾಡಬೇಕಾದ ಪ್ರಗತಿ ಮತ್ತು ಐಶ್ವರ್ಯ ಸಂಪಾದನೆ, ಇವು ಈ ನಿರ್ದಿಷ್ಟ ಸನ್ನಿವೇಶಗಳಲ್ಲಿ ಸೇರಿವೆ. ಈ ಗುಂಪಿನಲ್ಲಿ ಇರುವ ಯಂತ್ರಗಳ ಮೌಲ್ಯವು ಅದನ್ನು ತಯಾರಿಸಿದ ಕಾರಣಕ್ಕಷ್ಟೇ ಸೀಮಿತವಾಗಿರುತ್ತದೆ. ಹೀಗಿದ್ದೂ ಕೆಲವು ಯಂತ್ರಗಳು ಸದಾ ಕಲ್ಯಾಣವನ್ನೇ ನೀಡುವ ಆಶಯವನ್ನೂ ಹೊಂದಿವೆ.

ಈ ಮೇಲೆ ತಿಳಿಸಿದ ಎರಡೂ ಯಂತ್ರಗಳನ್ನು ಒಟ್ಟಿಗೆ ಬಳಸುವುದು ತುಂಬಾ ಸೂಕ್ತ ಎಂದು ಕಂಡು ಬಂದಿದೆ. ಕೆಲವು ದೇವತೆಗಳನ್ನು ಅವು ತಮ್ಮ ಭಕ್ತರಿಗೆ ನೀಡುವ ನಿರ್ದಿಷ್ಟ ಸಹಾಯದ ಶಕ್ತಿಯ ಮೇಲೆ ಪೂಜಿಸಲಾಗುತ್ತಿದೆ; ಉದಾಹರಣೆಗೆ ಎಲ್ಲಾ ಕ್ರಿಯೆಗಳಲ್ಲೂ ಯಶಸ್ಸಿಗೆ ಗಣೇಶನನ್ನು, ಭಯ-ಹೆದರಿಕೆ-ಕಾಯಿಲೆ ಮತ್ತು ಉದ್ವೇಗಗಳ ವಿರುದ್ಧ ರಕ್ಷಣೆಗೆ ಹನುಮಂತನನ್ನು, ದುರಂತಗಳನ್ನು ತಡೆಯಲು ನರಸಿಂಹನನ್ನು, ಶ್ರೀಮಂತಿಕೆಯನ್ನು ಪಡೆಯಲು ಸ್ವರ್ಣ ಭೈರವನನ್ನು, ಸುದೀರ್ಘ ಆಯುಸ್ಸಿಗೆ ಶಿವನನ್ನು, ಮಾಟದಿಂದ ರಕ್ಷಣೆ ಪಡೆಯಲು ಪ್ರತ್ಯಾಂಗಿರನನ್ನು, ಕೆಡುಕುಗಳಿಂದ ರಕ್ಷಣೆ ಪಡೆಯಲು ದುರ್ಗೆಯನ್ನು, ಕಾಯಿಲೆಗಳಿಂದ ಮಕ್ಕಳನ್ನು ರಕ್ಷಿಸಲು ಮತ್ತು ಕಪ್ಪು ಕಣ್ಣಿನಿಂದ ದೂರವಿಡಲು ಖಡ್ಗರಾವಣನನ್ನು ಪೂಜಿಸಲಾಗುತ್ತದೆ.

ಇನ್ನು ಮೂರನೆಯ ವಿಧದ ಯಂತ್ರಗಳೂ ಇವೆ. ಇವುಗಳನ್ನು ಮಂಡಲಗಳೆಂದು ಕರೆಯುತ್ತಾರೆ. ಇವುಗಳು ಆಚರಣೆಗಳಲ್ಲಿ (ಪೂಜಾ ಸ್ಥಳವೊಂದನ್ನು ಶುದ್ಧೀಕರಿಸಲು, ಸಾಂಪ್ರದಾಯಿಕ ಕಳಶವನ್ನು ಇಡಲು, ದೇವ ಅಥವಾ ದೇವತೆಯನ್ನು ಪ್ರತಿನಿಧಿಸುವ ದೀಪಸ್ತಂಭವನ್ನು ನಿಲ್ಲಿಸಲು, ನೈವೇದ್ಯವನ್ನು ಅರ್ಪಿಸಲು) ಬಳಕೆಯಾಗುತ್ತವೆ. ಹಾಗೆಯೇ ಇವುಗಳು ಆರಂಭಿಕ ಕ್ರಿಯೆಗಳಲ್ಲೂ (ದೀಕ್ಷಾವಿಧಿ), ಧ್ಯಾನಗಳಲ್ಲೂ ಬಳಕೆಯಾಗುತ್ತವೆ. ಈಗ ಶುದ್ಧ ಅಲಂಕಾರಿಕ ಕಲೆಯಾಗಿ ಪರಿವರ್ತಿತವಾಗಿರುವ ಜಾನಪದ ವಿನ್ಯಾಸವಾದ ರಂಗವಲ್ಲಿಯು ಮೂಲತಃ ರಕ್ಷಣಾ ಸಾಧನವಾಗಿತ್ತು. ಗೃಹವನ್ನು ದುಷ್ಟಶಕ್ತಿಗಳಿಂದ ರಕ್ಷಿಸಲು, ಮಂಗಳಕಾರ್ಯವು ನಡೆಯುವ ಸ್ಥಳವನ್ನು ಸಂಭಾವ್ಯ ಹಾನಿಕಾರಕ ಶಕ್ತಿಗಳಿಂದ ರಕ್ಷಿಸಲು, ಪೂಜೆ ನಡೆಯುವ ಸ್ಥಳವನ್ನು ಪವಿತ್ರಗೊಳಿಸಲು ರಂಗವಲ್ಲಿಯನ್ನು ಬಳಸುತ್ತಾರೆ.

ಕೆಲವು ಪಠ್ಯಗಳು (ಕ್ರಮದೀಪಿಕಾ, ಮಂಡಲವಿಧಿ ಮತ್ತು ವಾಸ್ತುವಿದ್ಯಾ) ಯಂತ್ರಗಳು ಮತ್ತು ಮಂಡಲಗಳ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿಸುತ್ತವೆ.

ಮಂಡಲವು ಅಲಂಕಾರಿಕ ಮುದ್ರೆಯನ್ನು ಬಿಂಬಿಸುತ್ತದೆ ('ಮಂಡಯತಿ = ಭೂಪಯತಿ'). ಅದು ಅತ್ಯಗತ್ಯ ವಿವರಗಳನ್ನೂ ಒಳಗೊಂಡಿರುತ್ತದೆ ('ಮಂಡಂ ಲಾತಿ'). ಅದು ಸಾಮಾನ್ಯವಾಗಿ ವೃತ್ತಾಕಾರದಲ್ಲಿರುತ್ತದೆ (ಆದ್ದರಿಂದಲೇ ಚಂದ್ರಮಂಡಲ, ಸೂರ್ಯಮಂಡಲ, ತೇಜೋಮಂಡಲ), ಮತ್ತು ಅದು ಸರ್ವವ್ಯಾಪಕವಾದ ಬೆಳಕನ್ನು ಹರಡುತ್ತದೆ. ಮಂಡಲವು ಬಿಂದುವಿನ ಸಹಜ ವಿಸ್ತರಣೆಯಾಗಿದೆ. ಕೇಂದ್ರ ಬಿಂದುವು ಅವ್ಯಕ್ತವಾಗಿದ್ದರೆ ಮಂಡಲವು ವ್ಯಕ್ತವಾಗಿದೆ. ಹೀಗೆ ಮಂಡಲವು ಒಂದು ಕೇಂದ್ರಬಿಂದುವನ್ನೂ ಹೊಂದಿರುತ್ತದೆ. ಆದರೆ ಯಂತ್ರವು ಇದನ್ನು ಹೊಂದಿರಬಹುದು ಅಥವಾ ಹೊಂದದಿರಬಹುದು. ಮಂಡಲದ ವಿವಿಧ ಪ್ರದೇಶಗಳು ಕೇಂದ್ರ ಬಿಂದುವಿನಿಂದ ಸರಿಯಾದ ದೂರಗಳಲ್ಲಿ ಜೋಡಣೆಯಾಗಿರುತ್ತವೆ. ಅವುಗಳ ಜೋಡಣೆಯಲ್ಲಿ ಒಂದು ಕ್ರಮವಿರುತ್ತದೆ. ಇಲ್ಲಿ ಸಾಮರಸ್ಯ ಮತ್ತು ಸಂತುಲನೆಯನ್ನು ಕಾಣಬಹುದು.

ಮಂಡಲದ ಸಿದ್ಧಾಂತವು ಭಕ್ತನು ಮಂಡಲದೊಳಗೆ ಸಾಂಕೇತಿಕವಾಗಿ ಪ್ರವೇಶಿಸಿ ಅದರೊಳಗೆ ಇರುವ ಶಕ್ತಿಯನ್ನು ಪಡೆಯುವುದಕ್ಕೆ ಅವಕಾಶವನ್ನು ನೀಡುತ್ತದೆ. ಈ ಅರ್ಥದಲ್ಲಿ ಮಂಡಲವು ತನ್ನೊಳಗೇ ಒಂದು ವಿಶ್ವವಾಗಿದೆ. ಅಥವಾ ಅಣುವಿನಲ್ಲೇ ಇರುವ ಬ್ರಹ್ಮಾಂಡವಾಗಿದೆ; ಆದ್ದರಿಂದಲೇ ಅದನ್ನು 'ಕಾಸ್ಮೋಗ್ರಾಮ್' ಎಂದು ಕರೆಯುತ್ತಾರೆ. ಎಲ್ಲಾ ಜಗತ್ತುಗಳು, ಬ್ರಹ್ಮಾಂಡದ ವಿವಿಧ ವಿಭಾಗಗಳನ್ನು ಈ ಮಂಡಲದಲ್ಲಿ ಮೂಡಿಸಲಾಗುತ್ತದೆ. ಇದರ ಕೇಂದ್ರ ಬಿಂದುವಿನಲ್ಲಿ ದೇವರನ್ನು ಅದರ ಒಂದು ಅವತಾರದಲ್ಲಿ ಗುರುತಿಸಲಾಗಿರುತ್ತದೆ. ಹೀಗೆ ಮಂಡಲವು ವಸ್ತುಶಃ ಸಾಂಕೇತಿಕ ಮಹತ್ವವನ್ನು ಪಡೆದಿದೆ. ಇನ್ನೂ ವಿವರಣಾತ್ಮಕ ಮಂಡಲಗಳು ಭಕ್ತರ ತಂಡವು ಕುಳಿತುಕೊಳ್ಳುವಷ್ಟು ಅಥವಾ ಚಲಿಸುವಷ್ಟು ವಿಸ್ತಾರವಾಗಿರುತ್ತವೆ. ಆದರೆ ಒಂದು ಯಂತ್ರವು ಸದಾ ಆಕಾರದಲ್ಲಿ ಚಿಕ್ಕದಾಗಿರುತ್ತದೆ. ಅದು ವಿಸ್ತಾರವಾಗಿದ್ದಾಗಲೂ ಚಿಕ್ಕ ಆಕಾರದಲ್ಲೇ ಇರುತ್ತದೆ. ಮಂಡಲವು ಸಾಂಕೇತಿಕವಾಗಿರುವುದರಿಂದ ಪ್ರತಿಯೊಂದು ಬಣ್ಣವೂ ಒಂದು ಪ್ರಕ್ರಿಯೆಯನ್ನು, ಒಂದು ದೇವರನ್ನು, ಒಂದು ಭಾವವನ್ನು ಅಥವಾ ಒಂದು ದೆವ್ವವನ್ನು ಪ್ರತಿನಿಧಿಸುತ್ತದೆ. ಆದರೆ ಯಂತ್ರಗಳು ವರ್ಣರಂಜಿತವಾಗಿರುವುದು ತೀರಾ ಅಪರೂಪ. ಅವು ಬಣ್ಣವನ್ನು ಹೊಂದಿದ್ದಾಗಲೂ ಅಲ್ಲಿ ಬಣ್ಣಗಳು ಸಾಂಕೇತಿಕವಾಗಿರುವುದಿಲ್ಲ. ಬಣ್ಣವು ಸಾಮಾನ್ಯವಾಗಿ ಅಲಂಕಾರಿಕವಾಗಿ ಬಳಕೆಯಾಗುತ್ತದೆ.

ಈ ಕೆಲವು ನಿರ್ದಿಷ್ಟತೆಗಳನ್ನು ಬಿಟ್ಟರೆ ಯಂತ್ರಗಳು ಮತ್ತು ಮಂಡಲಗಳು ಶಕ್ತಿಯನ್ನು ಕೇಂದ್ರೀಕರಿಸುವ, ಹರಿಬಿಡುವ ಮತ್ತು ಸಂವಹಿಸುವ ಸಾಧನಗಳ ವಿಭಾಗದಲ್ಲೇ ಬರುತ್ತವೆ. ಕೆಲವು ಯಂತ್ರಗಳು ಮಂಡಲಗಳಲ್ಲಿ ಇರುವಂತೆ ಕೇವಲ ಸಂಪೂರ್ಣ ಭೌತಿಕ ಜಗತ್ತನ್ನು ಮಾತ್ರ ಬಿಂಬಿಸುವುದಿಲ್ಲ, ಮಾನವ ಸಂಸ್ಕೃತಿಯನ್ನೂ ಬಿಂಬಿಸುತ್ತವೆ. ಇವುಗಳಲ್ಲಿ ನಾಲ್ಕು ದಿಕ್ಕುಗಳನ್ನು ಸೂಚಿಸುವ (ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ) ನಿರ್ದೇಶಕಗಳು,

ಚೌಕಾಕಾರದ ಗಡಿಯ ನಾಲ್ಕು ಬದಿಗಳು (ಭೂಪುರ), ನಾಲ್ಕು ಮೂಲೆಗಳು (ಆಗ್ನೇಯ, ವಾಯುವ್ಯ, ಈಶಾನ್ಯ, ನೈಋತ್ಯ), ಅಷ್ಟದಿಕ್ಪಾಲಕರು (ಲೋಕಪಾಲ), ಬೀಜಾಕ್ಷರಗಳಿಂದ ಸೂಚಿಸಲ್ಪಟ್ಟ ಅವರ ಆಯುಧಗಳು, ಇವುಗಳನ್ನು ಒಳಗೊಂಡಿವೆ: (1) ಇಂದ್ರನ ಆಳ್ವಿಕೆಯಲ್ಲಿರುವ ಪೂರ್ವ, ಅವನ ಆಯುಧ ವಜ್ರ (ವಂ); (2) ಅಗ್ನಿಯು ಆಳುತ್ತಿರುವ ಆಗ್ನೇಯ, ಅವನ ಆಯುಧ ಶಕ್ತಿ (ಶಂ); (3) ಯಮನ ಆಳ್ವಿಕೆಗೆ ಒಳಗಾದ ದಕ್ಷಿಣ, ಅವನ ಆಯುಧ ದಂಡ (ದಂ); (4) ನಿರೃತಿಯು ಆಳುತ್ತಿರುವ ನೈಋತ್ಯ, ಅವನ ಆಯುಧ ಖಡ್ಗ (ಖಂ); (5) ವರುಣ ಆಳುತ್ತಿರುವ ಪಶ್ಚಿಮ, ಅವನ ಆಯುಧ ಪಾಶ (ಪಂ); (6) ವಾಯುವು ಆಳುತ್ತಿರುವ ವಾಯುವ್ಯ, ಅವನ ಆಯುಧ ಅಂಕುಶ (ಅಂ); (7) ಚಂದ್ರನು ಆಳುತ್ತಿರುವ ಉತ್ತರ, ಅವನ ಆಯುಧ ಗದೆ (ಗಂ) ಮತ್ತು (8) ಈಶಾನ ಆಳುತ್ತಿರುವ ಈಶಾನ್ಯ, ಅವನ ಆಯುಧ ತ್ರಿಶೂಲ (ತ್ರಿಂ).

ಬಹುತೇಕ ಎಂಟು ದಳಗಳ ಪದ್ಮವು ಈ ದಿಕ್ಕುಗಳನ್ನು ಬಿಂಬಿಸುತ್ತದೆ. ಸಂಸ್ಕೃತ ವರ್ಣಮಾಲೆಯ ಅನುನಾಸಿಕಗಳ ಅಕ್ಷರಗಳನ್ನು ಈ ಎಂಟು ದಳಗಳಿಗೆ ಆರೋಪಿಸುವ ಕ್ರಮವೂ ಇದೆ. ಕಮಲದ ಹೊರಗೆ ಸಾಮಾನ್ಯವಾಗಿ ದಳಗಳ ನಡುವೆ ಹದಿನಾರು ಸ್ವರಗಳನ್ನು ಬರೆಯಲಾಗುತ್ತದೆ. ಇವುಗಳನ್ನು ಕೇಸರ ಸ್ಥಾನ ಎಂದು ಕರೆಯುತ್ತಾರೆ. ಇನ್ನುಳಿದ ಮೂವತ್ತೈದು ವ್ಯಂಜನಗಳನ್ನು ದಳಗಳ ಒಳಗೆ ಬರೆಯಲಾಗುತ್ತದೆ. 'ಕ' ವ್ಯಂಜನದಿಂದ ಆರಂಭವಾಗುವ ಐದು ವ್ಯಂಜನಗಳ ಗುಂಪನ್ನು ಪೂರ್ವದಲ್ಲಿ ಇರುವ ದಳದ ಒಳಗೆ ಬರೆಯಲಾಗುತ್ತದೆ. 'ಚ' ವ್ಯಂಜನದಿಂದ ಆರಂಭವಾಗುವ ಐದು ವ್ಯಂಜನಗಳ ಗುಂಪನ್ನು ಆಗ್ನೇಯದಲ್ಲಿ ಬರೆಯಲಾಗುತ್ತದೆ. 'ಟ' ವ್ಯಂಜನದಿಂದ ಆರಂಭವಾಗುವ ಐದು ವ್ಯಂಜನಗಳ ಗುಂಪನ್ನು ದಕ್ಷಿಣ ದಿಕ್ಕಿನ ದಳದಲ್ಲಿ ಬರೆಯಲಾಗುತ್ತದೆ. 'ತ' ವ್ಯಂಜನದಿಂದ ಆರಂಭವಾಗುವ ಐದು ವ್ಯಂಜನಗಳ ಗುಂಪನ್ನು ನೈಋತ್ಯ ದಿಕ್ಕಿಗೆ ಮುಖ ಮಾಡಿರುವ ದಳದೊಳಗೆ ಬರೆಯಲಾಗುತ್ತದೆ. 'ಪ' ವ್ಯಂಜನದಿಂದ ಆರಂಭವಾಗುವ ಐದು ವ್ಯಂಜನಗಳ ಗುಂಪನ್ನು ಪಶ್ಚಿಮ ದಿಕ್ಕಿಗೆ ಅಭಿಮುಖವಾಗಿರುವ ದಳದ ಒಳಗೆ ಬರೆಯಲಾಗುತ್ತದೆ. 'ಯ' ವ್ಯಂಜನದಿಂದ ಆರಂಭವಾಗುವ ನಾಲ್ಕು ವ್ಯಂಜನಗಳ ಗುಂಪನ್ನು ವಾಯುವ್ಯ ದಿಕ್ಕಿಗೆ ಅಭಿಮುಖವಾಗಿರುವ ದಳದ ಒಳಗೆ ಬರೆಯಲಾಗುತ್ತದೆ. 'ಶ' ವ್ಯಂಜನದಿಂದ ಆರಂಭವಾಗುವ ನಾಲ್ಕು ವ್ಯಂಜನಗಳನ್ನು ಉತ್ತರ ದಿಕ್ಕಿಗೆ ಅಭಿಮುಖವಾಗಿರುವ ದಳದ ಒಳಗೆ ಬರೆಯಲಾಗುತ್ತದೆ. 'ಳ' ಮತ್ತು 'ಕ್ಷ' ಅಕ್ಷರಗಳನ್ನು ಈಶಾನ್ಯ ದಿಕ್ಕಿಗೆ ಅಭಿಮುಖವಾಗಿರುವ ದಳದ ಒಳಗೆ ಬರೆಯಲಾಗುತ್ತದೆ. ಈ ಬಗೆಯ ಸಂಕೇತವು ಕಾಲ-ಅವಕಾಶದಲ್ಲಿನ ಲೌಕಿಕ ಜಗತ್ತನ್ನು ಬಿಂಬಿಸುತ್ತದೆ. ಮಾನವ ಸಂವಹನದಲ್ಲಿ ಮಾತಿನ ಮೂಲಕ ವ್ಯಕ್ತವಾಗುವ ಜಗತ್ತು ಇದು.

ಇದಲ್ಲದೆ, ಮಂಡಲವು ಎರಡು ಬಗೆಯ ಕ್ರಿಯೆಗಳನ್ನು ಬಿಂಬಿಸುತ್ತದೆ: ಗ್ರಹಣ ಮತ್ತು ಪ್ರೇಷಣ. ಅವು ಅಸ್ತಿತ್ವದ ಮೂಲಭೂತ ಅಂಶಗಳು ಮಾತ್ರವಲ್ಲ, ಪ್ರಜ್ಞೆಯನ್ನು

ಮೂಡಿಸಿರುವ ಎಲ್ಲಾ ಬಗೆಯ ವಿಧಾನಗಳ ಅತ್ಯಗತ್ಯ ಅಂಶಗಳಾಗಿವೆ. ಈ ಹಿಂದೆಯೇ ಹೇಳಿದಂತೆ, ಕೇಂದ್ರ ಬಿಂದುವು ಅವ್ಯಕ್ತದಿಂದ ವ್ಯಕ್ತದೆಡೆಗಿನ ರೂಪಾಂತರವನ್ನು ಬಿಂಬಿಸುತ್ತದೆ. ಇಡೀ ಜಗತ್ತು (ವಸ್ತು, ಶಬ್ದ ಮತ್ತು ಮನಸ್ಸು) ಈ ಕೇಂದ್ರ ಬಿಂದುವಿನಿಂದ ಮೂಡಿ ಕೊನೆಗೆ ಈ ಕೇಂದ್ರ ಬಿಂದುವಿನಲ್ಲೇ ಕರಗುತ್ತದೆ. ಒಂದು ರಚನೆಯಲ್ಲಿ ಕೇಂದ್ರ ಬಿಂದುವು ಒಂದು ತ್ರಿಕೋನವಾಗುತ್ತದೆ; ತ್ರಿಕೋನವು ಚೌಕವಾಗುತ್ತದೆ. ಚೌಕವು ವೃತ್ತವಾಗುತ್ತದೆ. ಮಂಡಲಗಳಲ್ಲಿ ಕಾಣುವ ಬಹುತೇಕ ಜ್ಯಾಮಿತಿಯ ಆಕಾರಗಳು ತ್ರಿಕೋನ, ಚತುಷ್ಕೋನ ಮತ್ತು ವೃತ್ತಗಳ ವಿವಿಧ ಬಗೆಯ ಸಂಯೋಜನೆಗಳಾಗಿವೆ. ವ್ಯಕ್ತ ಬಿಂದುವನ್ನು ಬಿಂಬಿಸುವ, ಅವ್ಯಕ್ತ ಬಿಂದುವನ್ನು ಬಿಂಬಿಸುವ ವಿವಿಧ ಬಗೆಗಳೂ ಇಲ್ಲಿವೆ (ಅವ್ಯಕ್ತ ಮಂಡಲ).

ಕೇಂದ್ರ ಬಿಂದುವು ಅವಿಚ್ಛಿನ್ನ ಆದರೆ ವ್ಯಕ್ತಿಗತ ಚಿತ್ತವೂ ಹೌದು ಎಂಬುದು ತುಂಬಾ ಮುಖ್ಯ. ತ್ರಿಕೋನ, ಚತುಷ್ಕೋನ ಮತ್ತು ವೃತ್ತಗಳ ಮಾದರಿಗಳು ಮೂಲ ಶಕ್ತಿಯು ಹಲವು ಬಗೆಯ ಶಕ್ತಿಗಳಾಗಿ ಹಂಚಿರುವುದನ್ನು ಬಿಂಬಿಸುತ್ತವೆ. ಧ್ಯಾನಕ್ಕಾಗಿ ರೂಪಿಸಿರುವ ಮಂಡಲದಲ್ಲಿ ಶಕ್ತಿಯನ್ನು ಸಂಚಯಿಸುವುದು ಮತ್ತು ಗಮನವನ್ನು ಕೇಂದ್ರಬಿಂದುವಿನತ್ತ ಕೇಂದ್ರೀಕರಿಸುವುದು ಸೇರಿದೆ. ಇದರ ಜೊತೆಗೆ ಶಕ್ತಿಯನ್ನು ಹೊಂದುವುದೂ ಸೇರಿದೆ. ಕೇಂದ್ರೀಕೃತ ಮನಸ್ಸು ಬಲವುಳ್ಳದ್ದು, ಕೇಂದ್ರೀಕರಿಸಲಾಗದ ಮನಸ್ಸು ದುರ್ಬಲವಾದದ್ದು. ಹಂಚಿಹೋದ ಚಿಂತನೆಗಳು ಮತ್ತು ಭಾವನೆಗಳು ಸಾಮಾನ್ಯ ಮನುಷ್ಯನನ್ನು ಬಿಂಬಿಸುತ್ತವೆ. ಅವುಗಳನ್ನು ವ್ಯವಸ್ಥಿತವಾಗಿ ಕೇಂದ್ರೀಕರಿಸಲು ಧ್ಯಾನವು ಒಂದು ವಿಧಾನವಾಗಿದೆ.

ಈ ದೃಷ್ಟಿಯಲ್ಲಿ ಮಂಡಲವು ನೈಜತೆ, ಮರು ಏಕೀಕರಣ ಮತ್ತು ಸ್ವ ಜಾಗೃತಿಯನ್ನು ಅನುಭವಿಸುವ ಮಾದರಿಯಾಗಿದೆ. ಅದು ಕೇವಲ ಲೌಕಿಕ ಜಗತ್ತನ್ನು ಮಾತ್ರವಲ್ಲ, ಪ್ರಜ್ಞಾಹೀನ ಪ್ರಕ್ರಿಯೆಗಳಿಗೂ ಅವಕಾಶ ನೀಡುತ್ತದೆ. ಬಾಹ್ಯ ಮತ್ತು ಆಂತರಿಕ ವಾಸ್ತವಗಳ ನಡುವೆ ಮತ್ತು ಭೌತಿಕ ಜಗತ್ತು ಮತ್ತು ಮಾನಸಿಕ ಜಗತ್ತಿನ ನಡುವೆ ಮೂಲತಃ ದ್ವಂದ್ವವಿಲ್ಲ ಎನ್ನುವುದೇ ಇಲ್ಲಿನ ಪ್ರಮುಖ ಅಂಶ. ವಸ್ತುಗಳು ಮತ್ತು ಚಿಂತನೆಗಳು ಒಂದೇ ಬಗೆಯ ಚೈತನ್ಯದ ಹಲವು ಬಗೆಯ ರೂಪಗಳು. ಅವುಗಳ ನೈಜ ರೂಪವೇ ಚಿತ್ತಮಾತ್ರ. 'ಸಂಸಾರ ಮತ್ತು ಮೋಕ್ಷ ಎರಡೂ ಒಂದೇ' ಎನ್ನುವ ತಾಂತ್ರಿಕ ಹೇಳಿಕೆಯಲ್ಲಿ ಮಹತ್ವವಿದೆ. ಮಂಡಲವು ಈ ವಿಚಾರವನ್ನು ನಕ್ಷೆಯ ರೂಪದಲ್ಲಿ ಪ್ರತಿನಿಧಿಸುತ್ತದೆ.

3. ಯಂತ್ರದ ಮೂರು ಬಗೆಗಳು

ಹಿಂದಿನ ಭಾಗದಲ್ಲಿ ಹೇಳಿರುವಂತೆ, ಒಂದು ಸಾಧನೆಯ ಸಾಧನವಾಗಿರುವ ಯಂತ್ರವು ವಿವಿಧ ಉದ್ದೇಶಗಳು ಮತ್ತು ಸಾಧನೆಗಳಿಗೆ ಅನುಗುಣವಾಗಿ ವಿವಿಧ ಬಗೆಗಳಲ್ಲಿ ಇರುತ್ತದೆ ಎಂಬುದು ಸ್ಪಷ್ಟವಾಗಿದೆ. ಈ ಪುಸ್ತಕದಲ್ಲಿ ಮೂರು ಪ್ರಮುಖ ಬಗೆಯ ಯಂತ್ರಗಳ ಬಗ್ಗೆ ಪರಿಗಣಿಸುವುದು ಮತ್ತು ನಿರೂಪಿಸಲಾಗುವುದು: (1) ಮಂತ್ರವಿದ್ಯೆಗಳಿಗಾಗಿ ಬಳಸುವ ಯಂತ್ರಗಳು, ಸಾಮಾನ್ಯವಾಗಿ ರಕ್ಷಣ ಯಂತ್ರಗಳು ಎಂದು ಇವುಗಳನ್ನು ಕರೆಯುತ್ತಾರೆ. (2) ದೇವತೆಗಳನ್ನು ಆವಾಹಿಸುವ ಯಂತ್ರಗಳು, ದೇವತಾ ಯಂತ್ರಗಳು ಮತ್ತು (3) ಧ್ಯಾನಕ್ಕೆ ಅನುವು ಮಾಡಿಕೊಡುವ ಯಂತ್ರಗಳು ಅಥವಾ ಧ್ಯಾನಯಂತ್ರಗಳು. ಮೊದಲ ವಿಭಾಗದಲ್ಲಿ ಯಂತ್ರಕ್ಕೆ ಶಕ್ತಿಯನ್ನು ತುಂಬಿಸುವುದು ತುಂಬಾ ಮುಖ್ಯವಾದದ್ದು. ಇಲ್ಲಿ ಉದ್ದೇಶಿತ ವ್ಯಕ್ತಿಯು ಕೇವಲ ಅದನ್ನು ಸರಳ ವಿಧಾನದಲ್ಲಿ ಸ್ವೀಕರಿಸಿ, ಧರಿಸಿ ಅಥವಾ ಗೌರವಿಸಿ ಇಟ್ಟುಕೊಳ್ಳಬೇಕಷ್ಟೆ. ಅದು ಸಂಪೂರ್ಣವಾಗಿ ಶಕ್ತಿಸಂಚಯಿತ ಸಾಧನವಾಗಿದ್ದು ಜಾನಪದ ಮತಗಳು, ಮತ್ತು ಸಿದ್ಧಾಂತ-ಆಚರಣೆಗಳಿಗೆ ತಕ್ಕಂತೆ ರೂಪುಗೊಂಡಿರುತ್ತದೆ. ಎರಡನೆಯ ಬಗೆಯ ಯಂತ್ರವು ಶೈಲೀಕೃತ ವಿಧಾನಗಳಲ್ಲಿ ಆರಾಧನೆಗಾಗಿ ಇದೆ. ಆದ್ದರಿಂದಲೇ ಅದನ್ನು ಪೂಜಾ ಯಂತ್ರ ಎಂದೂ ಕರೆಯುತ್ತಾರೆ. ಮೂರನೆಯ ಬಗೆಯ ಯಂತ್ರವು ತುಂಬಾ ಆಧುನಿಕವಾಗಿದ್ದು ಗೆರೆಗಳು ಮತ್ತು ಚಿತ್ರಗಳಲ್ಲಿ ಸಂಕೀರ್ಣ ಸಾಂಕೇತಿಕ ವಿನ್ಯಾಸಗಳನ್ನು ಹೊಂದಿರುತ್ತದೆ.

ಜನರು ಮೊದಲನೆಯ ಬಗೆಯ ಯಂತ್ರಗಳನ್ನೇ ಬಹುವಾಗಿ ಬಳಸುತ್ತಾರೆ ಎನ್ನುವುದು ಸರ್ವವಿದಿತ. ಯಾಕೆಂದರೆ ಅವುಗಳಿಗಾಗಿ ಪಡಬೇಕಾದ ಶ್ರಮ ತುಂಬಾ ಕಡಿಮೆ. ಈ ಯಂತ್ರಗಳನ್ನು ರೂಪಿಸಿ ನೀಡುವ ಸಂತರು ಮತ್ತು ತಾಂತ್ರಿಕರ ಅತಿಮಾನುಷ ಶಕ್ತಿಯನ್ನು ಇಲ್ಲಿ ನಂಬಲಾಗಿದೆ. ಅವರು ಈ ಯಂತ್ರಗಳನ್ನು ಮಂತ್ರಿಸಿ, ಆಶೀರ್ವದಿಸಿ ನೀಡುತ್ತಾರೆ. ಈ ಯಂತ್ರಗಳು ತಾಯಿತಗಳ ಅಥವಾ ರಕ್ಷೆಗಳ ರೂಪದಲ್ಲಿರುತ್ತವೆ. ಯಾಕೆಂದರೆ ಅವುಗಳು ತಕ್ಷಣವೇ ಪರಿಣಾಮ ಬೀರುತ್ತವೆ, ಭೌತಿಕ ಪರಿಣಾಮವನ್ನು ಉಂಟು ಮಾಡುತ್ತವೆ. ಅದನ್ನು ತಯಾರಿಸಿದ ತಾಂತ್ರಿಕ ಶಕ್ತಿಯನ್ನು, ಯಾವ ಪ್ರಮಾಣದಲ್ಲಿ ತುಂಬಿರುತ್ತಾನೋ ಅದನ್ನು ಆಧರಿಸಿ ಆ ಯಂತ್ರವು ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಯಂತ್ರಗಳು ಪೂರೈಸುತ್ತವೆ ಎಂದು ಬಳಸುವವರು ನಂಬಿರುವ ಕಾರ್ಯೋದ್ದೇಶಗಳನ್ನು ಈ ಯಂತ್ರಗಳು ನೆರವೇರಿಸಬೇಕಾದ್ದು ಸಹಜ.

ಈ ಮಂತ್ರದ ಯಂತ್ರಗಳನ್ನು ಸ್ಥೂಲವಾಗಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು: (1) ಅನುಕೂಲಕಾರಕ (ಸೌಮ್ಯ ಅಥವಾ ಅಘೋರ) ಮತ್ತು (2) ಹಾನಿಕಾರಕ, ಕ್ರೂರ ಅಥವಾ ಘೋರ. ಮೊದಲನೆಯ ಬಗೆಯ ಯಂತ್ರಗಳನ್ನು ಕೆಡುಕು ಕಾಯಿಲೆಗಳನ್ನು ದೂರ ಮಾಡಲು, ಉದ್ದಿಮೆ ಅಥವಾ ಕೃಷಿಯ ಪ್ರಗತಿಗಾಗಿ, ಖ್ಯಾತಿಗಳಿಸಲು, ಜನರ ವಿಶ್ವಾಸ ಪಡೆಯಲು, ಅಧ್ಯಯನದಲ್ಲಿ ಯಶಸ್ಸು ಮುಂತಾದ ಉದ್ದೇಶಗಳಿಗಾಗಿ, ಶಾಂತಿಯನ್ನು ತರಲು, ಕಳೆದುಹೋದ ಆಸ್ತಿಯನ್ನು ಪಡೆಯಲು, ಮಕ್ಕಳ ಬೆಳವಣಿಗೆಗೆ ಸಹಾಯ ಮಾಡಲು ಬಳಸಲಾಗುತ್ತದೆ. ಇವುಗಳನ್ನು ಒಟ್ಟಾಗಿ 'ಶಾಂತಿ ಮತ್ತು ಸೌಹಾರ್ದತೆಯ (ಶಾಂತಿಕ-ಪೌಷ್ಟಿಕ) ಸಾಧನಗಳು' ಎಂದು ಕರೆಯುತ್ತಾರೆ. ಎರಡನೆಯ ಬಗೆಯ ಯಂತ್ರಗಳನ್ನು ಶತ್ರುಗಳಿಗೆ ಹಾನಿ ಮಾಡಲು ಅಥವಾ ಅವರನ್ನು ಮಾಟ ಮಾಡಿ ಕೊಲ್ಲಲು, ಅಥವಾ ಅವರನ್ನು ಹುಚ್ಚನನ್ನಾಗಿ ಮಾಡಲು, ಅವರನ್ನು ಅವರ ವಸತಿಯಿಂದ ಕಿತ್ತೆಸೆಯಲು, ಸ್ನೇಹಿತರ ನಡುವೆ ವೈರತ್ವವನ್ನು ತರಲು, ಒಂದು ಮನೆಗೆ ಕೆಡುಕನ್ನು ಬಯಸಲು, ಮಾತು ಅಥವಾ ಚಲನೆಯನ್ನು ಬಲವಂತವಾಗಿ ತಡೆಯಲು ಮುಂತಾದ ಉದ್ದೇಶಗಳಿಗೆ ಬಳಸುತ್ತಾರೆ. ಇವುಗಳನ್ನು ಸಂಗ್ರಹರೂಪದಲ್ಲಿ 'ಸೇಡಿನ ಕ್ಷಿಪಣಿಗಳು' (ಅಭಿಚಾರ) ಅಥವಾ 'ಉಗ್ರ ಕರ್ಮಗಳು' (ಕೃತ್ಯ) ಎಂದು ಕರೆಯುತ್ತಾರೆ.

ಹೆಚ್ಚಿನ ಸಂಖ್ಯೆಯ ಯಂತ್ರಗಳು ಮೊದಲನೆಯ ವಿಭಾಗಕ್ಕೆ ಸೇರುತ್ತವೆ ಎನ್ನುವುದು ತುಂಬಾ ಗಮನಾರ್ಹವಾದ ವಿಚಾರ. ಹಾನಿಕಾರಕ ಯಂತ್ರಗಳ ಸಂಖ್ಯೆ ತೀರಾ ಕಡಿಮೆ. ಹಾಗೆಂದು ಜನರು ಇತರರನ್ನು ಹಾನಿಗೊಳಿಸುವ ಬದಲು ಕೇವಲ ಒಳ್ಳೆಯದನ್ನೇ ಬಳಸುತ್ತಾರೆ ಎಂದರ್ಥವಲ್ಲ. ವಾಸ್ತವವಾಗಿ ಸೌಮ್ಯ ಯಂತ್ರಗಳನ್ನು ಬಳಸುವುದು ಸಾರ್ವತ್ರಿಕವೂ, ಸುಲಭವೂ, ಸಾಮಾನ್ಯ ನಂಬುಗೆಗೆ ಹೆಚ್ಚು ಅಂಗೀಕೃತವೂ ಆಗಿದೆ. ಆದರೆ ಈ ಯಂತ್ರಗಳು ಸಾಮಾನ್ಯವಾಗಿ ಚಿಕ್ಕದಾಗಿರುತ್ತವೆ, ತೀರಾ ಪರಿಚಿತ ಸ್ವರೂಪದಲ್ಲಿರುತ್ತವೆ ಮತ್ತು ಸಂಕ್ಷಿಪ್ತ ಕಾಲಾವಧಿಯವಾಗಿರುತ್ತವೆ. ಅವುಗಳನ್ನು ಅರ್ಚಕರು, ಕುಟುಂಬದ ಸದಸ್ಯರು ಅಥವಾ ಸಂಪ್ರದಾಯಗಳನ್ನು ನಡೆಸಿಕೊಡುವವರು ಸುಲಭವಾಗಿ ತಯಾರಿಸುತ್ತಾರೆ. ಅವುಗಳ ತಯಾರಿಕೆಗೆ ತೀರಾ ಕಡಿಮೆ ತಾಂತ್ರಿಕ ಕೌಶಲ್ಯ ಸಾಕು. ಹಾಗೆಯೇ ಅವುಗಳನ್ನು ತಯಾರಿಸುವಾಗ ಹೆಚ್ಚಿನ ಎಚ್ಚರಿಕೆಯೂ ಬೇಕಾಗಿಲ್ಲ. ಇಲ್ಲಿ ಅದನ್ನು ತಯಾರಿಸುವವರ ಪ್ರಾಮಾಣಿಕತೆಯೇ ತುಂಬಾ ಮುಖ್ಯವಾದದ್ದು. ಆದ್ದರಿಂದ ಈ ಯಂತ್ರಗಳನ್ನು ಸಾಮಾನ್ಯವಾಗಿ ವ್ಯಕ್ತಿಯ ಒಳಿತನ್ನು ಬಯಸುವವರಿಂದ ಅಥವಾ ಕುಟುಂಬದ ಸದಸ್ಯರಿಂದ ಮಾಡಿಸಲಾಗುತ್ತದೆ. ಹೀಗೆ, ಅನುಕೂಲಕಾರಕ ಯಂತ್ರಗಳು ಜನಪ್ರಿಯವಾಗಿದ್ದಾಗ್ಯೂ , ಅಷ್ಟಾಗಿ ಬಳಕೆಯಲ್ಲಿಲ್ಲ.

ಮಾರಕ ಯಂತ್ರಗಳನ್ನು ಸಾಮಾನ್ಯವಾಗಿ ಜನರು ಸಲೀಸಾಗಿ ಬಳಸುವುದಿಲ್ಲ. ಅವುಗಳು ತೀರಾ ತೀವ್ರವಾದ ದ್ವೇಷದ ಗಳಿಗೆಗಳಲ್ಲಿ, ದೀರ್ಘಕಾಲದಿಂದ ನಡೆದುಬಂದ ಜಗಳಗಳಲ್ಲಿ, ಅತ್ಯಂತ ಹತಾಶೆಯ ಸಂದರ್ಭಗಳಲ್ಲಿ ಬಳಕೆಯಾಗುತ್ತವೆ. ಅವುಗಳನ್ನು

ಬಯಸುವವರನ್ನು ಜನಸಮುದಾಯವು ಗೌರವಿಸುವುದಿಲ್ಲ. ಈ ಯಂತ್ರಗಳ ಬಗ್ಗೆ ಒಲವು ತೋರುವುದು ಎಂದರೆ ಸೇಡು, ಕೀಳು ಸ್ವಭಾವ, ಕುತಂತ್ರ , ಕ್ರೂರತೆ ಮತ್ತು ಶಿಷ್ಟತೆಗೆ ಅಗೌರವ ತೋರಿದ ಹಾಗೆ. ಆದ್ದರಿಂದ ಈ ಯಂತ್ರಗಳನ್ನು ತಯಾರಿಸುವ ಮತ್ತು ಬಳಕೆಗೆ ನೀಡುವ ತಾಂತ್ರಿಕರು ಕೂಡಾ ಗೌರವಕ್ಕೆ ಪಾತ್ರವಾಗುವುದಿಲ್ಲ. ಬದಲಿಗೆ ಅವರು ಭಯ ಹುಟ್ಟಿಸುತ್ತಾರೆ. ಅವರನ್ನು ಗೌರವಿಸುವುದಕ್ಕಿಂತ ಹೀಗಳೆಯುವುದೇ ಹೆಚ್ಚು. ಇದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಆದರೆ ಈ ಕಪ್ಪು ಮಂತ್ರವಿದ್ಯೆಯ (black art) ಸಾಮರ್ಥ್ಯದ ಬಗ್ಗೆ ಇರುವ ವ್ಯಾಪಕ ನಂಬಿಕೆಯ ಹಿನ್ನೆಲೆಯಲ್ಲಿ ಇದನ್ನು ಮತ್ತೆ ಉಲ್ಲೇಖಿಸಬೇಕಿದೆ. ಮಾರಕ ಯಂತ್ರಗಳು ದಕ್ಷವೋ ಅಲ್ಲವೋ ಎಂಬ ಮಾತು ಬೇರೆ ; ಅವು ಖಂಡಿತ ಈ ಆಚರಣೆಯನ್ನು ಅನುಸರಿಸುವವರ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡುತ್ತವೆ. ಉದಾಹರಣೆಗೆ ಈ ಯಂತ್ರಗಳನ್ನು ತಯಾರಿಸಿ, ಬಳಸುವವರ ಮೇಲೆ. ಈ ಯಂತ್ರಗಳ ಬಗ್ಗೆ ಯೋಚಿಸುವವರಿಗೆ ಇದು ಹಾನಿಕಾರಕ. ಕುತಂತ್ರದ ವಿನ್ಯಾಸಗಳು ವಿನ್ಯಾಸಕಾರರನ್ನೇ ಹೆಚ್ಚಾಗಿ ಘಾಸಿ ಮಾಡುತ್ತವೆ.

ಗೂಢ ಯಂತ್ರಗಳ ಪ್ರಮುಖವಾದ ಒಂದು ಸಿದ್ಧಾಂತ ಎಂದರೆ 'ವಶೀಕರಣ' ಅಥವಾ ತಾನು ಇಷ್ಟಪಡುವ ಒಂದು ವ್ಯಕ್ತಿಯನ್ನು ಮಂತ್ರವಶ ಮಾಡುವುದು. ಇದು ಖಂಡಿತವಾಗಿಯೂ ಮಾರಕ ಯಂತ್ರಗಳ ವಿಭಾಗದಲ್ಲಿ ಬರುತ್ತದೆ. ಯಾಕೆಂದರೆ ಇಷ್ಟಕ್ಕೆ ಗುರಿಯಾದ ವ್ಯಕ್ತಿಯನ್ನು ಅವನ ಅಥವಾ ಅವಳ ಇಷ್ಟಕ್ಕೆ ವಿರುದ್ಧವಾಗಿ ಯಂತ್ರದ ಮೂಲಕ ಬಲವಂತ ಮಾಡಲಾಗುತ್ತದೆ. ಇಲ್ಲಿ ಸಾಮಾನ್ಯವಾಗಿ ಬಲವಂತಕ್ಕೆ ಒಳಗಾಗುವವಳು ಪರಪತ್ನಿ ಅಥವಾ ತನ್ನನ್ನು ಇಷ್ಟಪಡದ ಸ್ತ್ರೀಯಾಗಿರುತ್ತಾಳೆ. ಈ ಫಲಿತಾಂಶವನ್ನು ನೀಡುತ್ತವೆ ಎನ್ನಲಾದ ಹಲವು ಯಂತ್ರಗಳು ಇಲ್ಲಿವೆ. ಆದರೆ ಇಲ್ಲಿನ ವಿಷಯ ವ್ಯಾಪ್ತಿಯು ಕೇವಲ ಲೈಂಗಿಕ ಒತ್ತಾಯ ಮತ್ತು ಅಕ್ರಮ ಪ್ರೀತಿಗಷ್ಟೇ ಸೀಮಿತವಾಗಿಲ್ಲ. ತನ್ನನ್ನು ತಾನೇ ಆಕರ್ಷಕಗೊಳಿಸಿಕೊಳ್ಳಲು ಮತ್ತು ಜನರ ಕಣ್ಣಲ್ಲಿ ಇಷ್ಟದವನಾಗಲು, ಅದರಲ್ಲೂ ಅಧಿಕಾರದಲ್ಲಿ ಇರುವವರಿಗೆ ಬೇಕಾದವನಾಗಲು ಈ ಯಂತ್ರವನ್ನು ಬಳಸುವುದೂ ಇದೆ. ಈ ಯಂತ್ರಗಳಿಗೆ ಸಂಬಂಧಿಸಿದಂತೆ ಪದೇ ಪದೇ ಬಳಕೆಯಾಗುವ ಪದಗಳು ಹೀಗಿವೆ: 'ಎಲ್ಲಾ ಜನರೂ ನನ್ನ ಪ್ರಭಾವದೊಳಗೆ ಬರುವಂತಾಗಲಿ (ಸರ್ವಜನಂ ಮೇ ವಶಂ ಆನಯ)'. ಇದರ ಇನ್ನೊಂದು ಸಿದ್ಧಾಂತವೇ ತನ್ನನ್ನು ತಾನು ಸಮರ್ಥವಾಗಿಸಿ ಕೊಳ್ಳುವುದು, ಸಭೆಗಳಲ್ಲಿ, ಸಭಾಂಗಣದಲ್ಲಿ, ಚರ್ಚೆಗಳಲ್ಲಿ ಮತ್ತು ಕುಶಲ ಪ್ರದರ್ಶನಗಳಲ್ಲಿ ತನಗೆ ಯಶಸ್ಸು ಬರುವಂತೆ ಕೇಳಿಕೊಳ್ಳುವುದು. ಈ ಅರ್ಥದಲ್ಲಿ ಈ ಯಂತ್ರಗಳನ್ನು ಹೆಚ್ಚಾಗಿ ಸೌಮ್ಯ ಯಂತ್ರಗಳ ಸಾಲಿಗೆ ಸೇರಿಸುತ್ತಾರೆ.

ಇಲ್ಲಿ ಸೌಮ್ಯ ಅಥವಾ ಮಾರಕ ಯಂತ್ರಗಳ ಸಾಲಿಗೆ ಸೇರಿಸಬಹುದಾದ ಇನ್ನೂ ಕೆಲವು ಯಂತ್ರಗಳಿವೆ. ಇಲ್ಲಿ ಉದಾಹರಿಸಬಹುದಾದದ್ದು, ಅನಾನುಕೂಲ ಗ್ರಹಕೂಟದ

ಇವು ಇಲ್ಲಿ ನೀಡಬಹುದಾದ ಉದಾಹರಣೆಗಳು. ಇಲ್ಲಿರುವ ಪ್ರತಿಯೊಂದೂ ದೈವವು ಒಂದು ನಿರ್ದಿಷ್ಟ ಬಗೆಯ ಪ್ರಜ್ಞೆಗೆ ಸಂಬಂಧಿಸಿದೆ. ಉದಾಹರಣೆಗೆ ಹನುಮಾನ್‌ನನ್ನು ಹೆದರಿಕೆ ಮತ್ತು ಉದ್ವೇಗದ ಸ್ಥಿತಿಗಳಲ್ಲಿ ಯಾಚಿಸುತ್ತಾರೆ. ವೀರಭದ್ರನನ್ನು ಪರಿಹರಿಸಲಾಗದ ತೊಂದರೆಗಳಿಗೆ ಸಿಕ್ಕಿಕೊಂಡಾಗ ಪ್ರಾರ್ಥಿಸುತ್ತಾರೆ. ಖಡ್ಗರಾವಣನನ್ನು ಬಾಲಗ್ರಹದಿಂದ ಪೀಡಿತವಾದ ಮಕ್ಕಳ ಆರೋಗ್ಯವು ಸರಿಯಾಗಲು ಪ್ರಾರ್ಥಿಸುತ್ತಾರೆ. ಕಳೆದುಹೋದ ಆಸ್ತಿಯನ್ನು ಮರಳಿ ಪಡೆಯಲು ಮತ್ತು ಕಳ್ಳತನ-ದರೋಡೆಯ ಭಯದಿಂದ ಮುಕ್ತವಾಗಲು ಕಾರ್ತವೀರ್ಯನ ಸಹಾಯವನ್ನು ಕೇಳುತ್ತಾರೆ.

ಇಂಥ ದೈವಗಳ ಜೊತೆ ಸಂಬಂಧ ಹೊಂದಿದ ಯಂತ್ರಗಳನ್ನು ಮಾಂತ್ರಿಕ ಯಂತ್ರಗಳು ಎಂದು ಕರೆಯುತ್ತಾರೆ. ಅವುಗಳನ್ನು ನಾವು ಈಗತಾನೇ ಗುರುತಿಸಿದ ವಿಭಾಗಕ್ಕೆ ಸೇರಿಸಬಹುದು. ಮೊದಲನೆಯದು ಕೇವಲ ಚಿತ್ರೀಕರಿಸಿದ ರೂಪಗಳಿಂದ ವ್ಯಕ್ತಿಯ ಮಾನಸಿಕತೆಯನ್ನು ಮರುಸಂಘಟಿಸುವುದಾಗಿದೆ. ಆದರೆ ಎರಡನೆಯ ಬಗೆಯ ಯಂತ್ರಗಳು ಸಾಂಪ್ರದಾಯಿಕವಾಗಿ ಶೈಲೀಕೃತವಾದ (traditionally stylised) ದೈವವನ್ನು ಒಳಗೊಂಡಿವೆ. ಹೀಗಾಗಿ ಎರಡನೆಯ ಗುಂಪಿನ ಯಂತ್ರಗಳು ದೈವನಿರ್ದಿಷ್ಟವಾದವು ಎಂದು ಕರೆಯುತ್ತಾರೆ (ದೇವತಾ ಯಂತ್ರಗಳು).

ದೈವ ನಿರ್ದಿಷ್ಟ ಯಂತ್ರಗಳು ಮಾಂತ್ರಿಕ ಯಂತ್ರಗಳಿಗಿಂತ ಇನ್ನೊಂದು ವಿಷಯದಲ್ಲೂ ವಿಭಿನ್ನವಾಗಿವೆ: ಅವುಗಳನ್ನು ಹೊಂದುವುದರಿಂದಷ್ಟೇ ಒಳ್ಳೆಯದಾಗುವುದಿಲ್ಲ. ಅವು ಪ್ರಭಾವ ಬೀರಬೇಕಾದರೆ ಅವುಗಳನ್ನು ನಿರ್ದಿಷ್ಟವಾದ ಆಚರಣೆಗಳಿಂದ ಆರಾಧಿಸಬೇಕು. ಈ ಯಂತ್ರಗಳು ಒಂದು ಬಗೆಯ ಮೂರ್ತಿಗಳಿದ್ದಂತೆ. ಅವುಗಳನ್ನು ಸರಿಯಾಗಿ ನೋಡಿಕೊಂಡಾಗಲೇ ಅವು ಶಕ್ತಿಯನ್ನು ಪಡೆಯುತ್ತವೆ. ಅಂದರೆ, ಭಕ್ತನು ಈ ಯಂತ್ರಗಳನ್ನು ತನ್ನ ನಿರಂತರ ಯತ್ನಗಳಿಂದಲೇ ಬಳಸಿಕೊಳ್ಳಬಹುದು. ಇಲ್ಲಿ ವಾಸ್ತವವಾಗಿ ವ್ಯಕ್ತಿಯು ಮಾಡುವ ಪ್ರಯತ್ನವೇ ಮುಖ್ಯವಾದದ್ದು.

ದೈವ ನಿರ್ದಿಷ್ಟ ಯಂತ್ರಗಳಲ್ಲಿ ದೈವವನ್ನು ಸಾಮಾನ್ಯವಾಗಿ ಅದನ್ನು ಬಿಂಬಿಸುವ ಸೂಕ್ತ ಬೀಜಾಕ್ಷರಗಳಿಂದ ಗುರುತಿಸುತ್ತಾರೆ. ಅದನ್ನು ಕೇಂದ್ರಬಿಂದುವಿನಲ್ಲಿ ಬರೆಯುತ್ತಾರೆ. ಕೆಲವೊಮ್ಮೆ ದೈವಕ್ಕೆ ಸಂಬಂಧಿಸಿದ ಇಡೀ ಮಂತ್ರವನ್ನು ಯಂತ್ರದ ಪ್ರದೇಶದ ಒಳಗೆ ಬರೆಯುತ್ತಾರೆ. ಇಲ್ಲಿ ಪರಿವಾರ ದೇವತೆಗಳನ್ನೂ ಯಂತ್ರದ ವಿವಿಧ ಪ್ರದೇಶಗಳಲ್ಲಿ ಮೂಡಿಸಬಹುದು. ಇಂಥ ಪ್ರಕರಣಗಳಲ್ಲಿ ಯಂತ್ರವನ್ನು ದೈವದ ರಾಜಧಾನಿ ಎಂದು ಕರೆಯುತ್ತಾರೆ. ಇಲ್ಲಿ ಯಂತ್ರವು ಪರಿವಾರ, ಸಹಕಾರಿಗಳು, ಕಾರ್ಯಗಳು, ವಿಧಾನಗಳು, ಸಾಧನಗಳು ಮತ್ತಿತರ ವಸ್ತುಗಳ ಮೂಲಕ ದೈವವನ್ನು ಸಂಕೇತಿಸುತ್ತದೆ. ಹೀಗೆ ಯಂತ್ರವನ್ನು ಇಡೀ ವಿಶ್ವದ ಕಿರು ಮಾದರಿಯಂತೆ ನೋಡಲಾಗುತ್ತದೆ. ಆದ್ದರಿಂದ ಇಲ್ಲಿ ಎಂಟು

ದಿಕ್ಕುಗಳನ್ನು, ದಿಕ್ಕುಗಳ ಪಾಲಕರನ್ನು, ಗ್ರಹಗಳನ್ನು, ಮೂಲ ವಸ್ತುಗಳನ್ನು, ದೈವಗಳನ್ನು, ಸರಳ ಚಿತ್ರಗಳನ್ನು (ಬಿಂದು, ಸರಳ ರೇಖೆ, ಛೇದನ ರೇಖೆಗಳು, ತ್ರಿಕೋನ , ವೃತ್ತ) ಇವುಗಳಿಗೆ ಮಹತ್ವದ ಸಂಕೇತಗಳನ್ನು ನೀಡಿ ಸಂಕೀರ್ಣ ಚಿತ್ರಗಳನ್ನಾಗಿ ಮಾಡಲಾಗುತ್ತದೆ (ಚತುಷ್ಕೋನ , ಷಟ್‌ಕೋನ , ಪಂಚಕೋನ , ದ್ವಿಛೇದನ , ನಕ್ಷತ್ರ , ಸ್ವಸ್ತಿಕ , ಕಮಲ ಇತ್ಯಾದಿ). ಇಲ್ಲಿ ಪ್ರತಿಯೊಂದಕ್ಕೂ ಒಂದು ಮಹಾನ್ ಪ್ರಕ್ರಿಯೆಯನ್ನು ಸಂಕೇತಿಸಲಾಗುತ್ತದೆ. ಈ ಎಲ್ಲಾ ಸಂಕೀರ್ಣ ರಚನೆಗಳೊಂದಿಗೆ ಇರುವ ಇಡೀ ಯಂತ್ರವನ್ನು, ಕೇಂದ್ರ ಬಿಂದುವಿನಲ್ಲಿ ಮೂಡಿಸಿದ ದೈವದ ಆಟದ ಮೈದಾನ ಎಂದು ಪರಿಗಣಿಸಲಾಗುತ್ತದೆ.

ಪೂಜಾ ವಿಧಾನಗಳು ಭಕ್ತನು ಈ ಕ್ಷೇತ್ರವನ್ನು ಪ್ರವೇಶಿಸಿ ದೈವದ ಹತ್ತಿರಕ್ಕೆ ಬರಲು ಸಹಾಯಕವಾಗಿರುತ್ತವೆ. ದೈವನಿರ್ದಿಷ್ಟವಾದ ಮಂತ್ರವನ್ನು ಸರಿಯಾಗಿ ಉಚ್ಚರಿಸಿದರೆ ಅದು ತುಂಬಾ ಪ್ರಭಾವಶಾಲಿಯಾಗಿರುತ್ತದೆ. ಇದು ಭಕ್ತನ ಪ್ರಜ್ಞೆಯನ್ನು ದೈವಪ್ರಜ್ಞೆಯಾಗಿಸುತ್ತದೆ. ಒಂದು ಅಧಿಕೃತ ಪಠ್ಯವು ಹೀಗೆ ಹೇಳುತ್ತದೆ: 'ಯಂತ್ರವು ತನ್ನ ಆತ್ಮದಲ್ಲಿ ಒಂದು ಮಂತ್ರವನ್ನು ಹೊಂದಿರುತ್ತದೆ. ದೈವವು ಮಂತ್ರದ ಆತ್ಮವಾಗಿರುತ್ತದೆ' (ಕೌಲಾವಳೀ). ಇಡೀ ಮಂತ್ರವನ್ನು ದೇವತೆಯ ಶಾಬ್ದಿಕ ರೂಪವಾದ ಬೀಜಾಕ್ಷರದಲ್ಲಿ ಸಾಂದ್ರೀಕೃತಗೊಳಿಸಲಾಗಿರುತ್ತದೆ. ಈ ಬೀಜಾಕ್ಷರವನ್ನು ಪೂಜಿಸುವುದರಿಂದ ಆರಾಧ್ಯ ದೇವರು ಸಾಕ್ಷಾತ್ಕಾರವಾಗುತ್ತದೆ. ಬೀಜಾಕ್ಷರದಿಂದ ಮಂತ್ರವು ಹುಟ್ಟುತ್ತದೆ. ಮಂತ್ರದಿಂದ ಯಂತ್ರವು ರೂಪುಗೊಳ್ಳುತ್ತದೆ. ಎಲ್ಲಾ ವಿಸ್ತರಣೆಗಳೂ ಒಂದು ಬಿಂದುವಿನಲ್ಲಿ ಕೊನೆಯಾಗುತ್ತವೆ. ಎಲ್ಲಾ ಶಾಬ್ದಿಕ ವರ್ಣನೆಗಳೂ ಬೀಜಾಕ್ಷರದಲ್ಲಿ ವಿಲೀನವಾಗುತ್ತವೆ. ಎಲ್ಲಾ ಚಿಂತನೆಗಳೂ ದೈವದಲ್ಲಿ ವಿಲೀನವಾಗುತ್ತವೆ. ಹೀಗೆ ದೈವ, ಬಿಂದು ಮತ್ತು ಬೀಜಾಕ್ಷರದ ನಡುವೆ ಸಂಬಂಧ. ಹಾಗೆಯೇ ಮಂತ್ರ , ಯಂತ್ರ ಮತ್ತು ಭಕ್ತನಪ್ರಜ್ಞೆಯ ಆಯಾಮಗಳ ನಡುವೆಯೂ ಸಂಬಂಧವಿದೆ.

ದೈವನಿರ್ದಿಷ್ಟ ಯಂತ್ರವು ಪೂಜಾ ಆಚರಣೆಯನ್ನು ಒಳಗೊಂಡಿದೆ. ಇದರಲ್ಲಿ ದೈವವನ್ನು ಸೂಕ್ತ ಮಂತ್ರದಿಂದ ಜಾಗೃತಿಗೊಳಿಸಲಾಗುತ್ತದೆ. ಮತ್ತು ಸೂಕ್ತ ಯಂತ್ರದ ಮೂಲಕ ಚಿತ್ರೀಕರಿಸಲಾಗುತ್ತದೆ. ದೈವದ ಮನುಷ್ಯಾರೋಪಣದ ಪ್ರಾತಿನಿಧಿಕತೆಯು ಇಲ್ಲಿ ಮೂರ್ತಿಪೂಜೆಯು ಇಲ್ಲದಿರುವ ಸಂದರ್ಭದಲ್ಲಿ ಪ್ರಸ್ತುತವಾಗುತ್ತದೆ. ಇಲ್ಲಿ ಯಂತ್ರವು ಇರುವಾಗ ಮಂತ್ರವು ದೈವವನ್ನು ಸಂಕೇತಿಸುತ್ತದೆ. ಹೀಗಿದ್ದೂ, ಮೂರ್ತಿಪೂಜೆಯ ಹಲವಾರು ಸಂಪ್ರದಾಯಗಳು (ಸ್ವಾಗತಿಸುವುದು, ಕುಳಿತುಕೊಳ್ಳಿಸುವುದು, ಗೌರವಿಸುವುದು, ಸಾಂಪ್ರದಾಯಿಕ ಸ್ನಾನ ಮಾಡಿಸುವುದು, ಹೊಸ ಉಡುಗೆಗಳನ್ನು ನೀಡಿ ಅಲಂಕರಿಸುವುದು, ಆಹಾರವನ್ನು ನೈವೇದ್ಯವಾಗಿ ನೀಡುವುದು, ಆರತಿ ಬೆಳಗುವುದು ಇತ್ಯಾದಿ) ಮುಂತಾದವುಗಳನ್ನು ಇಲ್ಲಿಯೂ ಅಳವಡಿಸಲಾಗಿದೆ. ಮೂರ್ತಿಪೂಜೆ ಮತ್ತು ಯಂತ್ರಪೂಜೆಗಳಲ್ಲಿ ಕಂಡು ಬರುವ ಒಂದು ಪ್ರಮುಖ ಘಟನೆ ಎಂದರೆ ಪ್ರಾಣ

ಪ್ರತಿಷ್ಠಾಪನೆ ಮಾಡುವುದು; ಇದಿಲ್ಲದಿದ್ದರೆ ಮೂರ್ತಿಯು ಕೇವಲ ಗೊಂಬೆಯಾಗುತ್ತದೆ, ಯಂತ್ರವು ಕೇವಲ ಒಂದು ಜ್ಯಾಮಿತಿಯ ವಿನ್ಯಾಸವಾಗುತ್ತದೆ. ಇದು ತುಂಬಾ ವಿವರವಾದ ಆಚರಣೆಯಾಗಿದ್ದು ಇದಕ್ಕಾಗಿ ಹೋಮ, ಜಪಗಳು ನಡೆಯುತ್ತವೆ. ಜಪ ಎಂದರೆ ಮಂತ್ರವನ್ನು ಹಲವು ಸಲ ಪುನರುಚ್ಚರಿಸುವುದು. ಇದು ದೈವ ನಿರ್ದಿಷ್ಟ ಯಂತ್ರಗಳ ವಿಶಿಷ್ಟ ಲಕ್ಷಣವನ್ನು ಕುರಿತ ವಿವರಣೆಯಾಗಿದೆ. ಇನ್ನೆರಡು ವಿಧಾನಗಳಲ್ಲಿ ಈ ಆಚರಣೆ ಇರಲೇಬೇಕೆಂದೇನೂ ಇಲ್ಲ.

ಪೂಜೆಯನ್ನು ಸ್ವೀಕರಿಸುವ ದೈವಗಳಲ್ಲಿ ಸಾಮಾನ್ಯವಾಗಿ ಏಳು ಬಗೆಗಳಿವೆ: (1) ಪಂಥದೇವರುಗಳು (ಶಿವ, ವಿಷ್ಣು, ದೇವಿ, ಸೂರ್ಯ, ಗಣಪತಿ ಇತ್ಯಾದಿ); (2) ಕುಟುಂಬಗಳಲ್ಲಿ ತಲೆಮಾರುಗಳಿಂದ ಪೂಜೆಗೊಳಗಾದ ಕುಲದೇವತೆಗಳು; (3) ಇಷ್ಟಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಂಡ ಅಥವಾ ಹಿರಿಯರು ನೀಡಿದ ಇಷ್ಟದೇವತೆಗಳು; (4) ಮನೆಯ ಸದಸ್ಯರ ಒಳಿತಿಗಾಗಿ ಜಾಗೃತಿ ಮಾಡಿದ ಮತ್ತು ವಾಸಸ್ಥಾನದಿಂದ ಕೆಟ್ಟ ಶಕ್ತಿಗಳನ್ನು ನಿವಾರಿಸಲು ಆಯ್ಕೆ ಮಾಡಿಕೊಂಡ ಗೃಹದೇವತೆಗಳು; (5) ಸಾಮುದಾಯಿಕವಾಗಿ ಪೂಜೆಯನ್ನು ಸ್ವೀಕರಿಸುವ ಗ್ರಾಮದೇವತೆಗಳು; (6) ಇಡೀ ಜಗತ್ತನ್ನು ಆಳುವ ದೇವತೆಗಳು (ಲೋಕಪಾಲರು, ಪ್ರಜಾಪತಿಗಳು, ಹನ್ನೊಂದು ರುದ್ರರು, ಹನ್ನೆರಡು ಆದಿತ್ಯರು ಇತ್ಯಾದಿ ರಕ್ಷಕ ಚೈತನ್ಯಗಳು); ಮತ್ತು (7) ಹೃದಯದಲ್ಲೇ ನೆಲೆಸಿರುವ ಆತ್ಮದೇವತೆಗಳು. ಇವುಗಳಲ್ಲಿ ಎಲ್ಲವೂ ಯಂತ್ರಗಳಲ್ಲಿ ಬಿಂಬಿತವಾಗಿಲ್ಲ ಅಥವಾ ನಿರ್ದಿಷ್ಟವಾದ ಮಂತ್ರಗಳನ್ನು ಹೊಂದಿಲ್ಲ. ಅಥವಾ ಇವು ಪ್ರತ್ಯೇಕ ಗುಂಪುಗಳೂ ಅಲ್ಲ. ಆಯ್ಕೆ ಮಾಡಿಕೊಂಡ ದೈವವು ಕುಲದೇವತೆಯೇ ಆಗಿರಬಹುದು. ಕುಲದೇವತೆಯು ಗ್ರಾಮದೇವತೆಯೂ ಆಗಿರಬಹುದು. ಅದು ಗೃಹದೇವತೆಯೂ ಆಗಿರಬಹುದು.

ಯಂತ್ರಗಳಲ್ಲಿ ಕಾಣುವ ದೈವಗಳು ಸಾಮಾನ್ಯವಾಗಿ ಪಂಥೀಯ, ಇಷ್ಟ, ಕುಲ ಅಥವಾ ಗ್ರಾಮದೇವತೆಯಾಗಿರುತ್ತವೆ. ಕೊನೆಯ ಬಗೆಯ ದೈವಗಳು ಮಾಂತ್ರಿಕ ಸ್ವರೂಪದಲ್ಲಿರುವ ಯಂತ್ರಗಳಲ್ಲಿ ಬಿಂಬಿತವಾಗಿರುತ್ತವೆ. ಹನುಮಾನ್, ಚಂಡಿ, ದುರ್ಗಾ, ಶಾಸ್ತ, ಕಾಳಿ, ಭೈರವ, ಗಣೇಶ, ಯೆಲ್ಲಮ್ಮ, ಕಾರ್ತವೀರ್ಯ ಇತ್ಯಾದಿ. ಈ ದೈವನಿರ್ದಿಷ್ಟ ಯಂತ್ರಗಳು ಸಾಂಪ್ರದಾಯಿಕ ಆಚರಣೆಗಳನ್ನು ಹೊಂದಿರಬಹುದು ಅಥವಾ ಹೊಂದದಿರಬಹುದು. ಆದರೆ ಅವು ಸಾಮಾನ್ಯವಾಗಿ ಸೂಕ್ತ ಮಂತ್ರ ಅಥವಾ ಬೀಜಾಕ್ಷರಗಳನ್ನು ಹೊಂದಿರುತ್ತವೆ. ಈ ಪಂಥೀಯ ದೈವಗಳನ್ನು ಪಂಚಬ್ರಹ್ಮರು ಎಂದು ಕರೆಯುತ್ತಾರೆ: ಗಣಪತಿ (ಆರು ಅಕ್ಷರಗಳ ಮಂತ್ರ), ಸೂರ್ಯ (ಎಂಟು ಅಕ್ಷರಗಳ ಮಂತ್ರ), ದೇವಿ (ಹದಿನೈದು ಅಕ್ಷರಗಳ ಮಂತ್ರ), ಶಿವ (ಐದು ಅಕ್ಷರಗಳ ಮಂತ್ರ) ಮತ್ತು ವಿಷ್ಣು (ಹನ್ನೆರಡು ಅಕ್ಷರಗಳ ಮಂತ್ರ). ಅವುಗಳ ಬೀಜಾಕ್ಷರಗಳನ್ನು ಸಂಗ್ರಹರೂಪದಲ್ಲಿ ಐಂ, ಹ್ರೀಂ, ಶ್ರೀಂ, ಸ್ಯೆಂ, ಸ್ರೌಃ ಎಂದು ಕರೆಯುತ್ತಾರೆ.

ಆಯ್ಕೆ ಮಾಡಿಕೊಂಡ ದೈವಗಳ ಜೊತೆಗಿರುವ ಯಂತ್ರಗಳು ಎಲ್ಲಾ ಬಗೆಯ ಆಶೋತ್ತರಗಳನ್ನು, ಸಾಮಾನ್ಯವಾದ್ದರಿಂದ ಹಿಡಿದು ಆಧ್ಯಾತ್ಮಿಕದವರೆಗೆ – ಸಾಧಿಸಲೆಂದು ಇರುತ್ತವೆ. ಇಷ್ಟದೇವತೆಗಳಿರುವ ಯಂತ್ರಗಳನ್ನು ಕುಟುಂಬದ ಕಲ್ಯಾಣಕ್ಕಾಗಿ ಮತ್ತು ಸಾಮಾನ್ಯ ಒಳಿತಿಗಾಗಿ ಬಳಸುತ್ತಾರೆ. ಎರಡೂ ಬಗೆಯ ಯಂತ್ರಗಳು ಆಧ್ಯಾತ್ಮಿಕ ದಾರಿಯಲ್ಲಿ ಇರುವ ಅಡೆತಡೆಗಳನ್ನು ನಿವಾರಿಸುವುದಕ್ಕೆ ನೆರವಾಗುತ್ತವೆ. ಪೂಜೆಯ ಕಾಲಕ್ಕೆ ಜಾಗ್ರತಗೊಳಿಸಲಾಗುವ ಈ ದೈವಗಳ ಪರಿವಾರ ದೇವತೆಗಳು ಮೂರು ವಿಭಾಗಗಳಲ್ಲಿ ಬರುತ್ತವೆ: ಗುರುಗಳು ಅಥವಾ ಯೋಗಿನಿಗಳು, ರಕ್ಷಕರು ಮತ್ತು ಅರ್ಥಸಾಧಕರು. ಅವರಿಗೆ ಯಂತ್ರದೊಳಗೆ ಸೂಕ್ತ ಆವರಣಗಳನ್ನು ನೀಡಲಾಗುತ್ತದೆ. ಹಾಗೆಯೇ ಅವುಗಳನ್ನು ಸೂಕ್ತ ಬೀಜಾಕ್ಷರಗಳ ಮೂಲಕ ಬಿಂಬಿಸಲಾಗುತ್ತದೆ.

ದಶಮಹಾವಿದ್ಯೆಗಳನ್ನು ಪ್ರತಿನಿಧಿಸುವ ದೈವಗಳು ಈ ದೈವನಿರ್ದಿಷ್ಟ ಯಂತ್ರಗಳಲ್ಲಿ ಪ್ರಸಿದ್ಧವಾದವು. ಅವುಗಳು ಹೀಗಿವೆ: ಕಾಳಿ (ಕ್ರೀಂ ಬೀಜಾಕ್ಷರದಿಂದ ಮೂಡಿರುವ ಪ್ರಾಚೀನ ಕಾಲದ ವಿಕಾಸದ ಪ್ರತಿನಿಧಿ), ತಾರಾ (ಚೈತನ್ಯದ ಸೋಪಾನ, ಓಂ), ಶೋಡಷೀ (ಸಂಪೂರ್ಣತೆ ಮತ್ತು ನಿಖರತೆ, ಹ್ರೀಂ), ಭುವನೇಶ್ವರಿ (ಆಕಾಶಪ್ರಜ್ಞೆ, ಹ್ರೀಂ), ಛಿನ್ನಮಸ್ತ (ಸದಾ ಪುನರ್ಜನ್ಮ ಎತ್ತಲು ಬಯಸುವ ದೇವತೆ, ಹೂಂ), ಭೈರವಿ (ವಿನಾಶದ ಶಕ್ತಿ, ಹ್ಸೈಂ, ಹ್ಸ್ಕ್ಲ್ರೀಂ, ಹ್ಸೌಃ) ಧೂಮಾವತಿ (ಸಾವು, ಹತಾಶೆ, ವಿನಾಶ, ಧೂಂ), ಬಗಲಾಮುಖಿ (ಭ್ರಮೆಗೆ ತಳ್ಳುವ ಅಪ್ರಜ್ಞಾ ಪ್ರವೃತ್ತಿಗಳು, ಹ್ಲೀಂ), ಮಾತಂಗಿ (ಕೆಡುಕಿನ ಮೇಲೆ ಬಲ ಸಾಧಿಸುವ ದೈವ, ಐಂ, ಹ್ರೀಂ, ಶ್ರೀಂ, ಐಂ, ಕ್ಲೀಂ, ಸೌಃ) ಮತ್ತು ಕಮಲಾ (ಸಮೃದ್ಧಿ ಮತ್ತು ಶುದ್ಧತೆ, ಶ್ರೀಂ). ಅವುಗಳಲ್ಲಿ ಪ್ರತಿಯೊಂದೂ ಸ್ಪಷ್ಟಚಹರೆಗಳುಳ್ಳ ಯಂತ್ರವಾಗಿದೆ. ಉದಾಹರಣೆಗೆ ಕಾಳಿಗೆ ಎಂಟು ದಳಗಳ ಪದ್ಮ, ಕಮಲಾಗೆ ವೃತ್ತದೊಳಗೆ ಒಂದು ಷಟ್‌ಕೋನ, ಭುವನೇಶ್ವರಿಗೆ ನಕ್ಷತ್ರದ ಷಟ್‌ಕೋನ, ಧೂಮಾವತಿಗೆ ಎಂಟು ದಳಗಳ ಪದ್ಮದೊಳಗೆ ಒಂದು ಷಟ್‌ಕೋನ, ಹೀಗೆ. ಆದರೆ ಹತ್ತು ದೈವಗಳನ್ನು ಎಂಟು ದಿಕ್ಕುಗಳಲ್ಲಿ ಸ್ಥಾಪಿಸಲಾಗಿದೆ. ಉತ್ತರದಲ್ಲಿ ಕಾಳಿ, ಈಶಾನ್ಯದಲ್ಲಿ ಶೋಡಷೀ, ಪೂರ್ವದಲ್ಲಿ ಛಿನ್ನಮಸ್ತ, ಅಗ್ನೇಯದಲ್ಲಿ ಧೂಮಾವತಿ, ದಕ್ಷಿಣದಲ್ಲಿ ಬಗಲಾ, ನೈಋತ್ಯದಲ್ಲಿ ಕಮಲಾ, ಪಶ್ಚಿಮದಲ್ಲಿ ಭುವನೇಶ್ವರಿ, ವಾಯುವ್ಯದಲ್ಲಿ ಮಾತಂಗಿ, ಮೇಲೆ ತಾರಾ ಮತ್ತು ಕೆಳಗೆ ಭೈರವಿ.

ಇವುಗಳಲ್ಲಿ ಮೂರು ಮುಖ್ಯ ದೈವಗಳನ್ನು ವಿಶೇಷವಾಗಿ ಪೂಜಿಸಲಾಗುತ್ತದೆ: ಕಾಳಿ (ದೇಶದ ಮತ್ತು ನೇಪಾಳದ ಪೂರ್ವ ಪ್ರದೇಶಗಳಲ್ಲಿ), ತಾರಾ (ನೇಪಾಳ, ಟಿಬೆಟ್, ಮಂಗೋಲಿಯಾ ಮತ್ತು ಚೀನಾದಲ್ಲಿ) ಮತ್ತು ಶೋಡಷೀ (ತ್ರಿಪುರ ಸುಂದರಿ, ರಾಜರಾಜೇಶ್ವರಿ, ಬಾಲಾ ಮುಂತಾದ ರೂಪದಲ್ಲಿ ದೇಶದ ಬಹುತೇಕ ಭಾಗಗಳಲ್ಲಿ). ಈ ಮೂರು ದೈವಗಳನ್ನು ಆರಾಧಿಸುವ ಕುರಿತು ವಿವರಣೆಗಳನ್ನು ಮಧ್ಯಕಾಲೀನ ಗ್ರಂಥಗಳಲ್ಲಿ ಕಾಣಬಹುದು. ಈ ಮೂರು ದೈವಗಳ ವಿವಿಧ ಬಗೆಯ ಸ್ವರೂಪಗಳನ್ನೂ ಇಲ್ಲಿ ಯಂತ್ರದ

ರೂಪದಲ್ಲಿ ಪೂಜಿಸಲಾಗುತ್ತದೆ: ಮಹಿಷಮರ್ದಿನಿ, ದುರ್ಗಾ, ಚಾಮುಂಡಿ, ಶೂಲಿನೀ, ಅನ್ನಪೂರ್ಣ, ಪ್ರತ್ಯಂಗಿರ, ಇತ್ಯಾದಿ. ಬಹುತೇಕ ದೈವನಿರ್ದಿಷ್ಟ ಯಂತ್ರಗಳು ಮಾತೃದೇವತೆಗಳನ್ನು ಪ್ರತಿನಿಧಿಸುತ್ತವೆ ಎಂಬುದು ಗಮನಾರ್ಹ. ಸುಪ್ರಸಿದ್ಧವಾಗಿರುವ ಶ್ರೀಚಕ್ರ ಮತ್ತು ಬಾಲಾ-ಯಂತ್ರ ಇವುಗಳು ಈ ವಿಭಾಗಕ್ಕೆ ಸೇರುತ್ತವೆ. ಶಿವನ ಯಂತ್ರಗಳು ಕೆಲವೇ ಇವೆ; ಆದರೆ ಶಿವನ ಪರಿವಾರ ದೇವತೆಗಳು ತಮ್ಮದೇ ಆದ ಯಂತ್ರವನ್ನು ಹೊಂದಿವೆ; (ಭೈರವ, ವೀರಭದ್ರ, ಗಣೇಶ, ಭೂತ-ದಾಮರ ಇತ್ಯಾದಿ). ವಿಷ್ಣು ಯಂತ್ರಗಳು ಸಾಮಾನ್ಯವಾಗಿ ಅವನ ಅವತಾರಗಳನ್ನು ಬಿಂಬಿಸುತ್ತವೆ; ಕೃಷ್ಣ, ರಾಮ, ನರಸಿಂಹ ಮತ್ತು ವಾಸುದೇವ. ಯಂತ್ರಗಳಲ್ಲಿ ಪೂಜೆಗೊಳ್ಳುವ ಇತರೆ ಪುರುಷ ದೈವಗಳಲ್ಲಿ ಹಲವು ಮಾನವ ನಾಯಕರನ್ನೇ ಬಿಂಬಿಸುತ್ತವೆ. ಉದಾಹರಣೆಗೆ ಕಾರ್ತವೀರ್ಯ, ಶಾಸ್ತ, ವಟುಕಭೈರವ ಮತ್ತು ಮೈಲಾರ.

ಮೂರನೆಯ ಪ್ರಮುಖ ಯಂತ್ರಗಳು ಮುಖ್ಯವಾಗಿ ಮನಸ್ಸನ್ನು ಕೇಂದ್ರೀಕರಿಸುವ, ಪ್ರಜ್ಞೆಯನ್ನು ಒಂದೇ ದಿಕ್ಕಿನತ್ತ ಹರಿಸಿ ಅದರ ಗಮನವನ್ನು ಕ್ರಮವಾಗಿಡುವ ಉದ್ದೇಶವನ್ನು ಹೊಂದಿವೆ. ಇವುಗಳನ್ನು ಬಹುತೇಕ ಟಿಬೆಟ್, ಚೀನಾ ಮತ್ತು ಜಪಾನುಗಳಲ್ಲಿ ಸಾಮಾನ್ಯವಾಗಿ ಮಂಡಲಗಳು ಎಂದು ಕರೆಯುತ್ತಾರೆ. ಅವುಗಳನ್ನು ಮನೋವಿಶ್ವ ಲೋಕಗಳು (psychocosmograms) ಎಂದು ಕರೆಯುತ್ತಾರೆ. ಅವುಗಳು ಅಭ್ಯಾಸ ಮಾಡುವವನ ಸಾಪೇಕ್ಷ ಸೂಕ್ತವಾಗಿಯೇ ಅವಕಾಶಗಳ ಮಾದರಿಗಳಾಗಿವೆ. ಇವುಗಳು ಆತನು ಒಳಗೊಂಡ ಲೌಕಿಕ ಮತ್ತು ನಿರ್ವಹಣಾ ಜಗತ್ತನ್ನು ಒಳಗೊಂಡಿರುತ್ತವೆ. ಭಾರತೀಯ ಚಿಂತನೆಯು ಮೂರು ಬಗೆಯ ಅವಕಾಶಗಳನ್ನು ಗುರುತಿಸುತ್ತದೆ; ಸಾಮಾನ್ಯ ಅನುಭವದ ಮೂರು ಆಯಾಮಗಳ ಜಗತ್ತು (ಮಹಾಕಾಶ (subjective space of pure conciousness), ಅಂದರೆ ಪ್ರಾತಿನಿಧಿಕ ಅವಕಾಶ), ಪ್ರಜ್ಞೆ ಮತ್ತು ಅದರ ಮೂಲಕ ಕಾಣುವ ಸಾಪೇಕ್ಷ ಜಗತ್ತು (ಚಿತ್ತಾಕಾಶ subjective space of pure conciousness) ಮತ್ತು ಈ ಎರಡೂ ಅವಕಾಶಗಳಿಗಿಂತ ಮೇಲಿರುವ ಶುದ್ಧ ಪ್ರಜ್ಞೆಯ ಅವಕಾಶ (ಚಿದಾಕಾಶ subjective space of pure conciousness). ಮಂಡಲವು ಈ ಮೂರು ಅವಕಾಶಗಳನ್ನು ಒಳಗೊಂಡಿರುತ್ತದೆ. ಅದು ಒಂದು ಅವಕಾಶದಿಂದ ಇನ್ನೊಂದು ಅವಕಾಶಕ್ಕೆ ಚಲಿಸುವುದಕ್ಕೆಂದೇ ರೂಪುಗೊಂಡಿರುತ್ತದೆ. ಮಹಾಕಾಶದಿಂದ ಚಿತ್ತಾಕಾಶಕ್ಕೆ, ಚಿತ್ತಾಕಾಶದಿಂದ ಚಿದಾಕಾಶಕ್ಕೆ. ಮಂಡಲದ ವಾಸ್ತವ ವಿನ್ಯಾಸವು ಈ ಚಲನೆಯನ್ನು ಒಳಗೊಂಡಿರುತ್ತದೆ. ಇಲ್ಲಿ ಮಹಾಕಾಶವು ಗಡಿರೇಖೆಗಳ ಮೂಲಕ ಬಿಂಬಿತವಾಗಿರುತ್ತದೆ (ಭೂಪುರ ಎಂದು ಕರೆಯುತ್ತಾರೆ), ಅವುಗಳ ಆವರಣಗಳ ಒಳಗೆ ಚಿತ್ತಾಕಾಶ ಇರುತ್ತದೆ. ಚಿದಾಕಾಶವು ಬಿಂದುವಿನಲ್ಲಿ ಬಿಂಬಿತವಾಗಿರುತ್ತದೆ.

ಮಂಡಲದ ಕೇಂದ್ರಬಿಂದುವು ಮಂಡಲದ ಅತ್ಯಂತ ಮುಖ್ಯವಾದ ಭಾಗ. ಯಾಕೆಂದರೆ ಇಡೀ ಯೋಜನೆಯೇ ಇಲ್ಲಿಂದ ಆರಂಭವಾಗುತ್ತದೆ. ಕೊನೆಗೆ ಅದು

ಇಲ್ಲಿಯೇ ವಿಲೀನವಾಗುತ್ತದೆ. ಪ್ರತೀ ವ್ಯಕ್ತಿಯೂ ಅವನದೇ ಆದ ಕೇಂದ್ರಬಿಂದುವನ್ನು ಹೊಂದಿರುತ್ತಾನೆ, ಮತ್ತು ಅವನ ಮಹಾಕಾಶವೂ ಒಂದು ಬಿಂದುವನ್ನು ಹೊಂದಿರುತ್ತದೆ. ಹಾಗೆಯೇ ಅವನ ನಿರ್ವಹಣಾ ಅವಕಾಶವು (ಚಿತ್ತಾಕಾಶ) ತನ್ನದೇ ಆದ ಕೇಂದ್ರ ಬಿಂದುವನ್ನು ಹೊಂದಿರುತ್ತದೆ. ಈ ಮೂರೂ ಒಂದೇ ಬಿಂದುವಿನಲ್ಲಿ ಕೇಂದ್ರಿತವಾಗಿರುವುದಿಲ್ಲ ಎಂದೇ ಬದುಕಿನಲ್ಲಿ ಒತ್ತಡ ಇರುತ್ತದೆ. ಮಂಡಲವು ಈ ಮೂರೂ ಕೇಂದ್ರಗಳನ್ನು ಒಂದೇ ಬಿಂದುವಿನಲ್ಲಿ ಸ್ಥಾಪಿಸುವ ಒಂದು ತಂತ್ರವಾಗಿದೆ. ಧ್ಯಾನವು ವ್ಯಕ್ತಿಯೊಬ್ಬನ ಮಾನಸಿಕ ಶಕ್ತಿಯನ್ನು ಸಂಚಯಿಸುವ ಪ್ರಯತ್ನವಾಗಿದೆ. ಮಂಡಲವು ಇದಕ್ಕೆ ಬೇಕಾದ ಮಾದರಿಯನ್ನು ಒದಗಿಸುತ್ತದೆ.

ಮಂಡಲದ ಮೂಲಕ ಸ್ವಯಂಸಾಕ್ಷಾತ್ಕಾರ ಬಯಸುವ ಸಾಧಕನು ಚಿಂತನೆ ಮತ್ತು ವಸ್ತುವಿಶ್ವವನ್ನು ಬಿಡಬೇಕಾಗುತ್ತದೆ (ಇವು ಒಡೆದುಹೋಗಿರುತ್ತವೆ, ಹಂಚಿಹೋಗಿರುತ್ತವೆ, ಛಿದ್ರವಾಗಿರುತ್ತವೆ), ಆಮೇಲೆ ವಸ್ತು-ಚಿಂತನೆಯಾಚೆ ಇರುವ ಒಳಜಗತ್ತಿನತ್ತ ನಡೆಯಬೇಕಾಗುತ್ತದೆ (ಅದು ಏಕವಾಗಿರುತ್ತದೆ, ಸಂಪೂರ್ಣವಾಗಿರುತ್ತದೆ ಮತ್ತು ಶಾಂತಿಯುತವಾಗಿರುತ್ತದೆ). ಈ ಚಲನೆಯಲ್ಲಿ ಮಂಡಲದ ವಿನ್ಯಾಸವು ಅವನಿಗೆ ತಾರತಮ್ಯಗಳನ್ನು ಸರಿಪಡಿಸಿಕೊಳ್ಳಲು, ಒಳ ಆಯಾಮಗಳನ್ನು ಕಲ್ಪಿಸಿಕೊಳ್ಳಲು, ಮಾನಸಿಕ ಶಕ್ತಿಯನ್ನು ಎಚ್ಚರಿಸಿಕೊಳ್ಳಲು ಒಂದು ಅವಕಾಶವನ್ನು ನೀಡುತ್ತದೆ.

ಮಂತ್ರಗಳು ಮತ್ತು ಮುದ್ರೆಗಳನ್ನು ಮಂಡಲದ ಧ್ಯಾನದ ಸಮಯದಲ್ಲಿ ಬಳಸುವುದು ಸಾಮಾನ್ಯವಾಗಿದೆ. ಒಂದು ಯಂತ್ರವಾಗಿ ಮಂಡಲವು ಚಿತ್ತದ ಕ್ಷೇತ್ರವನ್ನು ಬಿಂಬಿಸುತ್ತದೆ. ಶಾಬ್ದಿಕ ರೂಪದಲ್ಲಿರುವ ಮಂತ್ರವು ವಾಕ್ ಪ್ರಜ್ಞೆಯನ್ನು ಬಿಂಬಿಸುತ್ತದೆ. ಹಾಗೆಯೇ ಶರೀರ ವಿನ್ಯಾಸದಿಂದ ಕೂಡಿದ ಮುದ್ರೆಗಳು ಪ್ರಜ್ಞೆಯು ಆವಾಹಿತವಾದ ಭೌತಿಕ ಮಾಧ್ಯಮವನ್ನು ಸೂಚಿಸುತ್ತವೆ (ಕಾಯ). ಮಂಡಲದಲ್ಲಿ ಒಂದು ದೈವವು ಪ್ರತಿಷ್ಠಾಪನೆಗೊಂಡಾಗ ಅದು ಒಂದು ಏಕೀಕರಣ ಪ್ರತಿನಿಧಿಯಂತೆ ವ್ಯಕ್ತವಾಗುತ್ತದೆ.

4. ಯಂತ್ರಗಳಿಗೆ ಸಂಬಂಧಿಸಿದ ಆಚರಣೆಗಳು

ಯಂತ್ರವು ವಸ್ತುಶಃ ಒಂದು ಚಿತ್ರವಿನ್ಯಾಸ. ಆದ್ದರಿಂದ ಅದನ್ನು ಒಂದು ಸಪಾಟಾದ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಚಿತ್ರಿಸುತ್ತಾರೆ. ಅದನ್ನು ಒಂದೋ ತಾಳೆ ಎಲೆ, ಭೂರ್ಜ ಎಲೆ ಅಥವಾ ಕಾಗದದ ಮೇಲೆ ಅಥವಾ ಲೋಹದ ಹಾಳೆಯ ಮೇಲೆ ಅಥವಾ ಕಲ್ಲಿನ ಮೇಲೆ ಬರೆಯುತ್ತಾರೆ. ಲೋಹಗಳಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರಗಳು ಈ ಅನುಕ್ರಮದಲ್ಲೇ ಅತ್ಯುತ್ತಮ ಎಂದು ಹೇಳಲಾಗಿದೆ. ಚಿನ್ನದ ಹಾಳೆಯ ಮೇಲೆ ಬರೆದ ಯಂತ್ರವು ಆಜೀವಪರ್ಯಂತ ಸಮರ್ಥವಾಗಿರುತ್ತದೆ, ಪ್ರಭಾವಿಯಾಗಿರುತ್ತದೆ. ಬೆಳ್ಳಿಯ ಮೇಲೆ ಬರೆದ ಯಂತ್ರವು ಇಪ್ಪತ್ತು ವರ್ಷಗಳ ಕಾಲ ಸಮರ್ಥವಾಗಿರುತ್ತದೆ. ಹಾಗೆಯೇ ತಾಮ್ರದ ಮೇಲೆ ಬರೆದ ಯಂತ್ರಗಳು ಆರು ವರ್ಷಗಳ ಕಾಲ ಪ್ರಭಾವಿಯಾಗಿರುತ್ತವೆ. ಚಿನ್ನದ ಯಂತ್ರವು ಎಲ್ಲಾ ಅಡೆತಡೆಗಳನ್ನೂ ಹೋಗಲಾಡಿಸುತ್ತದೆ ಎಂದು ಹೇಳುತ್ತಾರೆ. ಬೆಳ್ಳಿಯು ಸಾಮಾನ್ಯ ಕಲ್ಯಾಣವನ್ನು ಉಂಟು ಮಾಡುತ್ತದೆ ಮತ್ತು ತಾಮ್ರದ ಯಂತ್ರವು ಖಾಸಗಿ ಯಶಸ್ಸನ್ನು ನೀಡುತ್ತದೆ ಎಂದು ಹೇಳುತ್ತಾರೆ. ಲೋಹದ ಮೇಲೆ ಯಂತ್ರವನ್ನು ಬರೆಯುವಾಗ ಹೇಮಶಲಾಕಾವನ್ನು ಅಂದರೆ ಚಿನ್ನದ ಕಡ್ಡಿಯನ್ನು ಪೆನ್ನಿನ ಹಾಗೆ ಬಳಸುತ್ತಾರೆ.

ಭೂರ್ಜ ಎಲೆಯ ಮೇಲೆ ಬರೆದ ಯಂತ್ರವು ಹನ್ನೆರಡು ವರ್ಷಗಳ ಕಾಲ ಕ್ರಿಯಾಶೀಲವಾಗಿರುತ್ತದೆ ಎಂದು ಹೇಳಲಾಗಿದೆ. ತಾಳೆಗರಿಯ ಮೇಲೆ ಬರೆದ ಯಂತ್ರವು ಆರು ವರ್ಷಗಳ ಕಾಲ ಪ್ರಭಾವಿಯಾಗಿರುತ್ತದೆ ಎಂದು ಹೇಳುತ್ತಾರೆ. ಕಾಗದದ ಮೇಲಿನ ಯಂತ್ರಗಳ ಬಗ್ಗೆ ಗ್ರಂಥಗಳು ಏನೂ ಉಲ್ಲೇಖಿಸಿಲ್ಲ. ಆದರೆ ಕಾಗದವನ್ನು ಮಧ್ಯಕಾಲೀನ ಕಾಲಾವಧಿಯಲ್ಲಿ ವ್ಯಾಪಕವಾಗಿ ಬಳಸಲಾಗಿದೆ. ಇಲ್ಲಿ ಚಿತ್ರಗಳನ್ನು ಬರೆಯಲು ಬಳಸಿದ ಬಣ್ಣದಲ್ಲಿ ಕುಂಕುಮ (ಕ್ರೋಕಸ್ ಸಟೈವಸ್), ರೋಚನಾ (ಕಡು ಹಳದಿ ವರ್ಣದ್ರವ್ಯ), ರಕ್ತಚಂದನ (ಕೆಂಪು ಗಂಧ, ಕ್ಯಾಸಲ್ಪಿನಾ ಸಪ್ಪನ್), ಜಟಾಮಾಂಸಿ (ನಾರ್ಡೋಸ್ಟೈಕ್ಸ್) ಗಳನ್ನು ಸಮಪ್ರಮಾಣದಲ್ಲಿ ಬಳಸುತ್ತಾರೆ. ಲಾಕ್ಷಾ (ಕೆಂಪು ಬಣ್ಣ) ಮತ್ತು ಕಸ್ತೂರಿ ಬಣ್ಣವನ್ನೂ ಬಳಸುತ್ತಾರೆ. ಯಂತ್ರವನ್ನು ಬರೆದಾಗ ಅಥವಾ ಕೊರೆದಾಗ ಅದನ್ನು ಪವಿತ್ರಗೊಳಿಸುವವರೆಗೆ ಹಳದಿ ಬಟ್ಟೆಯಿಂದ ಮುಚ್ಚಬೇಕು ಮತ್ತು ರೇಷ್ಮೆ ದಾರದಿಂದ ಕಟ್ಟಬೇಕು. ಯಂತ್ರವನ್ನು ದೇಹದ ಮೇಲೆ ಧರಿಸುವಾಗ ಅಂಥ ಯಾವ ಶುದ್ಧೀಕರಣದ

ಅಗತ್ಯವಿಲ್ಲ. ಮಕ್ಕಳು ಸಾಮಾನ್ಯವಾಗಿ ತಮ್ಮ ಕುತ್ತಿಗೆಯಲ್ಲಿ ಈ ಯಂತ್ರಗಳನ್ನು ಬಳಸುತ್ತಾರೆ. ಮಹಿಳೆಯರು ಅದನ್ನು ತಮ್ಮ ಎಡಗೈಯಲ್ಲಿ ಕಟ್ಟಿಕೊಳ್ಳುತ್ತಾರೆ. ಪುರುಷರು ಅದನ್ನು ಬಲಗೈ ತೋಳಿಗೆ ಕಟ್ಟಿಕೊಳ್ಳುತ್ತಾರೆ.

ಯಂತ್ರವನ್ನು ಪವಿತ್ರಗೊಳಿಸುವುದು ದೈವನಿರ್ದಿಷ್ಟ ಯಂತ್ರಗಳಲ್ಲಿ ವಿಶೇಷವಾಗಿ ಸೂಚಿತವಾಗಿದೆ. ಇಲ್ಲಿ ಪವಿತ್ರಗೊಳಿಸುವ ವಿಧಿಗಳು ಮೂರ್ತಿಗಳನ್ನು ಪವಿತ್ರಗೊಳಿಸುವ ವಿಧಿಗಳ ಹಾಗೆಯೇ ಇವೆ. ಹೃದಯದಲ್ಲಿ ಶುದ್ಧನಾಗಿರುವವನು, ವರ್ತನೆಯಲ್ಲಿ ಸನ್ನಡತೆಯುಳ್ಳವನು, ನಿಜಭಕ್ತನಾಗಿರುವವನು, ಶಾಂತ ಸ್ವಭಾವದವನು, ಆಗಮಗಳಲ್ಲಿ ನುರಿತವನು ಯಂತ್ರವನ್ನು ಬರೆದಾಗ ಅಥವಾ ಕೊರೆದಾಗ ಅದರಲ್ಲಿ ಅದಾಗಲೇ ಒಂದಷ್ಟು ಶಕ್ತಿಯು ಸಂಚಯನವಾಗಿರುತ್ತದೆ. ಇಲ್ಲಿ ಪವಿತ್ರಗೊಳಿಸುವ ಕ್ರಿಯೆ ಸಾಕಷ್ಟು ಮುಂದುವರೆದಿರುತ್ತದೆ. ಹೀಗಾಗಿ ಇಲ್ಲಿ ಕೆಲವು ಯಂತ್ರ ಸಂಸ್ಕಾರ ಕ್ರಮಗಳನ್ನು ದಾಟಿ ಹೋಗಬಹುದು. ಉದಾಹರಣೆಗೆ ಪಂಚಗವ್ಯದಲ್ಲಿ ಯಂತ್ರವನ್ನು ಮುಳುಗಿಸುವುದು ಮತ್ತು ಅದನ್ನು ಓಂ ಮಂತ್ರವನ್ನು ಜಪಿಸುತ್ತ ಶುದ್ಧಗೊಳಿಸುವುದು.

ಸಾಮಾನ್ಯವಾಗಿ ಯಂತ್ರವನ್ನು ಸಿದ್ಧಪಡಿಸುವ ವಿಧಾನವೆಂದರೆ ಅದನ್ನು ಪಂಚಗವ್ಯದಲ್ಲಿ ಮುಳುಗಿಸುವ ಮೊದಲು ಹೌಂ ಎಂಬ ನಿಗೂಢ ಬೀಜಾಕ್ಷರವನ್ನು 108 ಸಲ ಉಚ್ಚರಿಸುತ್ತ ಅದಕ್ಕೆ ಶಕ್ತಿಯನ್ನು ಸಂಚಯಿಸುವುದು (ಅಭಿಮಂತ್ರಣ); ಆನಂತರ ಅದನ್ನು ಹಾಲು, ಮೊಸರು, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆ ಸ್ನಾನ ಮಾಡಿಸುವುದು ಕೊನೆಗೆ ಅದನ್ನು ನೀರಿನ ಸ್ನಾನದೊಂದಿಗೆ ಮುಕ್ತಾಯಗೊಳಿಸುವುದು. ಆಮೇಲೆ ಯಂತ್ರವನ್ನು ಒಣಗಿಸಿ ಗಾಯತ್ರಿ ಮಂತ್ರವನ್ನು ಹೇಳುತ್ತ ದರ್ಭೆಯಿಂದ (ಕುಶ) ಸ್ಪರ್ಶಿಸುವುದು. ಈ ಆಚರಣೆಗೆ ಸೂಕ್ತವಾದ ಗಾಯತ್ರಿ ಮಂತ್ರವು ಹೀಗಿದೆ:

ಯಂತ್ರ ರಾಜಾಯ ವಿದ್ಮಹೇ। ಮಹಾಯಂತ್ರಾಯ ಧೀಮಹಿ।
ತನ್ನೋ ಯಂತ್ರಃ ಪ್ರಚೋದಯಾತ್ ॥

ಇದಾದ ಮೇಲೆ ಯಂತ್ರದಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡುವ ಅತ್ಯಂತ ಮುಖ್ಯವಾದ ಕ್ರಿಯೆ ನಡೆಯುತ್ತದೆ. ಈಗ ಯಂತ್ರವು ದೈವತ್ವದ ಎಲ್ಲಾ ಅಂಶಗಳನ್ನೂ ಪಡೆದಿರುತ್ತದೆ. ಈಗ ಅದು ಪೂಜೆಗೆ ಅರ್ಹ. ಪವಿತ್ರಗೊಳಿಸುವ ಕ್ರಿಯೆಯನ್ನು ಐದು ಉಪಚಾರಗಳ ಪೂಜೆಯ ಮೂಲಕ ನೆರವೇರಿಸುತ್ತಾರೆ. ಆಮೇಲೆ ಯಂತ್ರವನ್ನು ರೇಶ್ಮೆಯ ಬಟ್ಟೆಯಲ್ಲಿ ಸುತ್ತಿ ರೇಶ್ಮೆ ದಾರದಲ್ಲಿ ಕಟ್ಟುತ್ತಾರೆ. ಆಮೇಲೆ ಅದಕ್ಕೆ 'ಬಲಿ' ನೀಡುವ ಮುನ್ನ ಒಂದು ಸಾವಿರ ಸಲ ಅದಕ್ಕೆ ಸೂಕ್ತವಾದ ಮಂತ್ರವನ್ನು ಜಪಿಸುತ್ತಾರೆ. ಕೊನೆಯಲ್ಲಿ ಹೋಮದ ಮೂಲಕವೂ ಪೂಜೆ ನಡೆಯುತ್ತದೆ. ಆಮೇಲೆ ಅಗತ್ಯವಿದ್ದವರಿಗೆ ಉಡುಗೊರೆ ನೀಡುತ್ತಾರೆ. ವಾಮಕೇಶ್ವರ ತಂತ್ರ ಮುಂತಾದ ಹಲವು ಗ್ರಂಥಗಳಲ್ಲಿ ಈ ಪವಿತ್ರಗೊಳಿಸುವ ಕ್ರಿಯೆಯ ವಿವರಣೆಗಳಿವೆ.

ಯಂತ್ರವು ಹರಿದು ಹೋದರೆ, ತುಂಡಾದರೆ, ಬಿರುಕುಬಿಟ್ಟರೆ, ಸುಟ್ಟುಹೋದರೆ, ನೆಲದ ಮೇಲೆ ಬಿದ್ದರೆ ಅದು ಬಳಕೆಗೆ ಅನರ್ಹವಾಗುತ್ತದೆ. ಅದನ್ನು ಅಶುದ್ಧ ವ್ಯಕ್ತಿಗಳು, ಮಾಟಗಾತಿಯರು ಮುಟ್ಟಿದರೆ ಅಥವಾ ಅದಕ್ಕೆ ಸೂಕ್ತವಲ್ಲದ ಮಂತ್ರವನ್ನು ಹೇಳಿದರೆ ಅದರ ಶಕ್ತಿ ಹೊರಟುಹೋಗುತ್ತದೆ. ಯಂತ್ರವು ಹಾಳಾದರೆ, ಕಳವಾದರೆ ಅಥವಾ ಅಗ್ನಿಸ್ಪರ್ಶಕ್ಕೆ ಒಳಗಾದರೆ ಭಕ್ತನು ಅದಕ್ಕಾಗಿ ಒಂದು ದಿನ ಉಪವಾಸ ಮಾಡಬೇಕು ಮತ್ತು ಮಂತ್ರವನ್ನು ಒಂದು ಲಕ್ಷ ಸಲ ಜಪಿಸಬೇಕು. ಹಾಳಾದ ಅಥವಾ ಸುಟ್ಟುಹೋದ ಯಂತ್ರವನ್ನು ನದಿ ಅಥವಾ ಸಮುದ್ರದಲ್ಲಿ ಬಿಟ್ಟುಬಿಡಬೇಕು.

ಯಂತ್ರವನ್ನು ಬರಿಗೈಯಲ್ಲೇ ಕೊರೆಯುತ್ತಾರೆ, ಯಾವುದೇ ಸಾಧನವನ್ನು ಇಲ್ಲಿ ಬಳಸುವುದಿಲ್ಲ. ಯಂತ್ರದ ಇಡೀ ಚಿತ್ರವನ್ನು, ಆದರ ಆವರಣಗಳನ್ನು ಒಂದೇ ಸಲ ಮುಗಿಸಬೇಕು. ಆಗ ಮನಸ್ಸು ಏಕಾಗ್ರಚಿತ್ತದಲ್ಲಿರಬೇಕು. ಯಂತ್ರವನ್ನು ಬರೆಯುವಾಗ ಬರೆಯುವಾತನು ಸೂಕ್ತ ಮಂತ್ರವನ್ನು ಪದೇ ಪದೇ ಉಚ್ಚರಿಸುತ್ತ ಇರಬೇಕು. ಚಿತ್ರದ ಪ್ರತಿಯೊಂದು ಆವರಣವನ್ನೂ ಒಂದೇ ಗೆರೆಯಲ್ಲಿ ಬರೆದು ಮುಗಿಸಬೇಕು, ಅಂದರೆ ಪೆನ್ನು ಅಥವಾ ಕಡ್ಡಿಯನ್ನು ತಾಳೆ ಗರಿ ಅಥವಾ ಲೋಹದ ಹಾಳೆಯಿಂದ ಎತ್ತಲೇಬಾರದು.

ಯಂತ್ರದ ವಿನ್ಯಾಸವನ್ನು ಬರೆಯುವುದರಲ್ಲಿ ಎರಡು ಬಗೆಗಳಿವೆ: ಕೇಂದ್ರ ಬಿಂದುವಿನಿಂದ ಆರಂಭಿಸಿ ಹೊರಗಣ ಚಿತ್ರಗಳಿಗೆ ಬರುವುದು ಮತ್ತು ಹೊರಗಿನ ಚಿತ್ರಗಳನ್ನು ಬರೆಯುತ್ತ ಕೇಂದ್ರ ಬಿಂದುವನ್ನು ತಲುಪುವುದು. ಮೊದಲನೆಯ ವಿಧಾನವನ್ನು ವಿಸ್ತಾರ ವಿನ್ಯಾಸ ಎಂದು ಕರೆಯುತ್ತಾರೆ. ಎರಡನೆಯ ವಿನ್ಯಾಸವನ್ನು ಸಂಕೋಚವಿನ್ಯಾಸ ಎಂದು ಕರೆಯುತ್ತಾರೆ. ಪರ್ಯಾಯವಾಗಿ ಅವುಗಳನ್ನು ಸೃಷ್ಟಿ ಮತ್ತು ಸಂಹಾರ ಎಂದೂ ಕರೆಯುತ್ತಾರೆ. ಸೃಷ್ಟಿ ಎಂದರೆ ಕೇಂದ್ರ ಬಿಂದುವಿನಿಂದ ದೂರ ಹೋಗುವುದು, ಸಂಹಾರ ಎಂದರೆ ಕೇಂದ್ರಬಿಂದುವಿನತ್ತ ಚಲಿಸುವುದು. ಧ್ಯಾನಕ್ಕೆ ಸೂಕ್ತವಾದ ಯಂತ್ರಗಳು ಸಾಮಾನ್ಯವಾಗಿ ಸೃಷ್ಟಿಕ್ರಮದಲ್ಲಿ ರಚಿತವಾಗುತ್ತವೆ. ಇತರೆ ಎಲ್ಲಾ ಯಂತ್ರಗಳೂ ಸಂಹಾರ ಕ್ರಮದಲ್ಲಿ ರಚಿತವಾಗುತ್ತವೆ.

ಚಿತ್ರವನ್ನು ಬರೆದ ಮೇಲೆ ಮಾಡಬೇಕಾದ ಅತ್ಯಂತ ಮುಖ್ಯವಾದ ಕೆಲಸ ಎಂದರೆ ಯಂತ್ರದ ವಿನ್ಯಾಸದಲ್ಲಿ ಬೀಜಾಕ್ಷರಗಳನ್ನು ಮತ್ತು ಮಂತ್ರವನ್ನು ಸ್ಥಾಪಿಸುವುದು. ಈ ವಿವರಗಳೊಂದಿಗೆ ಸಂಸ್ಕೃತ ಭಾಷೆಯ ಇಡೀ ವರ್ಣಮಾಲೆಯು (ಲೌಕಿಕ ಜಗತ್ತಿನ ವಸ್ತುಗಳಿಗೆ ಚಿಂತನಾ ಜಗತ್ತಿನ ವಸ್ತುಗಳನ್ನು ಸಂಪರ್ಕಿಸುವುದನ್ನು ಪ್ರತಿನಿಧಿಸುವ) ಯಂತ್ರದೊಳಗೆ ಅಡಕವಾಗುತ್ತದೆ. ಯಂತ್ರದ ಆವರಣಗಳ ವಿನ್ಯಾಸಗಳು ಎಲ್ಲಾ ಐವತ್ತೂ ಅಕ್ಷರಗಳನ್ನೂ ಬರೆಯಲು ಅನುವು ಮಾಡದಿದ್ದರೆ ಅವುಗಳನ್ನು ಸಂಕೋಚ ಮಂತ್ರದಲ್ಲಿ ಸೂತ್ರಬದ್ಧವಾಗಿ ಬರೆಯಲಾಗುತ್ತದೆ: 'ಓಂ ಅಕಚಟತಪಯಶಹಲಓಂ'. ಇದನ್ನು ವ್ಯಂಜನ ಮತ್ತು ಸ್ವರಗಳ ಐದು ಅಕ್ಷರಗಳ ಗುಂಪಿನ ಮೊದಲ ಅಕ್ಷರಗಳನ್ನು

ತೆಗೆದುಕೊಂಡು ಎರಡೂ ಬದಿಗೆ ಪ್ರಣವಾಕ್ಷರವನ್ನು ಇಟ್ಟು ರೂಪಿಸಲಾಗಿದೆ. 'ಅ' ವು ಹನ್ನೊಂದು ಸ್ವರಗಳನ್ನು ಬಿಂಬಿಸುತ್ತದೆ. ಅನಂತರದ ಐದು ಅಕ್ಷರಗಳು ವ್ಯಂಜನಗಳ ಗುಂಪುಗಳನ್ನು ಪ್ರತಿನಿಧಿಸುತ್ತವೆ. ಕೊನೆಯ ನಾಲ್ಕು ಅಕ್ಷರಗಳು 'ವಾಯು', 'ಅಗ್ನಿ', 'ನೀರು' ಮತ್ತು 'ಭೂಮಿ'ಯನ್ನು ಬಿಂಬಿಸುತ್ತವೆ. ಹೀಗೆ ಇಡೀ ಜಗತ್ತಿಗೆ ಮೂಲಾಧಾರದ ನಾಲ್ಕು ಅಂಶಗಳನ್ನು ಮತ್ತು ಇಡೀ ಮನೋಜಗತ್ತಿನಿಂದ ಮೂಡುವ ಆಕಾಶ ಎಂಬ ಪದವನ್ನು ಬಳಸಿಕೊಂಡು ಈ ಸೂತ್ರದಲ್ಲಿ ಅಳವಡಿಸಲಾಗಿದೆ.

ವಾತುಲ ತಂತ್ರವು ಯಂತ್ರಗಳಲ್ಲಿ ಸೇರುವ ವರ್ಣಮಾಲೆಯ ಅಕ್ಷರಗಳ ನಿಗೂಢತೆಯನ್ನು ವಿವರಿಸುತ್ತದೆ; ಅಕ್ಷರಗಳನ್ನು 'ಪುರುಷ', 'ಸ್ತ್ರೀ' ಮತ್ತು 'ನಪುಂಸಕ' ಎಂದು ವರ್ಗೀಕರಿಸಲಾಗಿದೆ. ಸ್ವರಗಳಲ್ಲಿ 'ಅ', 'ಇ', 'ಉ', 'ಏ', 'ಓ' ಮತ್ತು 'ಅಂ' ಗಳು ಪುಲ್ಲಿಂಗವಾದರೆ, 'ಆ', 'ಈ', 'ಊ', 'ಐ', 'ಔ' ಮತ್ತು 'ಅಃ' ಗಳು ಸ್ತ್ರೀಲಿಂಗವಾಗುತ್ತವೆ. 'ಋ', 'ೠ', 'ಲೃ' ಮತ್ತು 'ಲೄ' ಗಳು ನಪುಂಸಕ ಲಿಂಗವಾಗುತ್ತವೆ. ವ್ಯಂಜನಗಳಲ್ಲಿ 'ಕ', 'ಗ, 'ಚ', 'ಜ', 'ಟ', 'ಡ', 'ತ', 'ಧ', 'ಪ', 'ಬ', 'ಶ' ಮತ್ತು 'ಹ' ಗಳು ಪುಲ್ಲಿಂಗವಾದರೆ 'ಖ', 'ಘ, 'ಛ', 'ಝ', 'ಢ', 'ಠ', 'ಥ', 'ಧ', 'ಫ', 'ಭ', 'ದ', 'ಸ' ಗಳು ಸ್ತ್ರೀಲಿಂಗವಾಗುತ್ತವೆ. 'ಙ', 'ಞ', 'ಣ', 'ನ', 'ಮ', 'ಯ', 'ರ', 'ಲ', 'ವ' ಮತ್ತು 'ಳ' ಗಳು ನಪುಂಸಕ ಲಿಂಗವಾಗುತ್ತವೆ. ಹೀಗೆ ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳಲ್ಲಿ ತಲಾ ಆರು ಸ್ವರಗಳು ಮತ್ತು ಹನ್ನೆರಡು ವ್ಯಂಜನಗಳು, ಹೀಗೆ ಹದಿನೆಂಟು ಅಕ್ಷರಗಳಿವೆ. ನಪುಂಸಕ ಲಿಂಗದಲ್ಲಿ ನಾಲ್ಕು ಸ್ವರಗಳು ಮತ್ತು ಹತ್ತು ವ್ಯಂಜನಗಳು, ಒಟ್ಟು ಹದಿನಾಲ್ಕು ಅಕ್ಷರಗಳಿವೆ. ನಪುಂಸಕ ಲಿಂಗವನ್ನು ಹೊರತು ಪಡಿಸಿದರೆ ಹನ್ನೆರಡು ಸ್ವರಗಳು ಮತ್ತು ಇಪ್ಪತ್ತನಾಲ್ಕು ವ್ಯಂಜನಗಳು ಸೇರಿ ಮೂವತ್ತಾರು ಅಕ್ಷರಗಳಾಗುತ್ತವೆ. ಈಗ ಈ ಸಂಖ್ಯೆಗಳು (4, 6, 10, 12, 16, 18, 24 ಮತ್ತು 36) ಯಂತ್ರವನ್ನು ರೂಪಿಸುವ ಜ್ಯಾಮಿತಿಯ ವಿನ್ಯಾಸವನ್ನು ಸೂಚಿಸುತ್ತವೆ. ಸೈದ್ಧಾಂತಿಕವಾಗಿ ಒಂದು ಯಂತ್ರವು ಪುಲ್ಲಿಂಗ (ಶಿವ) ಮತ್ತು ಸ್ತ್ರೀಲಿಂಗ (ಶಕ್ತಿ) ರೂಪದ ಅಸ್ತಿತ್ವದ ಪ್ರಾತಿನಿಧಿಕ ವಸ್ತು. ಈ ಎರಡೂ ನೀತಿಗಳ ಪರಸ್ಪರ ಪ್ರಕ್ರಿಯೆಯಿಂದ ವಿವಿಧ ಯಂತ್ರಗಳು ಮೂಡುತ್ತವೆ. ಸ್ವರಗಳಿಗೆ ಸಂಬಂಧಿಸಿದ ಅಕ್ಷರಗಳನ್ನು ಸಾಮಾನ್ಯವಾಗಿ ಮಹಾದೇವತೆಯ ಕಲೆ ಎಂದು ಕರೆಯುತ್ತಾರೆ.

ತಂತ್ರವೂ ಹೀಗೆಯೇ ವರ್ಣಮಾಲೆಯ ಸ್ವರಗಳು ಮತ್ತು ಮೂಲವಸ್ತುಗಳ ನಡುವೆ ಇರುವ ಸಂಬಂಧವನ್ನು ವಿವರಿಸುತ್ತದೆ. ಮೊದಲ ಮೂರು ಅಕ್ಷರಗಳು ('ಅ', 'ಆ' ಮತ್ತು 'ಇ') ಆಕಾಶದ ಅಂಶಗಳು. ನಂತರದ ಮೂರು ('ಈ', 'ಉ' ಮತ್ತು 'ಊ') ವಾಯುವಿನ ಅಂಶಗಳು. ನಂತರದ ಮೂರು (ಋ, ೠ ಮತ್ತು ಲೃ) ಅಗ್ನಿಯ ಅಂಶಗಳು. ನಂತರದ ಮೂರು (ಏ, ಐ ಮತ್ತು ಓ) ನೀರಿನ ಅಂಶಗಳು; ಕೊನೆಯ ಮೂರು ('ಔ', 'ಅಂ' ಮತ್ತು 'ಅಃ') ಭೂಮಿಯ ಅಂಶಗಳು. ಆಕಾಶದಿಂದ ಭೂಮಿಯವರೆಗಿನ ವಸ್ತುಗಳು ಲೌಕಿಕವಾಗಿರುವಂತೆ 'ಅ' ದಿಂದ 'ಅಃ'ದ ವರೆಗಿನ

ಅಕ್ಷರಗಳೂ ಅಭಿವ್ಯಕ್ತಿಯುಕ್ತವಾಗಿವೆ. 'ಅ' ಸ್ವರವು ಎಲ್ಲಾ ದೈವಗಳೂ ಅವಿಚ್ಛಿನ್ನ ಸ್ಥಿತಿಯಲ್ಲಿ ಇರುವುದನ್ನು ಬಿಂಬಿಸುತ್ತದೆ. ಎರಡನೆಯ ಅಕ್ಷರ 'ಆ'ವು ಉತ್ಪಾದನೆಯ ಮತ್ತು ಪ್ರಕ್ಷೇಪಣೆಯ ಪರಾಶಕ್ತಿಯನ್ನು ಬಿಂಬಿಸುತ್ತದೆ. 'ಇ'ಯು ವಿಶ್ವವನ್ನು ಆಳುತ್ತಿರುವ ವಿಷ್ಣುವನ್ನು ಬಿಂಬಿಸುತ್ತದೆ. 'ಈ' ಎಂದರೆ ಮಾಯಾ, ಸೃಷ್ಟಿತತ್ವ, 'ಉ' ಅಂದರೆ ವಾಸ್ತು, ಅಥವಾ ಲೌಕಿಕ ಆಧಾರ. 'ಊ' ಎಂದರೆ ಭೂ ಅಥವಾ ನೆಲ. 'ಋ' ಎಂದರೆ ಬ್ರಹ್ಮ ಪ್ರಜಾಪತಿ. 'ೠ'ಯು ಶಿಖಂಡಿನ್. 'ಲೃ' ಎಂದರೆ ಅಶ್ವಿನಿ ದೇವತೆಗಳು. 'ಎ' ಎಂದರೆ ವೀರಭದ್ರ ಅಥವಾ ತೊಡಕುಗಳನ್ನು ನಿವಾರಿಸುವವನು. 'ಐ' ಎಂದರೆ ಸರಸ್ವತಿ ಅಥವಾ ಮಾತಿನ ಅಭಿವ್ಯಕ್ತಿ. 'ಒ' ಎಂದರೆ ಈಶ್ವರ ಅಥವಾ ಘಟನೆಗಳ ಕಾರಣಕರ್ತ. 'ಓ' ಎಂದರೆ ಆದಿಶಕ್ತಿ, ವಿಶ್ವದ ಎಲ್ಲಾ ಶಕ್ತಿಗಳಿಗೂ ಮೂಲ. 'ಅಂ' ಎಂದರೆ ಭೈರವ, ಆದಿಶಕ್ತಿಯ ಪುರುಷ ಸ್ವರೂಪ. ಮತ್ತು 'ಅಃ' ಎಂದರೆ ಕಾಲರುದ್ರ.

ಇಲ್ಲಿ ವರ್ಣಮಾಲೆಯನ್ನು ಇನ್ನೊಂದು ಬಗೆಯಲ್ಲೂ ವರ್ಗೀಕರಿಸುತ್ತಾರೆ. 16 ಸ್ವರಗಳನ್ನು ರಾಜಸ ಅಂದರೆ 'ಕ್ರಿಯಾಶೀಲ' ಎಂದು ಕರೆಯುತ್ತಾರೆ. ಐದೈದು ಸ್ವರಗಳ (25) ಗುಂಪುಗಳನ್ನು ತಾಮಸ ಅಂದರೆ 'ಕತ್ತಲಿನವು' ಎಂದು ಕರೆಯುತ್ತಾರೆ. ಹಾಗೆಯೇ 'ಶ', 'ಷ', 'ಸ, 'ವ', 'ಲ', 'ರ', 'ಯ', 'ಮ' – ಈ ಎಂಟು ವ್ಯಂಜನಗಳನ್ನು ಸಾತ್ತ್ವಿಕ ಅಂದರೆ 'ಒಳ್ಳೆಯ ಮತ್ತು ಹೊಳಪಿನವು' ಎಂದು ಕರೆಯುತ್ತಾರೆ. ವಾತುಲ ತಂತ್ರದಲ್ಲಿ ವಿವರಿಸಿರುವ ಯಂತ್ರವು ಅಕ್ಷರಗಳನ್ನು ಈ ಸರಣಿಯಲ್ಲಿ ಜೋಡಿಸಿದೆ: ಕೇಂದ್ರ ಪ್ರದೇಶದ ಹೊರಗಿನ ಮೊದಲ ಆವರಣದಲ್ಲಿ ಎಂಟು ದಳಗಳ ಪದ್ಮವಿರುತ್ತದೆ. ಈ ದಳಗಳಲ್ಲಿ ಎಂಟು ಸಾತ್ತ್ವಿಕ ಅಕ್ಷರಗಳನ್ನು ಕೊರೆದಿರುತ್ತಾರೆ. ನಂತರದ ಹೊರ ಆವರಣದಲ್ಲಿ ಹದಿನಾರು ದಳಗಳ ಕಮಲವಿರುತ್ತದೆ. ಇಲ್ಲಿ ರಾಜಸ ಅಕ್ಷರಗಳನ್ನು ಕೊರೆದಿರುತ್ತಾರೆ. ಮೂರನೆಯ ಆವರಣದಲ್ಲಿ ಇಪ್ಪತ್ತೈದು ದಳಗಳ ಕಮಲವಿರುತ್ತದೆ. ಅವುಗಳೊಳಗೆ ತಾಮಸ ಅಕ್ಷರಗಳನ್ನು ಕೊರೆದಿರುತ್ತಾರೆ. 'ಸಾತ್ತ್ವಿಕ' ಅಕ್ಷರಗಳು ಕೇಂದ್ರಬಿಂದುವಿಗೆ ತೀರಾ ಹತ್ತಿರದಲ್ಲಿ ಇರುತ್ತವೆ. ಕೇಂದ್ರ ಪ್ರದೇಶದಲ್ಲಿ ನಾಲ್ಕು ದಳಗಳ ಕಮಲವಿರುತ್ತದೆ. ಅದರ ಪ್ರತಿಯೊಂದು ದಳವೂ ನಾಲ್ಕು ಬೀಜಾಕ್ಷರಗಳನ್ನು ಬಿಂಬಿಸುತ್ತದೆ. ಪೂರ್ವದಲ್ಲಿ 'ಸ', ದಕ್ಷಿಣದಲ್ಲಿ 'ಅ', ಪಶ್ಚಿಮದಲ್ಲಿ 'ಐ' ಮತ್ತು ಉತ್ತರದಲ್ಲಿ 'ಕ್ಷ'. ಈ ನಾಲ್ಕು ಬೀಜಾಕ್ಷರಗಳು ಶಕ್ತಿ (ಸಂರಕ್ಷಿಸಲು ಬೇಕಾದ ಶಕ್ತಿ), ಶಿವ (ಪರಮೋನ್ನತ ದೈವ), ಆತ್ಮನ್ (ಸ್ವಯಂ ಆತ್ಮ) ಮತ್ತು ವಿದ್ಯಾ (ಜ್ಞಾನ) ಇವುಗಳನ್ನು ಅನುಕ್ರಮವಾಗಿ ಬಿಂಬಿಸುತ್ತವೆ. ಅವುಗಳನ್ನು ಪರ್ಯಾಯವಾಗಿ ಸ್ಥಿತಿ, ಮುಕ್ತಿ, ಸಿದ್ಧಿ ಮತ್ತು ಸುಖ ಎಂದು ಕರೆಯುತ್ತಾರೆ. ಯಂತ್ರದ ಕೇಂದ್ರಬಿಂದುವಿನಲ್ಲಿ 'ಹ' ಇರುತ್ತದೆ. ಅದು ಶಿವನ ಬೀಜಾಕ್ಷರ. ಅದು ಶಿವನ ಯಂತ್ರ.

ಇನ್ನು ಹಲವು ಯಂತ್ರಗಳಲ್ಲಿ ವರ್ಣಮಾಲೆಯ ಅಕ್ಷರಗಳನ್ನು ಕೊರೆಯದಿದ್ದರೂ ಅವುಗಳನ್ನು ಪರೋಕ್ಷವಾಗಿ ಬಿಂಬಿಸಿರುತ್ತಾರೆ. ಅವುಗಳು ವಿವಿಧ ಬಗೆಯ ಮಂತ್ರಗಳನ್ನೂ ಹೊಂದಿರಬಹುದು. ಇಂಥ ಯಂತ್ರಗಳಿಗೆ ಸಂಬಂಧಿಸಿದ ಆಚರಣೆಗಳು ಪುರಶ್ಚರಣ

(ಸೂಕ್ತ ಮಂತ್ರದ ಮಾರ್ಗದರ್ಶನದಲ್ಲಿ ದೈವದತ್ತ ಚಲಿಸುವುದು)ದ ರೂಪವನ್ನು ಪಡೆಯುತ್ತವೆ. ಇದರ ಉದ್ದೇಶ ತನ್ನದೇ ಆಯ್ಕೆಯಲ್ಲಿ ದೈವದ ಮಂತ್ರವನ್ನು ಉಚ್ಚರಿಸುವುದು (ಶ್ವೇತ ದೇವತಾ ಮಂತ್ರ ಸಿದ್ಧಿ). ಇದು ಐದು ಸರಣಿಗಳಲ್ಲಿ ನಡೆಯುತ್ತದೆ: ಜಪ (ಉದ್ದೇಶಿತ ಮಂತ್ರವನ್ನು ಪುನರುಚ್ಚರಿಸುವುದು), ಹೋಮ (ಅಗ್ನಿಗೆ ಸಮರ್ಪಿಸುವುದು), ತರ್ಪಣ (ನೀರಿಗೆ ಸಮರ್ಪಿಸುವುದು), ಅಭಿಷೇಕ (ಸ್ನಾನ ಮಾಡಿಸುವುದು) ಮತ್ತು ಭೋಜನ (ಅಗತ್ಯವಿದ್ದವರಿಗೆ ಭೋಜನ ನೀಡುವುದು) ಯೋಗಿನಿ ಹೃದಯ. ಈ ಪೂಜೆಯನ್ನು ಮಾಡಬೇಕಾದ ಸ್ಥಳ, ಸಮಯ, ಕ್ರಮ, ನಿರ್ಬಂಧ, ಮತ್ತು ಪರವಾನಗಿ ಇರುವ ಬದಲಾವಣೆಗಳನ್ನು ಸೂಚಿಸುವ ವಿವರಗಳನ್ನು ಹಲವು ಗ್ರಂಥಗಳಲ್ಲಿ (ಪುರಶ್ಚರಣ ಚಂದ್ರಿಕಾ, ರಹಸ್ಯ ಪುರಶ್ಚರಣ ವಿಧಿ ಇತ್ಯಾದಿ) ಕಾಣಬಹುದು. ಇವುಗಳನ್ನು 'ಪಂಚವಿಧ ಪೂಜೆ' ಅಥವಾ 'ಪಂಚಾಂಗೋಪಾಸನ' ಎಂದು ಕರೆಯುತ್ತಾರೆ.

ಪ್ರತಿಯೊಂದು ಮಂತ್ರವೂ ಈ ಕೆಳಗಿನ ಅಂಶಗಳನ್ನು ಹೊಂದಿದೆ ಎನ್ನಲಾಗಿದೆ: ಮಂತ್ರವನ್ನು ಬರೆದ ಋಷಿ, ಮಂತ್ರವನ್ನು ಬರೆದ ಛಂದಸ್ಸು, ಮಂತ್ರವು ಉದ್ದೇಶಿಸಿರುವ ದೇವತೆ, ಮಂತ್ರದ ಬೀಜಾಕ್ಷರ, ಮಂತ್ರದ ಶಕ್ತಿ, ಮಂತ್ರವನ್ನು ಬಂಧಿಸಿಟ್ಟ ದಂಡ ಇತ್ಯಾದಿ. ಉದಾಹರಣೆಗೆ, ಉದ್ದೀಪನ ವಿಧಾನ ತಿಳಿಸುವಂಥದ್ದು-ಕೀಲಕ ಮಂತ್ರದ ಉದ್ದೇಶ ತಿಳಿಸುವಂಥದ್ದು, ವಿನಿಯೋಗ ಮಂತ್ರವು ಒಂದು ಮಾನವ ಸ್ವರೂಪವನ್ನು ಹೊಂದಿದೆ ಎಂದು ಹೇಳಲಾಗುತ್ತದೆ. ಋಷಿಯು ಅದರ ತಲೆ, ಛಂದಸ್ಸು ಅದರ ಬಾಯಿ (ಅಥವಾ ಮುಖ), ದೈವವು ಅದರ ಹೃದಯ, ಬೀಜವು ಅದರ ಹೊಕ್ಕಳು, ಶಕ್ತಿಯು ಅದರ ಗೌಪ್ಯಾಂಗ ಮತ್ತು ದಂಡವು ಅದರ ಕಾಲು. ಮಂತ್ರದಿಂದ ಜಾಗೃತವಾಗುವ ದೈವವು ಮಂತ್ರದ ಸ್ವರೂಪವನ್ನು ಪಡೆಯುತ್ತದೆ ಮತ್ತು ಮಂತ್ರವು ವಿಶ್ವದ ಸ್ವರೂಪವನ್ನು ಪಡೆಯುತ್ತದೆ:

''ಮಂತ್ರಸ್ ತು ದೇವತಾರೂಪಂ ಮಂತ್ರರೂಪಂ ಇದಂ ಜಗತ್ ''

(ವಾತುಲಾಗಮ)

ಯಂತ್ರವು ವಿಶ್ವವನ್ನು ಪ್ರತಿನಿಧಿಸುತ್ತದೆ. ಹೀಗೆ ಇಲ್ಲಿ ದೈವ ಮತ್ತು ಮಂತ್ರ, ಮಂತ್ರ ಮತ್ತು ವಿಶ್ವದ ನಡುವೆ ಸಂತುಲನೆಯಿದೆ.

ಮಂತ್ರವು (ಮೇಲೆ ಹೇಳಿದ ಯಾವ ಅಂಶಗಳೇ ಇರಲಿ) ಐದು ಮೊಳಕೆಗಳನ್ನು ಹೊಂದಿದೆ (ಪಂಚ ಪಲ್ಲವ). ಒಂದು ಮೊಳಕೆಯು ಮಂತ್ರವು ಮುಗಿಯುವುದನ್ನು ಸೂಚಿಸುತ್ತದೆ. ಮಂತ್ರದ ದೇಹವು ಬೀಜಾಕ್ಷರಗಳನ್ನು ಮತ್ತು ದೈವದ ಹೆಸರನ್ನು ಹೊಂದಿರುತ್ತದೆ. ದೈವದ ಬಗ್ಗೆ ಭಕ್ತನು ಹೊಂದಿರುವ ಅಭಿಪ್ರಾಯವನ್ನು ಮಂತ್ರದ ಕೊನೆಯಲ್ಲಿ ಸ್ಫುಟೋಚ್ಚಾರಣೆ ಮಾಡಬೇಕು. ಅದೇ ಪಲ್ಲವ. ಈ ಅಂಶವಿಲ್ಲದೆ ಮಂತ್ರವು

ನಗ್ನ ಎನ್ನಿಸಿಕೊಳ್ಳುತ್ತದೆ. (ಪಲ್ಲವೇನ ವಿನಾ ಮಂತ್ರೋ ನಗ್ನಸ್ ತು ಪರಿಕೀರ್ತಿತಾಃ). ದೈವವನ್ನು ಕುರಿತಂತೆ ಭಕ್ತನು ಯಾವ ನಿಲುವನ್ನು ಹೊಂದಿದ್ದಾನೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದಲ್ಲಿ ದೈವವನ್ನು ಸೂಕ್ತವಾದ ರೀತಿಯಲ್ಲಿ ಪ್ರತಿನಿಧಿಸಿದಂತಾಗುವುದಿಲ್ಲ. ಮಂತ್ರವು ಹೊಂದಿರಬಹುದಾದ ಐದು ಮೊಳಕೆಗಳು ಹೀಗಿವೆ: 'ನಮಃ', 'ಸ್ವಾಹಾ', 'ವೌಷಟ್', 'ಹೂಂ', 'ಫಟ್', ಪ್ರತಿಯೊಂದಕ್ಕೂ ತನ್ನದೇ ಆದ ವಿಶೇಷ ಮಹತ್ವವಿದೆ ಮತ್ತು ಸಾಂದರ್ಭಿಕ ಔಚಿತ್ಯತೆಯಿದೆ. ನಮಃ ಎಂದರೆ ನಮಸ್ಕಾರ. ಸ್ವಾಹಾ ಎಂದರೆ ನೈವೇದ್ಯ ಮಾಡಿಕೊಳ್ಳುವುದು. ವೌಷಟ್ ಎಂದರೆ ರಕ್ಷಿಸಲು ಇಷ್ಟವಿದೆ ಎಂದು ಹೇಳುವುದು. ಹೂಂ ಎಂದರೆ ಕೆಟ್ಟ ಶಕ್ತಿಗಳನ್ನು ಹೊಡೆದೋಡಿಸುವ ಕರೆ ಮತ್ತು ಫಟ್ ಎಂದರೆ ತೊಡಕುಗಳನ್ನು ಒಡೆಯುವುದು.

ಮಂತ್ರದ ನಂತರ ಸಾಮಾನ್ಯವಾಗಿ ಸ್ಖಲನದ ಕ್ರಿಯೆ ನಡೆಯುತ್ತದೆ. ಒಪ್ಪಿಸಿಕೊಳ್ಳುವ, ದೈವವನ್ನು ಒಪ್ಪಿಕೊಳ್ಳುವ ಮತ್ತು ದೈವದ ಗಮನವನ್ನು ಸೆಳೆಯುವ ಮಹತ್ವವಿರುವ 'ಓಂ'ನಿಂದಲೇ ಈ ಮಂತ್ರವು ಆರಂಭವಾಗುತ್ತದೆ. 'ಓಂ' ಎನ್ನುವುದು ದೈವದ ತಲೆಯ ಹಾಗೆ ಮತ್ತು ಪಲ್ಲವವು ದೈವದ ಕಾಲಿನ ಹಾಗೆ ಎಂದು ಹೇಳಲಾಗುತ್ತದೆ. 'ಓಂ' ನಂತರ ದೈವನಿರ್ದಿಷ್ಟವಾದ ಬೀಜಾಕ್ಷರವನ್ನು ಹೇಳಲಾಗುತ್ತದೆ. ಆಮೇಲೆ ದೈವದ ಹೆಸರನ್ನು ಉಚ್ಚರಿಸಲಾಗುತ್ತದೆ. ಹೀಗೆ ಓಂ ಮತ್ತು ಪಲ್ಲವಗಳು ಎಲ್ಲಾ ಮಂತ್ರಗಳಲ್ಲಿ ಸಾಮಾನ್ಯ. ಮಂತ್ರಗಳು ದೈವವನ್ನು ಚಿತ್ರೀಕರಿಸಿದ ವಿಷಯದಲ್ಲಿ ಮಾತ್ರ ಭಿನ್ನವಾಗಿರುತ್ತವೆ. ಯಂತ್ರಗಳ ಕೇಂದ್ರ ಬಿಂದುವನ್ನು ಸಾಮಾನ್ಯವಾಗಿ 'ಓಂ'ನ್ನು ಬರೆಯಲು ಬಳಸುತ್ತಾರೆ. ಹಾಗೆಯೇ ತೀರಾ ಹೊರಗಿರುವ ಆವರಣದಲ್ಲಿ (ಚತುಷ್ಕೋನ ಅಥವಾ ವೃತ್ತ) ಪಲ್ಲವವನ್ನು ಗುರುತಿಸುತ್ತಾರೆ. ಈ ಎರಡು ಮಿತಿಗಳಲ್ಲಿ ದೈವವನ್ನು ಯಂತ್ರದ ದೇಹವಾಗಿ ಚಿತ್ರಿಸುತ್ತಾರೆ.

ಸೂಕ್ತ ಮಂತ್ರವನ್ನು ಪುನರುಚ್ಚರಿಸುವುದರೊಂದಿಗೆ ಈ ಆಚರಣೆಗಳು ಸಾಮಾನ್ಯವಾಗಿ (ಆದರೆ ಕಡ್ಡಾಯವಲ್ಲ) ಸೂಕ್ತವಾದ ಗೀತ, ನಾಮಾವಳಿ, ಹೊಗಳಿಕೆ ಮತ್ತು ಪ್ರಾರ್ಥನೆಯ ಸ್ತವಗಳ, ರಕ್ಷಣಾ ಕವಚಗಳ, ಮತ್ತು ಹೃದ್ಯ ಸೂತ್ರಗಳ ಉಚ್ಚಾರಣೆಗಳನ್ನು ಒಳಗೊಂಡಿವೆ. ಇವೆಲ್ಲವೂ ಯಂತ್ರದಲ್ಲಿ ಪ್ರತಿನಿಧಿತವಾದ ದೈವಕ್ಕೆ ನಿರ್ದಿಷ್ಟವಾಗಿರುತ್ತದೆ.

ನಿರ್ದಿಷ್ಟ ಮಂತ್ರದ ಪುರಶ್ಚರಣದ ಜತೆಗೇ, ಆಯಾ ದೇವತೆಗಳ ಯಂತ್ರಗಳ ಪೂಜಾ ವಿಧಿಗಳನ್ನೂ ಅನುಸರಿಸಬೇಕಾಗುತ್ತದೆ. ಗೀತ ಎಂದು ಕರೆಯಲ್ಪಡುವ ಪೂರಕ ಪಠ್ಯ, ನಾಮಾವಳಿ, ಸ್ತವ, ಕವಚ ಹಾಗೂ ಹೃದಯ.

5. ವಿವಿಧ ಯಂತ್ರಗಳು



ಅಘನಿರ್ಮೋಚನ ಮಂಡಲ



ಭದ್ರಕ-ಮಂಡಲ



ಸದಧ್ವ ಮಂಡಲ



ನವಗ್ರಹ ಮಂಡಲ



ಸುಭದ್ರ ಮಂಡಲ



ವಸುಗರ್ಭ ಮಂಡಲ



ಧರ್ಮಾಖ್ಯ ಮಂಡಲ



ಆಯುಷ್ಯ ಮಂಡಲ



ಸರ್ವಕಾಮಪ್ರದ ಮಂಡಲ



ಲತಾಲಿಂಗೋದ್ಭವ ಮಂಡಲ



ವಿವೇಕ ಮಂಡಲ



ಅಮಿತ್ರಘ್ನ ಮಂಡಲ



ಸ್ವಸ್ತಿಕ ಮಂಡಲ



ಪೌಷ್ಠಿಕ ಮಂಡಲ

ಚಕ್ರಾಬ್ಜ ಮಂಡಲ

(ಓಂ ನಮೋ ಭಗವತೇ ವಾಸುದೇವಾಯ)

ಅನ್ನಪೂರ್ಣ ಯಂತ್ರ

(ಓಂ ಹ್ರೀಂ ಶ್ರೀಂ ಕ್ಲೀಂ ನಮೋ ಭಗವತಿ ಮಹೇಶ್ವರಿ ಅನ್ನಪೂರ್ಣೇ ಸ್ವಾಹಾ ॥)



ರಾಶಿ ಮಂಡಲ



ಭೂತ ಮಂಡಲ



ಸೌಭಾಗ್ಯ ಮಂಡಲ



ಬಲಭದ್ರ ಮಂಡಲ



ಮಹಾಮೇರು ಪ್ರಸ್ತರ ಶ್ರೀಚಕ್ರ



ಶ್ರೀಚಕ್ರ



ಶಾಂತಿ ಯಂತ್ರ

(ಓಂ ರಿಂ ಓಂ ಫಟ್ ಸ್ವಾಹಾ)



ಬಾಲಾತ್ರಿಪುರ ಸುಂದರೀ ಯಂತ್ರ - ಧಾರಣಯೋಗ್ಯವಾದದ್ದು

ಶ್ರೀಯಂತ್ರದಲ್ಲಿ ಅಷ್ಟಯೋಗಿನಿಯರು

ಕಾಮದೇವ ಯಂತ್ರ

ನಮಃ ಕಾಮದೇವಾಯ ಸರ್ವಜನಪ್ರಿಯಾಯ ಸರ್ವಜನ ಸಂಮೋಹನಾಯ ಜ್ವಲ ಜ್ವಲ ಪ್ರಜ್ವಲ ಪ್ರಜ್ವಲ
ಸರ್ವಾಭೀಷ್ಟಂ ಸಾಧಯ ಸಾಧಯ ಸರ್ವಜನಸ್ಯ ಹೃದಯಾಂ ವಶಂ ಕುರು ಕುರು ಸ್ವಾಹಾ ||
ಕಾಮದೇವಾಯ ವಿದ್ಮಹೇ ಪುಷ್ಪಬಾಣಾಯ ಧೀಮಹಿ।
ತನ್ನೋಽನಂಗಃ ಪ್ರಚೋದಯಾತ್। (ಕಾಮದೇವ ಗಾಯತ್ರಿ)



ವಾರ್ತಾಲೀವಾರಾಹೀ ಯಂತ್ರ

ಧೂಂ ಧೂಂ ಧೂಮಾವತಿ ಸ್ವಾಹಾ । ವಾರ್ತಾಲೀ ವಾರಾಹೀ
ದೇವತಾ, ಮಮಾಭೀಷ್ಟ ಸಿದ್ಧಯೇ ಭವತು ಹ್ರೀಂ ಫಟ್ ಸ್ವಾಹಾ ॥



ಅಮೃತ ಗ್ರಂಥಿ



ವರ್ಣಮಾಲೋದ್ಧಾರ ಯಂತ್ರ



ಶಿವಶಕ್ತಿ ತ್ರಿಕೋಣಾಂತರ್ಗತ ಭೂಪುರ ಅಷ್ಟದಿಗ್ದೇವತೆಯರು



ಯಂತ್ರಗಳಲ್ಲಿ ವಿವಿಧ ಜ್ಯಾಮಿತಿಯ ರೂಪಗಳನ್ನು ಬಳಸಿದ ಉದಾಹರಣೆ



ಸರ್ವತೋಭದ್ರ ಯಂತ್ರ



ಮಣಿಭದ್ರ ಯಕ್ಷ ಯಂತ್ರ

(ಓಂ ನಮೋ ಮಣಿಭದ್ರಾಯ ಪೂರ್ಣಭಧ್ರಾಯನಮೋ ಮಹಾಯಕ್ಷಾಸನಾಧಿಪತಯೇ
ಮೋಟ ಮೋಟ ಧಾರಯ ದ್ರಾಂ ದ್ರೀಂ ದ್ರೇಂ ಸ್ವಾಹಾ)

ವಟಯಕ್ಷಿಣೀ ಯಂತ್ರ

(ಸರ್ವೇಷ್ಟಪೂರಣೇ ಸರ್ವಸೌಖ್ಯಪ್ರದೇ ಶೀಘ್ರಮಾಗಚ್ಛ ಏಹ್ಯೇಹಿಯಕ್ಷಿ ಯಕ್ಷಿ ಮಹಾಯಕ್ಷಿ
ವಟವೃಕ್ಷವಾಸಿನಿ ಶೀಘ್ರಂ ಮೇ ಸರ್ವ ಸೌಖ್ಯಂ ಕುರು ಕುರು ಸ್ವಾಹಾ ॥)



ಸರ್ವತೋಭದ್ರ ಮಂಡಲ



ಯಂತ್ರೋದ್ಧಾರ ಮಂತ್ರ



ಕಲಶ ಸ್ಥಾಪನ



ಮಕ್ಕಳ ಶ್ರೇಯೋಭಿವೃದ್ಧಿಗೆ ಖಡ್ಗರಾವಣ ಯಂತ್ರ



ವರ್ಣನಾಗ ಯಂತ್ರ



ಬಾಲಗ್ರಹ ಯಂತ್ರ



ದೌರ್ಭಾಗ್ಯ ನಾಶನ ಯಂತ್ರ



ಭುವನೇಶ್ವರೀ ಯಂತ್ರ



ಯಂತ್ರೋದ್ಧಾರ ಯಂತ್ರ



ಕಾಮರಾಜ ಯಂತ್ರ

(ಮಮ ಸರ್ವಕಾರ್ಯಜಾತಕ ಸಾಧಯ ಸಾಧಯ
ಫೇ ಫೇ ಫೇ ಹಾ ಹಾ ಹುಂ ಫಟ್ ಸ್ವಾಹಾ)



ನೀಲ ಸರಸ್ವತೀ ಯಂತ್ರ (ನೀಲತಾರಾ)



ರಾಜಮಾತಂಗೀ ಯಂತ್ರ

(ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಓಂ ನಮೋ ಭಗವತಿ ಶ್ರೀ ಮಾತಂಗೇಶ್ವರಿ ಸರ್ವಜನಮನೋಹರಿ ಸರ್ವಮುಖರಂಜನಿ ಸರ್ವಜನವಶಂಕರಿ ಸರ್ವದುಷ್ಟಮೃಗವಶಂಕರಿ ಸತ್ವಾಶೇಷವಶಂಕರಿ ಸರ್ವಲೋಕಂ ಮೇ ವಶಮಾನಯ ಸ್ವಾಹಾ ॥)



ಮಾತೃಕಾ ಯಂತ್ರ



ಮಹಿಷಮರ್ದಿನೀ ಯಂತ್ರ

(ಓಂ ಹ್ರೀಂ ದುಂ ದುರ್ಗಾಯೈ ನಮಃ ॥)



ಸುಬ್ರಹ್ಮಣ್ಯ ಯಂತ್ರ

(ಓಂ ಸಾ ಶರವಣಭವ ||)



ಮಹಾಸರಸ್ವತೀ ಯಂತ್ರ

(ಓಂ ಹ್ರೀಂ ಹ್ಯ್ರಂ ಹ್ರೀಂ ಐಂ ಧೀಂ ಕ್ಲೀಂ ಸೌಃ ಸರಸ್ವತ್ಯೈ ಸ್ವಾಹಾ ||)

ಪಂಚಮುಖಿ ಹನುಮದ್ಯಂತ್ರ

(ಓಂ ನಮೋ ಭಗವತೇ ಪಂಚವದನಾಯ ॥
ಪೂರ್ವೇ ಕಪಿಮುಖಾಯ ಸಕಲಶತ್ರು ಸಂಹಾರಕಾಯ ।
ದಕ್ಷಿಣೇ ಕಪಿಲವದನಾಯ ಸಕಲಭೂತಪ್ರೇತ ಪಿಶಾಚದಂಭನಾಯ ಪಶ್ಚಿಮೇ
ವೀರಗರುಡಾಯ ಮಹಾರುದ್ರಾಯ ಸಕಲವಿಷನಾಶನಾಯ ।
ಉತ್ತರೇ ಆದಿವರಾಹಾಯ ಸಕಲಸಂಪತ್ಕರಾಯ ।
ಊರ್ಧ್ವೇ ಹಯಗ್ರೀವಾಯ ಸರ್ವವಿದ್ಯಾಸ್ವರೂಪಿಣೇ ॥
ಓಂ ಪಂಚಮುಖ ಹನುಮತೇ ನಮಃ ಹುಂ ಫಟ್ ಸ್ವಾಹಾ ॥)



ವಶೀಕರಣಯಂತ್ರಗಳು



ಬಾಲಾ ಯಂತ್ರ

(ಐಕ್ಲೀಂಸೌಃ)



ಭುವನೇಶಿ ಯಂತ್ರ

(ಓಂ ಗೌರಿ ರುದ್ರದಯಿತ ಯೋಗೇಶ್ವರಿ ಹುಂ ಫಟ್ ಸ್ವಾಹಾ ॥)



ಸ್ವರ್ಣಾಕರ್ಷಣ ಭೈರವ ಯಂತ್ರ

(ಓಂ ಐಂ ಹ್ರೀಂ ಶ್ರೀಂ ನಮೋಸ್ತು ಭಗವತೆ ಸ್ವರ್ಣಾಕರ್ಷಣಭೈರವಾಯು।)

ಕೂರ್ಮಯಂತ್ರ - ಯಂತ್ರೋದ್ಧಾರ

(ಯಂತ್ರರಾಜಾಯ ವಿದ್ಮಹೇ, ವರಪ್ರದಾಯ ಧೀಮಹಿ, ತನ್ನೋ ಯಂತ್ರಃ ಪ್ರಚೋದಯಾತ್ ॥)



ದುರ್ಗಾ ಯಂತ್ರ

(ಓಂ ದುರ್ಗೇ ದುರ್ಗೇ ರಕ್ಷಿಣಿ ಸ್ವಾಹಾ)
(ಓಂ ದುಂ ದುರ್ಗಾಯೈ ನಮಃ)

४पं	५वीं	६क्लीं	७सां	१जं	२ह्रीं	३श्रीं
२ह्रीं	३श्रीं	४ह्रं	५वीं	६क्लीं	७सां	१जं
७सां	१जं	२ह्रीं	३श्रीं	४वीं	५वीं	६क्लीं
५वीं	६क्लीं	७सां	१ह्रं	२ह्रीं	३श्रीं	४वीं
३श्रीं	४वीं	५ऐं	६क्लीं	७सां	१जं	२ह्रां
१जं	२ह्रां	३श्रीं	४वीं	५ऐं	६क्लीं	७सां
६क्लीं	७सां	१जं	२ह्रां	३श्रीं	४वीं	५ऐं

ಶಿವ ಯಂತ್ರ



ಬಗಲಾಮುಖೀ ದುರ್ಗಾ ಯಂತ್ರ

(ಓಂ ಹ್ರೀಂ ಬಗಲಾಮುಖಿ ಸರ್ವದುಷ್ಟಾನಾಂ ವಾಚಂ ಮುಖಂ ಪದಂ ಸ್ತಂಭಯ ಸ್ತಂಭಯ ಜಿಹ್ವಾಂ ಕೀಲಯ ಕೀಲಯ ಬುದ್ಧಿಂ ವಿನಾಶಯ ವಿನಾಶಯ ಹ್ಲೀಂ ಓಂ ॥)



ಭುವನೇಶ್ವರೀ ಯಂತ್ರ

ಹನುಮದ್ಯಂತ್ರ

(ಹಂ ಹನುಮತೇ ನಮಃ ॥)



ವಾಸುದೇವ ಯಂತ್ರ

(ಓಂ ನಮೋ ಭಗವತೇ ವಾಸುದೇವಾಯ ಹುಂ ಫಟ್ ಸ್ವಾಹಾ ॥)



ಶ್ರೀಬಾಲಾ ಯಂತ್ರ

(ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಮಹಾತ್ರಿಪುರಸುಂದರಿ ಹ್ರೀಂ॥)



ಶಾಂತಿ ಯಂತ್ರ



ಕಾರ್ತವೀರ್ಯಾರ್ಜುನ ಯಂತ್ರ

(ಓಂ ನಮೋ ಭಗವತೇ ಕಾರ್ತವೀರ್ಯಾರ್ಜುನಾಯ ಹೇಹಯಾಧಿಪತಯೇ ಸಹಸ್ರಕವಚಾಯ ಸಹಸ್ರಕರಸದೃಶಾಯ ಸರ್ವದುಷ್ಟಾಂತಕಾಯ ಸರ್ವ ಶಿಷ್ಟೇಷ್ಟಾಯ ಸರ್ವತ್ರೋದಧೇರಾಗಂತುಕಾನ್ ಅಸ್ಮದ್ವಸುಲುಂಪಕಾನ್ ಚೋರಸಮೂಹಾನ್ ನಿವಾರಯ ನಿವಾರಯ ರೋಧಯ ರೋಧಯ ಬಂಧ ಬಂಧ ಹುಂ ಫಟ್ ಸ್ವಾಹಾ ॥)



ಕಾಲೀ ಯಂತ್ರ

ಯಂತ್ರೋದ್ಧಾರ ಯಂತ್ರ



ಯಂತ್ರರಾಜ ಯಂತ್ರ



ದೇವೀಕವಚ ಯಂತ್ರ



ಸರ್ವತ್ರ ಜಯದ ಯಂತ್ರ



ಸ್ಮರಹರ ಯಂತ್ರ



ಮುಕ್ತಿ ಯಂತ್ರ



ಛಿನ್ನಮಸ್ತಾ ಯಂತ್ರ

(ಶ್ರೀಂ ಕ್ಲೀಂ ಹ್ರೀಂ ಐಂ ವಜ್ರವೈರೋಚನೀಯೇ ಹ್ರೀಂ ಹ್ರೀಂ ಫಟ್ ಸ್ವಾಹಾ ॥)



ಪ್ರತ್ಯಂಗಿರಾ ಯಂತ್ರ (ಬಲಿ)



ಷಾಡ್ಗುಣ್ಯ ಯಂತ್ರ



ತಾರಾಯಂತ್ರ (ಪೂಜನ)

(ಓಂ ತಾರೇ ತ್ರೀಂ ತಾರೇ ತರೇ ತಾರೇ ತುತ್ತಾರೇ ತರೇ ತಾರೇ ತ್ರೀಂ ತಾರೇ ತಾರೇ ತರೇ ತ್ರೀಂ ತುತ್ತಾರೇ ತರೇ ತಾರೇ ತರೇ ತಾರೇ ತ್ರೀಂ ತಾರೇ ತುತ್ತಾರೇ ತರೇ ತಾರೇ ಸ್ವಾಹಾ ॥)



ಪಂಚಮುಖಶಿವ ಯಂತ್ರ

(ತತ್ಪುರುಷ, ಅಘೋರ, ಸದ್ಯೋಜಾತ, ನಾಮದೇವ, ಈಶಾನ)

ಸಿದ್ಧಗೋಪಾಲ ಯಂತ್ರ

(ಓಂ ಗೋಪೀಜನವಲ್ಲಭಾಯ ಸ್ವಾಹಾ। ಹ್ರೀಂ ಗೋವಿಂದಾಯ ನಮಃ।
ಕ್ಲೀಂ ಕೃಷ್ಣಾಯ ನಮಃ। ಐಂ ಹ್ರೀಂ ಕ್ಲೀಂ ಶ್ರೀಂ ಹ್ಸೌಃ)



ನರಸಿಂಹ ಯಂತ್ರ

गं गणपतये सर्वशक्ति कमलासनाय नमः॥



ಗಣಪತಿ ಮಂಡಲ

(ಗಂ ಗಣಪತಯೇ ಸರ್ವಶಕ್ತಿ)



ವೀರಹನುಮದ್ಯಂತ್ರ

(ಓಂ ನಮೋ ಭಗವತೇ ರೌದ್ರಕಾಲಾಗ್ನಿಲೋಚನಾಯ ಪ್ರಲಯಕಾಲಾಗ್ನಿಲೋಚನಾಯ ಪ್ರಜ್ವಲಿತ ಕೋಪಾಯ ಮಹೇಗ್ರಪರಂಜ್ಯೋತಿರ್ಬಡಬಾನಲಾಯ ಮಹೋಗ್ರವೀರ ಹನುಮತೇ ಅಷ್ಟಾದಶಬಾಹು ದಂಡಪ್ರಚಂಡವಿಕ್ರಮಾಯ ಅಂಧಕಾರವಿಶ್ವತೋ ವಿಶ್ವರೂಪಹನುಮತೇ ಕೂಷ್ಮಾಂಡಭಯ ವಿಧ್ವಂಸನಾಯ ಯಕ್ಷ ರಾಕ್ಷಸ ಶಾಕಿನೀ ಡಾಕಿನೀ ಕಾಮಿನೀ ಮೋಹಿನೀ ಗಂಧರ್ವ ಭೂತ ಪ್ರೇತ ಪಿಶಾಚ ಸರ್ವಗ್ರಹವಿನಾಶಾಯ ಗ್ರಹಭೂತವಿಧ್ವಂಸನಾಯ ದಾನವಕುಲಸಂಹಾರಕಾಯ ವೀರ ಹನುಮತೇ ಸರ್ವವ್ಯಾಪಕ ಹನುಮನ್ ಅಹೋ ವೀರಹನುಮನ್ ಸರ್ವಬಂಧ ಪರದಾಟು ಪರಮಂತ್ರಸ್ ಮೂಲೇನೋನ್ಮೂಲನಾಯ ಆಗಚ್ಛ ಸ್ವತಂತ್ರವಿದ್ಯ ಅಘೋರ ರೂಪ ಸರ್ವಗ್ರಹಾನ್ ಸರ್ವಬಂಧಾನ್ ಛಿಂದಿ ಛಿಂದಿ ಭಿಂದಿ ಭಿಂದಿ ಹ್ರಾಂ ಹ್ರೂಂ ಹ್ರೀಂ ಓಂ ಫಟ್ ಸ್ವಾಹ ॥



ಸರ್ವಭಯಂಹರ ಹನುಮದ್ಯಂತ್ರ

(ಓಂ ನಮೋ ಭಗವತೇ ಪ್ರಕಟಬಲಪರಾಕ್ರಮಾಯ ಕ್ರೌಂಚಸ್ಥಲ ದಿಗ್ಬಂಧನಾಯ ದಿಶಾವಿಹಾರಧವಲ ಕಟವಜ್ರದೇಹಾಯ ಲಂಕಾಪುರೀದಹನಾಯ ಉದಧಿ ಬಂಧನಾಯ ಸರ್ವದುಷ್ಟಗ್ರಹನಾಶನಾಯ ಗ್ರಹಮಂಡಲ ಭೂತಪ್ರೇತ ಪಿಶಾಚಮಂಡಲ ನಿರ್ಘುಟನಾಯ । ಏ ಹ್ಯೇಹಿ ಪಾಹಿಪಾಹಿ । ದುಷ್ಟ ಗ್ರಹಾನ್ ವಿಷಮವಿಷಂ ಮರ್ದಯ ಮರ್ದಯ ಭೇದಯ ಭೇದಯ ಜ್ವಾಲಯ ಜ್ವಾಲಯ ಉಚ್ಚಾಟಯ ಉಚ್ಚಾಟಯ ಮಾರಯ ಮಾರಯ । ಸರ್ವವ್ಯಾಧೀನ್ ನಾಶಯ ನಾಶಯ ಓಂ ಹೂಂ ಫಟ್ ಸ್ವಾಹಾ ॥)



ಭೂತಾವೇಶ ಯಂತ್ರ

(ಓಂ ನಮೋ ಭಗವತೇ ಶ್ರೀವೀರಗ್ರಹೋಚ್ಚಾಟನಾಯ ನಮೋ ವೀರಭದ್ರಾಯ ಸರ್ವಗ್ರಹೋಚ್ಚಾಟನಾಯ ಸಮಸ್ತ ಭೂತಗ್ರಹೋಚ್ಚಾಟನಾಯ ಶಾಕಿನೀ ಡಾಕಿನೀ ಗ್ರಹೋಚ್ಚಾಟನಾಯ ಹ್ರೀಂ ಹ್ರೀಂ ಹೂಂ ಫಟ್ ಸ್ವಾಹಾ ॥)



ದೇವೀ ಯಂತ್ರ

(ಹ್ರೀಂ ಕ್ಲೀಂ ಹ್ರೀಂ)



ವಿಶ್ವಕರ್ಮ ಯಂತ್ರ

(ಓಂ ನಮಃ ಪರಬ್ರಹ್ಮಣೇ)



ಉಪದ್ರವಶಾಂತಿ ಯಂತ್ರ

(ಓಂ ದುಂ ಉತ್ತಿಷ್ಠ ಪುರುಷಿ ಕಿಂ ಸ್ವಪಿಷಿ ಭಯಂ ಮೇ ಸಮುಪಸ್ಥಿತಂ। ಯದಿ ಶಕ್ಯಮಶಕ್ಯಂ ವಾ / ತನ್ಮೇ ಭಗವತಿ ಶಮಯ ಸ್ವಾಹಾ ॥ ಓಂ ಹ್ರೀಂ ದುಂ ದುರ್ಗಾಯೈ ನಮಃ)

ಅನುಬಂಧ

ಚಕ್ರ ಎಂದರೇನು ?

'ಚಕ್ರ' ಎಂಬ ಸಂಸ್ಕೃತ ಪದದ ಅರ್ಥ 'ಗಾಲಿ' ಎಂದು. ಯಾವುದರಿಂದ ಎಲ್ಲವನ್ನೂ ಮಾಡಬಹುದೋ ಅದೇ ಚಕ್ರ ಎಂಬುದು ಈ ಪದದ ಶಬ್ದನಿಷ್ಪತ್ತಿ (ಕ್ರಿಯತೇ ಅನೇನ). ಬಂಡಿಯ ಚಕ್ರ, ಕುಂಬಾರನ ಚಕ್ರ, ಶತ್ರುವಿನ ಮೇಲೆ ಪ್ರಯೋಗಿಸುವ ಚಕ್ರಾಯುಧ ಇವೆಲ್ಲವೂ ಚಕ್ರಗಳೇ ಆಗಿವೆ. ಮಹಾರಾಜನ ರಥದ ಚಕ್ರವು ಸಾಮ್ರಾಜ್ಯದಲ್ಲಿ ಅಬಾಧಿತವಾಗಿ ಸಂಚರಿಸುವುದರಿಂದ ಚಕ್ರಕ್ಕೆ ಸಾಮ್ರಾಜ್ಯ ಎಂಬ ವಿಶಾಲಾರ್ಥವೂ ಇದೆ. ಆದ್ದರಿಂದಲೇ ಧರೆಯನ್ನು ಆಳುವ ರಾಜನಿಗೆ 'ಚಕ್ರವರ್ತಿ' ಎಂದು ಹೆಸರು ಬಂದಿದೆ. ತನ್ನ ಸ್ಥಾನವನ್ನು ಕಾಪಾಡಿಕೊಂಡು ಯುದ್ಧದಲ್ಲಿ ಸೈನ್ಯವು ಜಯಶಾಲಿಯಾಗಲು ರಚಿಸುವ ವ್ಯೂಹಕ್ಕೆ ಚಕ್ರವ್ಯೂಹವೆಂದು ಹೆಸರು. ಚಕ್ರವು ಈ ಅರ್ಥವನ್ನೂ ಸೂಚಿಸುತ್ತದೆ. ಅರ್ಥವನ್ನು ಹೆಚ್ಚು ಪರಿಣಾಮಕಾರಿಯಾಗಿ (ಅಷ್ಟೇ ಜಟಿಲವಾಗಿ) ತಿಳಿಸಲೆಂದು ಪದಗಳನ್ನು ಚಕ್ರ-ಬಂಧದಲ್ಲಿ ರಚಿಸುವುದಂತೂ ಸಂಸ್ಕೃತ ಕವಿಗಳ ಮುಖ್ಯ ಲಕ್ಷಣವೇ ಸರಿ.

ಚಕ್ರ ಪದವನ್ನು ಯಾವುದೇ ಉದ್ದೇಶದಿಂದ ಬಳಸಿದರೂ ಅದು ಕಡೆಗೂ ಶಕ್ತಿಯ ಕ್ಷೇತ್ರವನ್ನೂ ಹಾಗೂ ಬೇಕಾದ ಗುರಿಯನ್ನು ಸಾಧಿಸಲು ವಿವಿಧ ಅಂಗಗಳನ್ನು ಜೋಡಿಸುವುದನ್ನೇ ಸೂಚಿಸುತ್ತದೆ. ಚಕ್ರವು ನೆನಪಿಗೆ ತರುವ ವೃತ್ತಾಕಾರವು ಸಮಗ್ರತೆ, ಸಾಮರ್ಥ್ಯಗಳ ಸೂಚಕ. ಅದು ಎಲ್ಲ ಭಾಗ, ಅಂಗ ಮತ್ತು ಸೂಕ್ಷ್ಮ ವಿವರಗಳನ್ನೂ ಪರಿಣಾಮಕಾರಿ ಶೈಲಿಯಲ್ಲಿ ಅಚ್ಚುಕಟ್ಟಾಗಿ ಸೇರಿಸಿಕೊಂಡು ಇಡೀ ಆಕೃತಿ ಕ್ರಿಯಾಶಾಲಿಯಾಗಿದ್ದು, ಅದ್ವಯವಾಗಿರುವಂತೆ ಮಾಡುತ್ತದೆ.

ಅಂದಮಾತ್ರಕ್ಕೆ ಚಕ್ರದ ಆಕಾರ ವೃತ್ತಾಕೃತಿಯಲ್ಲೇ ಇರಬೇಕಿಲ್ಲ. 'ಋತುಚಕ್ರ' (ಋತುಗಳ ಚಕ್ರಾಕಾರ), 'ರಾಶಿ ಚಕ್ರ' (ರಾಶಿಗಳ ವಿನ್ಯಾಸ), 'ನಕ್ಷತ್ರ ಚಕ್ರ' (ನಕ್ಷತ್ರಗಳ ಗುಚ್ಛ) ಮತ್ತು 'ನಾಡಿ ಚಕ್ರ' (ನಾಡಿಗಳ ವ್ಯವಸ್ಥೆ) ಮೊದಲಾದ ಅಭಿವ್ಯಕ್ತಿಗಳಲ್ಲಿರುವಂತೆ ಚಕ್ರದ ಸಮಗ್ರತೆಯ ಕಲ್ಪನೆ ರೂಪಕಾತ್ಮಕವಾಗಿರಬಹುದು.

ಮಾನವನ ಸಾಮಾನ್ಯ ಶಕ್ತಿಯ ಮಾನಸಿಕ, ದೈಹಿಕ ರಚನೆಯನ್ನು ಷಟ್ ಚಕ್ರಗಳ ಪರಿಭಾಷೆಯಲ್ಲಿ ಹೇಳುವುದೂ ಸಹ ಈ ರೂಪಕಾತ್ಮಕತೆಯನ್ನೇ ಸೂಚಿಸುತ್ತದೆ. (ಷಟ್ ಚಕ್ರಗಳಲ್ಲಿ - ಮೂಲಾಧಾರ ಮೂಲದಲ್ಲೂ, ಸ್ವಾಧಿಷ್ಠಾನವು ಜನನೇಂದ್ರಿಯದ ಮೂಲದಲ್ಲೂ, ಮಣಿಪುರವು ನಾಭಿಯ ಸಮೀಪದಲ್ಲೂ, ಅನಾಹತ ಹೃದಯದಲ್ಲೂ, ವಿಶುದ್ಧ ಕಂಠದ ಹಿಂಭಾಗದಲ್ಲೂ, ಆಜ್ಞಾ ಭ್ರೂಮಧ್ಯದಲ್ಲೂ ಇರುತ್ತದೆ). ಈ

ಪ್ರತಿಯೊಂದು ಚಕ್ರವು ಆಯಾ ಹಂತದ ಸಂಯೋಜನೆಗೆ ಸರಿಹೊಂದುವ ಶಕ್ತಿಯ ವಿನ್ಯಾಸಗಳ ರೂಪಾಕಾತ್ಮಕ ವರ್ಗೀಕರಣವೇ ಆಗಿದೆ. ಚಕ್ರಗಳು ದೈಹಿಕ ಅಂಗಗಳನ್ನಾಗಲೀ ಭೌತಿಕವಾದ ಕ್ರಿಯೆಗಳನ್ನಾಗಲೀ ಸೂಚಿಸುವುದಿಲ್ಲ. ಈ ಷಟ್‌ಚಕ್ರಗಳು, ತಲೆಯ ಮೇಲೆ ಇದೆ ಎಂದು ಕಲ್ಪಿಸಿಕೊಂಡಿರುವ ಸಹಸ್ರಾರ, ಮನಶ್ಚಕ್ರ ಮತ್ತು ಸೋಮ ಚಕ್ರದಂತೆಯೇ ಸಂಪೂರ್ಣವಾಗಿ ಅಮೂರ್ತವಾದವು. (ಸಹಸ್ರಾರವು ವಾಸ್ತವವಾಗಿ ಮಾನಸಿಕ-ದೈಹಿಕ ಚೌಕಟ್ಟಿನ ಹೊರಗಿದೆಯಾದ್ದರಿಂದ ಅದಕ್ಕೆ 'ನಿರಾಲಂಬಪುರೀ' ಎಂದು ಹೆಸರು. ಮನಶ್ಚಕ್ರವು ಕನಸು, ಭ್ರಮೆ ಮುಂತಾದವುಗಳಿಗೆ ಕಾರಣವಾಗಿದೆ. ಸೋಮಚಕ್ರವು (ಚಂದ್ರಕೇಂದ್ರ) ದಯೆ, ನಿರ್ಲಿಪ್ತತೆ, ಉದಾರತೆ, ತಾಳ್ಮೆ ಇವುಗಳಿಗೆ ಕಾರಣವೆನಿಸಿದೆ). ಷಟ್‌ಚಕ್ರಗಳು ಶಕ್ತಿಸಂಚಲನೆಯ ಪ್ರತ್ಯೇಕ ಕೇಂದ್ರಗಳಾಗಿವೆ.

ಚಕ್ರಗಳ ಪ್ರತೀಕವನ್ನು ಸಮಗ್ರತೆ, ನಿರಂತರತೆ ಮತ್ತು ಕ್ರಿಯಾಶಾಲಿ ಘಟಕಗಳನ್ನು ಒಳಗೊಂಡಿರುವ ಸಮೃದ್ಧ ಶಕ್ತಿಗಳ ವಿನ್ಯಾಸ ಎಂದು ಪರಿಗಣಿಸುವುದು ಭಾರತದಲ್ಲಿ ಪ್ರಾಚೀನಕಾಲದಿಂದಲೂ ನಡೆದು ಬಂದಿದೆ. ಸಿಂಧು ಕಣಿವೆ ನಾಗರಿಕತೆಯ ಅವಶೇಷಗಳಲ್ಲಿ ಈ ಪ್ರತೀಕದ ಚಾಕ್ಷುಷ ಅಭಿವ್ಯಕ್ತಿಗಳಿವೆ. ಅದರ ವಾಗ್ರೂಪದ ಅಭಿವ್ಯಕ್ತಿಯು ಋಗ್ವೇದದಲ್ಲಿರುವ ಸೂಕ್ತಗಳಲ್ಲಿ ಕಂಡುಬರುತ್ತದೆ. ಹಿಂದಿನ ಕಾಲದಲ್ಲೇ 'ಸಂಸಾರ ಚಕ್ರ', 'ಕಾಲಚಕ್ರ', 'ಧರ್ಮಚಕ್ರ', ಯೋಗಿನೀಚಕ್ರ (ಪದೇ ಪದೇ ಆವರ್ತನಗೊಳ್ಳುವ ಸ್ತ್ರೀ ದೇವತೆಗಳ ಪ್ರತಿನಿಧಿ), ಮಂತ್ರಚಕ್ರ ಮುಂತಾದ ವೈವಿಧ್ಯಮಯ ಸಂದರ್ಭಗಳಲ್ಲಿ ಚಕ್ರದ ಪ್ರತೀಕ ಮರುಕಳಿಸಿದೆ. ತೀವ್ರವಾದಂಥ ತಾಂತ್ರಿಕ ಪ್ರಯೋಗಗಳಲ್ಲಿ ನಡೆಯುವ ರಹಸ್ಯ ಆಚರಣೆಯ ಆಧ್ಯಾತ್ಮಿಕ ಶಕ್ತಿಪೂಜೆಗೆ 'ಚಕ್ರ' ಎಂದೇ ಹೆಸರು. ಅಂದರೆ ಇಲ್ಲಿ ಸಾಧಕರ ಗುಂಪು ಒಂದು ಸಾಮಾನ್ಯ ಪಂಥದ ಶಿಸ್ತಿನಡಿಯಲ್ಲಿ ಒಗ್ಗೂಡುತ್ತದೆ. ಅಲ್ಲಿಯ ಕಲಾಪಗಳಿಗೆ 'ಚಕ್ರಪೂಜೆ' ಎಂಬ ಸಂದಿಗ್ಧ ಹೆಸರನ್ನು ನೀಡಲಾಗಿದೆ. ಈ ರೀತಿಯ ತಾಂತ್ರಿಕ ಪ್ರಯೋಗಗಳು ಅಧಿಕಾರಕ್ಕಾಗಿ ನಡೆಯುವ ಸಂಘರ್ಷದ ಸ್ವರೂಪದಲ್ಲೂ ಇರುತ್ತಿದ್ದುದುಂಟು. ಅಮೂರ್ತ ದೇವತೆಗಳನ್ನು ಪರಿಣಾಮಯುತವಾಗಿ ಒಗ್ಗೂಡಿಸಿ, ಅವುಗಳನ್ನು ರಹಸ್ಯಾತ್ಮಕವಾದ ಶಕ್ತಿಶಾಲಿ ಸಭೆಯಲ್ಲಿ ದೀಕ್ಷೆ ಪಡೆದ ಸಾಧಕರು ಮೂರ್ತರೂಪದಲ್ಲಿ ಪ್ರತಿನಿಧಿಸುವುದೇ ಈ ರೀತಿ ತಾಂತ್ರಿಕ ಪ್ರಯೋಗಗಳ ನೆಲೆಯಾಗಿತ್ತು. ಮದ್ಯ ಮತ್ತು ವ್ಯಭಿಚಾರವನ್ನು ಆಧ್ಯಾತ್ಮಿಕವಾಗಿ ಅವುಗಳಿಗೆ ಸಂವಾದಿಯಾದ ಹಂತಕ್ಕೆ ಉದಾತ್ತೀಕರಿಸುವ ಭೈರವೀಚಕ್ರದ ಪರಿಕಲ್ಪನೆ ರಹಸ್ಯ ಪಂಥಗಳ ಸಾಹಿತ್ಯದಲ್ಲಿ ಸುಪ್ರಸಿದ್ಧ. ಕೃಷ್ಣಭಕ್ತರಾದ ನಿರ್ದಿಷ್ಟ ರೀತಿಯ ಗಂಡು ಹೆಣ್ಣುಗಳು ಪ್ರಣಯ ತಂತ್ರದ ವಿವರಣೆಗಳಿಂದ ಕೂಡಿರುವ ನೃತ್ಯಕಲಾಪ (dance-ritual) ದಲ್ಲಿ ಪಾಲ್ಗೊಳ್ಳುವಾಗ ತಮ್ಮನ್ನು ಸ್ವತಃ ಕೃಷ್ಣ ಮತ್ತು ಗೋಪಿಕೆಯರು ಎಂದು ಭಾವಿಸುವ 'ರಾಸಮಂಡಲ'ದ ಪರಿಕಲ್ಪನೆಯಲ್ಲೂ ಸಹ ಈ ವಿಚಾರ ಬಂದಿದೆ.

ಮಂಡಲದ ಕಲ್ಪನೆ ಸಾಮಾನ್ಯವಾಗಿ ಚಕ್ರದೊಡನೆ ಸಂವಾದಿಯಾಗಿರುವುದನ್ನು ಸಾಂದರ್ಭಿಕವಾಗಿ ಗಮನಿಸಬಹುದು. ಮಂಡಲ ಎಂದರೂ ಸಹ ಚಕ್ರ, ವೃತ್ತಾಕಾರದಲ್ಲಿರುವುದು, ಹಲವು ವಿವರಗಳ ಏಕರಾಶಿ, ಸಾಮ್ರಾಜ್ಯ, ಸೈನ್ಯ ಎಂಬ ಅರ್ಥಗಳಿವೆ. ನಮ್ಮಲ್ಲಿ ಧರಣಿ ಮಂಡಲ, ಸೂರ್ಯಮಂಡಲ, ಚಂದ್ರಮಂಡಲ, ನರಮಂಡಲ, ನಾಭಿಮಂಡಲ (ನಾಭಿ ಕೇಂದ್ರದಲ್ಲಿರುವ ಶಕ್ತಿಗಳ ವಿನ್ಯಾಸ), ತಾರಾಮಂಡಲ ಮೊದಲಾದ ಪದಗಳಿವೆ. ಮಹಾಯಾನ ಬೌದ್ಧ ಪಂಥ ಮತ್ತು ನಾಥ-ಸಿದ್ಧ ವಿಚಾರವಾದಗಳಿಗೆ ಸಂಬಂಧಿಸಿದ ತಂತ್ರಗಳಲ್ಲಿ ಈ ಪದಕ್ಕೆ ವಿಶೇಷವಾದಂಥ ಪಂಥೀಯ ಮಹತ್ವ ಒದಗಿಬಂತು. ಮಂಡಲ ನೈವೇದ್ಯ ಮತ್ತು ಮಂಡಲ ದರ್ಶನಗಳು ಟಿಬೆಟ್, ಮಂಗೋಲಿಯ ಹಾಗೂ ಜಪಾನಿನ ಮತಧರ್ಮಗಳ ಪ್ರಯೋಗಗಳಲ್ಲಿ ಮಹತ್ವದ ಸಂಗತಿಗಳು. ಮಂಡಲಪೂಜೆ ಮತ್ತು ಅದರ ಸಾಂಕೇತಿಕತೆಯನ್ನು ವಿವರಿಸುವ ವ್ಯಾಖ್ಯಾನ ಗ್ರಂಥಗಳನ್ನು ನಾಥಸಿದ್ಧರು, ಬೌದ್ಧ ತಾಂತ್ರಿಕ ಆಚಾರ್ಯರು ಮತ್ತು ಟಿಬೇಟಿನ ಯೋಗಿಗಳು ಬರೆದಿದ್ದಾರೆ.

ಇಲ್ಲಿ ಮಂಡಲವೆಂದರೆ 'ಅಗತ್ಯವಿರುವ ಸಾರವತ್ತಾದ ವಿವರಗಳನ್ನು ಸಂಗ್ರಹಿಸುವುದು' ('ಮಂಡಂ ಲಾತಿ'). ಪ್ರಸಿದ್ಧ ತಾಂತ್ರಿಕ ಗ್ರಂಥವಾಗಿರುವ 'ತಂತ್ರರಾಜ ತಂತ್ರ' ಪೂಜೆ ಮತ್ತು ಧ್ಯಾನದಲ್ಲಿ ಬಳಸುವ ಮಂಡಲದ ಸ್ವರೂಪ ಮತ್ತು ಉಪಯೋಗಗಳನ್ನು ತಿಳಿಸಿದೆ. ಮಂಡಲ, ಚಕ್ರ-ಇವುಗಳು ಪ್ರಪಂಚದ ಸಕಲ ಮಹತ್ವದ ವಿಷಯಗಳ ಕ್ರಿಯೆಯನ್ನು ಅಥವಾ ಒಂದು ತತ್ವ ಇಲ್ಲವೇ ಸ್ವಸ್ವರೂಪ, ಮನೋಕಲ್ಪಿತ ವಿಷಯಗಳನ್ನು ಸೂಚಿಸುತ್ತವೆ. ಮಂಡಲ, ಚಕ್ರದಲ್ಲಿ ಈ ರೀತಿ ಏಕಾಗ್ರತೆಯಿಂದಿರುವ ಸೌಕರ್ಯವಿರುತ್ತದೆ. ಏಕಾಗ್ರತೆಯ ಕ್ರಿಯೆಯಾಗಿ ಅದು ಆಂತರಿಕ ಶಕ್ತಿಗಳನ್ನು ಸಂಗ್ರಹಿಸುತ್ತದೆ, ಏಕಾಗ್ರತೆಯ ಒಂದು ಸ್ಥಾನವಾಗಿ ಅದು ಬಾಹ್ಯಶಕ್ತಿಗಳನ್ನು ಒಗ್ಗೂಡಿಸುತ್ತದೆ. ಮಂಡಲ ಎಂದರೆ ಪ್ರಯೋಗಗಳಿಗೆ ಒಳಪಟ್ಟು ಖಚಿತತೆಯನ್ನು ಪಡೆದು ಪ್ರಮಾಣಬದ್ಧಗೊಂಡಿರುವ ಒಂದು ಯಥೋಚಿತ ಉಪಕರಣ.

ಮಂಡಲಕ್ಕೆ ಯಂತ್ರ ಎಂದೂ ಹೆಸರಿದೆ. ಸಾಧಕನ ಸ್ವಯಮಾಲೋಚನೆಗಳ ಏಕಾಗ್ರತೆಯ ಕ್ರಿಯೆಯಾಗಿದ್ದು, ಬಾಹ್ಯ ಪ್ರಪಂಚದಲ್ಲಿನ ಶಕ್ತಿಗಳು ಏಕತ್ರಗೊಳ್ಳುವ ಸ್ಥಾನವಾಗಿರುವ ಕಣ್ಣಿಗೆ ಕಾಣಿಸುವ ಮೂರ್ತರೂಪ ಎಂದು ಯಂತ್ರವನ್ನು ಬಣ್ಣಿಸಲಾಗುತ್ತದೆ. ಅದನ್ನು ಹೆಚ್ಚಾಗಿ ಒಂದು ಸಣ್ಣ ಉಪಕರಣ, ವಿಲಕ್ಷಣ ಯಂತ್ರ, ಯಾಂತ್ರಿಕ ಸಲಕರಣೆ ಎಂದು ಭಾವಿಸಲಾಗುತ್ತದೆ. ಚಕ್ರ, ಮಂಡಲ, ಯಂತ್ರ ಈ ಮೂರು ಸಮಾನಾರ್ಥ ಪದಗಳು. ಆದರೆ ಜನಪ್ರಿಯವಾಗಿರುವ ಕಲ್ಪನೆಯ ಪ್ರಕಾರ ಒಂದು ಮತ್ತೊಂದಕ್ಕಿಂತ ಭಿನ್ನವಾಗಿರುವ ಲಕ್ಷಣ ಹೊಂದಿದೆ. ಉದಾಹರಣೆಗೆ ಚಕ್ರ ವೃತ್ತಾಕಾರದಲ್ಲಿದ್ದರೆ, ಮಂಡಲ ಯಾವುದೇ

ಆಕಾರದಲ್ಲಾದರೂ ಇರಬಹುದು (ಸಾಮಾನ್ಯವಾಗಿ ಚೌಕಾಕಾರದಲ್ಲಿರುತ್ತದೆ). ಸಾಮಾನ್ಯವಾಗಿ ಚಕ್ರ ಮತ್ತು ಮಂಡಲ ರೇಖಾಕೃತಿಯಾಗಿರುತ್ತವೆ. (ಕೆಲವೊಮ್ಮೆ ಇವೆರಡಕ್ಕೂ ಗಾಢವಾದಂಥ ಬಣ್ಣವನ್ನು ಹಾಕಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಮಂಡಲಕ್ಕೆ ಎದ್ದುಕಾಣುವ ಬಣ್ಣ ತುಂಬಿಸಲಾಗುತ್ತದೆ). ಯಂತ್ರ ಮೂರು ಆಯಾಮಗಳಿರುವ ಆವೃತವಾಗಿರುತ್ತದೆ. ಮೂರು ಆಯಾಮಗಳಿರುವ ಶ್ರೀಚಕ್ರದ ಆಕೃತಿ (ಇದಕ್ಕೆ ಮೇರು ಎಂದು ಹೆಸರು) ಮತ್ತು ಜಪಾನ್, ಟಿಬೇಟಿನಲ್ಲಿ ಹಲವಾರು ವಸ್ತುಗಳಿಂದ ನಿರ್ಮಿಸಿರುವ ಮಂಡಲಗಳ ಭೌತಿಕ ಆಕೃತಿಗಳೂ ಇರುತ್ತವೆ (ಇದನ್ನು ನೈವೇದ್ಯಕ್ಕೆ ಬಳಸುತ್ತಾರೆ) ಎಂಬುದು ಗಮನಾರ್ಹ ಸಂಗತಿ. ಶ್ರೀಚಕ್ರವನ್ನು ಶ್ರೀಯಂತ್ರವೆಂದೂ ಅನೇಕ ಸಂದರ್ಭಗಳಲ್ಲಿ ಹೇಳುವುದುಂಟು.

ಚಕ್ರ, ಮಂಡಲ ಅಥವಾ ಯಂತ್ರ - ಯಾವುದೇ ಆದರೂ ಅದೊಂದು ಪ್ರಭಾವಲಯ, ಪವಿತ್ರ ಸ್ಥಾನ, ಸಾಧಕನ ಒಳಹೊರಗಿನ ಆಲೋಚನೆ, ಭಾವನೆ ಮತ್ತು ಶಕ್ತಿಯ ರಂಗಸ್ಥಳ. ಅದು ಶಕ್ತಿಯ ಉತ್ಥಾನಕ್ಕೆ, ಆಲೋಚನೆಯ ಪ್ರಚೋದನೆಗೆ, ಭಾವನೆಗಳ ಸಮರಸತೆಗೆ, ಬಾಹ್ಯ ಮತ್ತು ಆಂತರಿಕ ಶಕ್ತಿಗಳ ಸಮನ್ವಯಕ್ಕೆ ಇರುವ ಉಪಕರಣ. ಆದ್ದರಿಂದಲೇ ಇದನ್ನು ಮಾನಸಿಕ ಬ್ರಹ್ಮಾಂಡ ಚಿತ್ರಣ (psycho cosmogram) ಎಂದು ಸರಿಯಾಗಿಯೇ ಕರೆಯಲಾಗಿದೆ.

ವ್ಯಕ್ತಿಯ ಅಂತರಂಗದಲ್ಲಿರುವ ಶಕ್ತಿಯ ಅಂಶಗಳು ಮತ್ತು ಅವನ ಹೊರಗಿರುವ ಶಕ್ತಿಯ ಆಯಾಮಗಳ ನಡುವಿನ ಅನುಸಂಧಾನದ ಉಪಕರಣವಾಗಿರುವ ಚಕ್ರ, ಮಂಡಲ, ಯಂತ್ರ ಚಲನೆಯ ಮಾಧ್ಯಮವಾಗಿ ಮೂರು ಆಕಾಶ (ಅವಕಾಶ, space) ಗಳಾಗಿ ರೂಪಿಸಲ್ಪಟ್ಟಿವೆ. ಆಲೋಚನೆ ಮತ್ತು ಭಾವನೆಗಳನ್ನು ಪ್ರತಿನಿಧಿಸುವ ಚಿತ್ತಾಕಾಶದ ಹಂತ, ಭೌತಿಕ ಪ್ರಪಂಚದ ವಸ್ತುಗಳು ಮತ್ತು ಜೀವಿಗಳಿಂದ ಉಂಟಾಗಿರುವ ಮಹಾಕಾಶದ ಹಂತ, ಹಾಗೂ ಅಭೇದವಾಗಿರುವ ಶುದ್ಧ ಪ್ರಜ್ಞೆಯ ಹಂತವಾಗಿರುವ ಚಿದಾಕಾಶದ ಹಂತ. ಚಿತ್ತಾಕಾಶ ವಸ್ತುನಿಷ್ಠ ಪ್ರಪಂಚವನ್ನೂ, ಮಹಾಕಾಶ, ಅಲ್ಲಿಂದ ಹೊರಡುವ ವ್ಯಕ್ತಿನಿಷ್ಠವಾದುದನ್ನೂ ಮತ್ತು ಚಿದಾಕಾಶವು ವಸ್ತುನಿಷ್ಠ ಪ್ರಪಂಚ, ವ್ಯಕ್ತಿನಿಷ್ಠ ಪ್ರಪಂಚಗಳ ವಿಸರ್ಜನೆಯನ್ನೂ ಸೂಚಿಸುತ್ತವೆ. ಆಕಾಶ ಪದದ ವಿವರಣೆಯಲ್ಲೇ 'ಬೆಳಕು' ಇದೆ (ಆಕಾಶ ಶಬ್ದವು ಬೆಳಗುವುದು ಎಂಬ ಅರ್ಥ ನೀಡುವ ಕಾಶ್ ಧಾತುವಿನಂತೆ ಉಂಟಾಗಿದೆ). ಈ ಮೂರು ಹಂತಗಳು ಬೆಳಕಿನ ಮೂರು ಶ್ರೇಣಿಗಳನ್ನು ಸೂಚಿಸುತ್ತವೆ. ಮೊದಲನೆ ಹಂತದಲ್ಲಿ ಸ್ವಾಭಾವಿಕವಾದ ಬೆಳಕಿನ ಪ್ರದೇಶ, ಅವಕಾಶವನ್ನು ಮೊದಲೇ ಇರುವ ಜಡತ್ವ, ತಮಸ್ಸು ಸಂಪೂರ್ಣವಾಗಿ ಮರೆಮಾಡಿ ಬಿಟ್ಟಿರುತ್ತದೆ. ಎರಡನೆಯ ಹಂತದಲ್ಲಿ ಕ್ರಿಯಾತ್ಮಕವೂ ಭಾವನಾತ್ಮಕವೂ ಆಗಿರುವ ರಜಸ್ ನಿಂದಾಗಿ ಬೆಳಕಿಗೆ ಸ್ವಲ್ಪ ಅವಕಾಶವಿರುತ್ತದೆ. ಮೂರನೆಯ ಹಂತದಲ್ಲಿ ಶುದ್ಧ ಪ್ರಜ್ಞೆಯ ಜ್ಯೋತಿಯಾದ ಸತ್ವವು ಪ್ರಧಾನವಾಗಿರುವುದರಿಂದ ಅಲ್ಲಿ ಪ್ರಕಾಶ ಗರಿಷ್ಠವಾಗಿರುತ್ತದೆ.

ಅಂದರೆ ಚಕ್ರಗಳು ಮೊದಲ ಹಂತದ ಆಕಾಶವನ್ನು ಎರಡನೆಯ ಹಂತಕ್ಕೆ, ಎರಡನೆಯದನ್ನು ಮೂರನೆಯ ಹಂತಕ್ಕೆ ಪರಿವರ್ತಿಸುವಂತೆ ಮಾಡುತ್ತವೆ. ಇದನ್ನು ಸ್ಥೂಲವಾಗಿ ಹೇಳುವುದಾದರೆ, ಜಡವನ್ನು ಚೈತನ್ಯವಾಗಿ, ಚೈತನ್ಯವನ್ನು ಪ್ರಜ್ಞೆಯಾಗಿ ಪರಿವರ್ತಿಸುವುದು ಎನ್ನಬಹುದು. ಈ ಪರಿವರ್ತನೆ ಆದಂತೆಲ್ಲಾ ಹೆಚ್ಚಿನ ಸಾಮರಸ್ಯ ಸಾಧಿತವಾಗುತ್ತದೆ. ವಸ್ತುನಿಷ್ಠ ಪ್ರಪಂಚ, ವ್ಯಷ್ಟಿಯಿಂದಾದ ವ್ಯಕ್ತಿ ಹಾಗೂ ಏಕಕಾಲಕ್ಕೆ ವಸ್ತುನಿಷ್ಠ-ವ್ಯಕ್ತಿನಿಷ್ಠವೂ ಹಾಗೂ ಅವೆರಡೂ ಅಲ್ಲಿದ್ದೂ ಆಗಿರುವ ಪ್ರಜ್ಞೆ ಇವುಗಳ ನಡುವಿನ ಭೇದ ಇಲ್ಲವಾಗುತ್ತದೆ.

ಅಸ್ತಿತ್ವದ ಸಂಪೂರ್ಣ ಸಾಮರಸ್ಯವನ್ನು ಚಕ್ರದ ಕೇಂದ್ರದಲ್ಲಿರುವ ಬಿಂದು (point) ಸಂಕೇತಿಸುತ್ತದೆ. ಹಾಗೆ ನೋಡಿದರೆ ಬಿಂದುವಿನ ಸೃಷ್ಟಿ (unfoldment) ಯೇ ಚಕ್ರ ಮತ್ತು ಚಕ್ರದ ಸಂಹೃತಿ (enfoldment) ಯೇ ಬಿಂದು. ಆಯಾಮರಹಿತವಾದಂಥ ಬಿಂದುವಿನ (ಅಂದ ಮೇಲೆ ಗ್ರಾಹ್ಯವಾದಂಥ) ಗರ್ಭದಿಂದ ಸರ್ವವನ್ನೂ ವ್ಯಾಪಿಸಿರುವ ಆಕಾಶ (space) ಹೊರಹೊಮ್ಮುವ ಪ್ರತೀಕ ತಾಂತ್ರಿಕ ಗ್ರಂಥಗಳಲ್ಲಿ ಹಲವು ಸಲ ಬಂದಿದೆ. ದೇಹವೇ ಆಕಾಶ, ಪರಿಶುದ್ಧ ಪ್ರಜ್ಞೆಯೇ ಬಿಂದು. ಆದ್ದರಿಂದಲೇ ನಿರಾಕಾರವಾಗಿರುವ ಬಿಂದುವಿನಿಂದ ಆಕಾರವಿರುವ ಚಕ್ರದ ಕಡೆಗೆ ಹಾಗೂ ಚಕ್ರದ ಮೂರ್ತ ರೂಪದಿಂದ ಅಮೂರ್ತವಾದ ಬಿಂದುವಿನ ಕಡೆ - ಹೀಗೆ ಚಕ್ರಕ್ಕೆ ಸಂಬಂಧಿಸಿದ ಉಪಾಸನೆಗಳಲ್ಲಿ ಎರಡು ರೀತಿಯ ಚಲನೆಗಳಿವೆ. ಚಕ್ರ ಈ ಎರಡೂ ಚಲನೆಗಳಿಗೆ ಅನುವು ಮಾಡಿಕೊಡುವ ಉಪಕರಣ ಅಥವಾ ಯಂತ್ರವಾಗಿದೆ.

ನಮ್ಮ ಪ್ರಕಟಣೆಗಳು

1.	ಋಗ್ವೇದವನ್ನು ಯಾಕೆ ಓದಬೇಕು	ರೂ. 50.00
2.	ನಿಶ್ಚಿತ ಪ್ರಯೋಜನಗಳಿಗಾಗಿ ಪ್ರಾಣಾಯಾಮ ಹಾಗೂ ಆಸನಗಳು	ರೂ. 35.00
3.	ಪುನರುಜ್ಜೀವನದತ್ತ ಹಿಂದೂ ಧರ್ಮ	ರೂ. 35.00
4.	ಶ್ರೀ ಅರೋಬಿಂದೊ	ರೂ. 35.00
5.	ಸಾವಿನ ಸೊಬಗು ಹಾಗೂ ಪುನರ್ಜನ್ಮದ ಮರ್ಮ	ರೂ. 25.00
6.	ಅಂತರ್ಯಜ್ಞ	ರೂ. 20.00
7.	ಆಧುನಿಕರಿಗಾಗಿ ತಂತ್ರ ದೀಪಿಕಾ	ರೂ. 15.00
8.	ನೆಮ್ಮದಿಯ ಬಾಳು ನಿಮ್ಮದಾಗಿಸಿಕೊಳ್ಳಿ	ರೂ. 35.00
9.	ಸಾವಿತ್ರಿ	ರೂ. 25.00
10.	ಸರಸ್ವತಿ – ದೈವೀಪ್ರೇರಣೆಯ ಅಧಿದೇವತೆ	ರೂ. 10.00
11.	ಇಂದ್ರ ಸಹಸ್ರನಾಮ ಸ್ತೋತ್ರಮ್	ರೂ. 20.00
12.	ಆಧುನಿಕರಿಗಾಗಿ ವೇದ ಜ್ಞಾನ	ರೂ. 10.00
13.	ಮಂತ್ರಗಳ ಮೂಲಕ ಪರಮಾನಂದ ಪ್ರಾಪ್ತಿ	ರೂ. 10.00
14.	ಅಗ್ನಿ ಮತ್ತು ಇಂದ್ರ ಶಕ್ತಿ	ರೂ. 10.00
15.	ಶ್ರೀ ಮಾತೆ	ರೂ. 45.00
16.	ಯಂತ್ರಗಳು	ರೂ. 30.00
17.	ಆರೋಗ್ಯಮಯ ಜೀವನ	ರೂ. 18.00
18.	ಭೂ ಸೂಕ್ತ (ಅಥರ್ವ ವೇದ)	ರೂ. 15.00

ಯಂತ್ರಗಳು

ಮಂತ್ರದ ಇನ್ನೊಂದು ಮಾಧ್ಯಮ ಎಂದರೆ ಯಂತ್ರ, ಅಥವಾ ವ್ಯಕ್ತಿಯೊಬ್ಬನ ಒಳಗೆ ಅಮೂರ್ತ ಸ್ತರದಲ್ಲಿ ಕೆಲಸ ಮಾಡುವ ಮತ್ತು ನಮಗೆ ಗೊತ್ತಿರುವ ಜಗತ್ತಿನ ಒಳಗೇ ಅದೃಶ್ಯವಾಗಿರುವ ಶಕ್ತಿಗಳು, ಬಲಗಳು ಮತ್ತು ದಿಕ್‌ಪ್ರಮಾಣರೇಖೆಗಳ ದೃಶ್ಯರೂಪದ ಪ್ರತಿಮೆಗಳು ಎನ್ನಬಹುದು. ಯಂತ್ರವು ಸಾಮಾನ್ಯವಾಗಿ ವ್ಯಕ್ತಿ ಮತ್ತು ಅವನ ಸುತ್ತ ಇರುವ ಭೌತಿಕ ಜಗತ್ತನ್ನು ಒಳಗೊಂಡ ಅವಿಚ್ಛಿನ್ನ ಪ್ರಜ್ಞೆಗೆ (undifferentiated conciousness) ತೀರಾ ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ. ಮಂತ್ರವು ಶಾಬ್ದಿಕ ಸಂಕೇತಗಳನ್ನು ಬಳಸಿದರೆ ಯಂತ್ರವು ಚಿತ್ರ ವಿನ್ಯಾಸಗಳನ್ನು ಬಳಸುತ್ತದೆ. ಮಂತ್ರದಲ್ಲಿ ಮನುಷ್ಯನ ಇಡೀ ಭಾಷಿಕ ವರ್ತನೆಯು ಅತ್ಯಗತ್ಯವಾದ ಮತ್ತು ಅಕ್ಷಯವಾದ ಶಬ್ದಘಟಕಗಳಾದರೆ (ಬೀಜಾಕ್ಷರಗಳು), ಯಂತ್ರದಲ್ಲಿ ಮನುಷ್ಯನಿಗೆ ದಕ್ಕುವ ಇಡೀ ದೃಗ್ಗೋಚರ ಜಗತ್ತು ತೀರಾ ಅತ್ಯಗತ್ಯವಾದ ಮತ್ತು ಜಾಗತಿಕ ರೂಪಘಟಕಗಳಾಗುತ್ತವೆ (ಬಿಂದು, ವೃತ್ತ, ತ್ರಿಕೋನ, ಚೌಕ ಹೀಗೆ).

ಯಂತ್ರಗಳಲ್ಲಿ ಹಲವು ಬಗೆಗಳಿವೆ. ರಕ್ಷಣಾ ಯಂತ್ರ, ವಶೀಕರಣ ಯಂತ್ರ, ಉಪಕಾರಿ ಯಂತ್ರ, ಅಪಕಾರಿ ಯಂತ್ರ ಇತ್ಯಾದಿ. ಇವುಗಳಲ್ಲಿ ಕೆಲವು ಧಾರಣ ಯಂತ್ರಗಳಾಗಿದ್ದರೆ ಮತ್ತೆ ಕೆಲವು ಪೂಜನ ಯಂತ್ರಗಳು. ಇಂಥ ಯಂತ್ರಗಳನ್ನು ಶ್ರದ್ಧೆ, ಭಕ್ತಿಗಳಿಂದ ಪೂಜೆ ಮಾಡುವ, ಧರಿಸುವ ಪರಂಪರೆ ಇಂದಿಗೂ ಪ್ರಚಲಿತವಾಗಿದೆ. ಈ ಕುರಿತು ಅಧಿಕೃತ ಮಾಹಿತಿಯನ್ನು ಈ ಪುಸ್ತಕ ನೀಡುತ್ತದೆ.

ಈ ಪುಸ್ತಕವನ್ನು ರಚಿಸಿದ ವೇದಕಮಲ ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರ ರಾವ್ ರವರು ವಿದ್ವತ್ ವಲಯದ ಶಿಖರಪ್ರಾಯದಂತಿದ್ದಾರೆ. ವೇದ, ಆಗಮ ಶಾಸ್ತ್ರಗಳ ಕುರಿತು ಅವರು ನಡೆಸಿದ ಅಧ್ಯಯನ, ಅಧ್ಯಾಪನಗಳ ಆಳ, ವ್ಯಾಪ್ತಿ ಅಪಾರವಾದದ್ದು.

ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ
ಬೆಂಗಳೂರು - 560 011

ISBN 81-7997-012-8

ರೂ. : 30 /-